## ಅಧ್ಯಾಯ – ೪

# ಕೃಷಿ ಮತ್ತು ನೀರಾವರಿ

ಮಂಡ್ಯ ಜಿಲ್ಲೆಗೆ ನೀರಾವರಿ ಸೌಲಭ್ಯ ದೊರೆಯುವ ಮುನ್ನ ಮಳೆಯಾಶ್ರಯದಲ್ಲಿ ಮಾತ್ರ ಬೆಳೆಗಳನ್ನು ಬೆಳೆಯಲಾಗುತ್ತಿತ್ತು. ಆಗ ಎಲ್ಲೆಡೆ ಪ್ರಮುಖವಾಗಿ ರಾಗಿ, ಭತ್ತ ಮತ್ತು ಹುರಳಿ ಬೆಳೆಗಳನ್ನು ಬೆಳೆಯಲಾಗುತ್ತಿತ್ತು. ಕೃಷ್ಣರಾಜಸಾಗರದಿಂದ ನೀರಾವರಿಗೆ ನೀರನ್ನು ಕೊಡಲು ಪ್ರಾರಂಭಿಸಿದ ಮೇಲೆ ಜಿಲ್ಲೆಯ ಬಹುಭಾಗ ಹಸಿರಿನಿಂದ ಕಂಗೊಳಿಸಿತು. ಮೊದಲು ರಾಗಿಯ ಮುಖ್ಯ ಸ್ಥಳೀಯ ತಳಿಗಳಾದ ಹುಲ್ಲುಬಿಲೆ, ಮಾದಯ್ಯನಗಿರಿ, ಗಿಡ್ಡರಾಗಿ, ಕರಿಗಿಡ್ಡ, ಜೇನುಮುಡ್ಡ, ಮಜ್ಜಿಗೆ, ಗೆಡೆಸಂಗ, ರುದ್ರಜಡೆ, ಹಸರುಕಂಬಿ, ದೊಡ್ಡ ಗೌಬಿಲೆ ಮುಂತಾದ ತಳಿಗಳನ್ನು ಬೆಳೆಯಲಾಗುತ್ತಿತ್ತು. ಅನಂತರ ಹೆಚ್ ೨೨, ಕೆ. ೧, ಮತ್ತು ಕೆ. ೨ ಎಂಬ ಉತ್ತಮ ಇಳುವರಿಯನ್ನು ಕೊಡುವ ತಳಿಗಳನ್ನು ರಾಗಿ ಬೆಳೆಯುವ ಪ್ರದೇಶದ ಸುಮಾರು ಶೇಕಡ ಐದರಷ್ಟು ಪ್ರದೇಶದಲ್ಲಿ ಬೆಳೆಯಲು ಪ್ರಾರಂಭಿಸಲಾಯಿತು. ಅದೇ ಸಮಯದಲ್ಲಿ ಅರುಣ ಎಂಬ ಅಧಿಕ ಇಳುವರಿ ಕೊಡುವ ತಳಿಯನ್ನು ಸಹ ಬೆಳೆಯಲು ಪ್ರಾರಂಭ ಮಾಡಿದಾಗ ಉತ್ತಮ ಇಳುವರಿ ಕೊಡುವ ತಳಿಗಳ ಬಗ್ಗೆ ಪ್ರಜ್ಞೆ ಮೂಡಲು ಪ್ರಾರಂಭವಾಯಿತು. ಇದು ಹೆಚ್ಚು ಇಳುವರಿ ನೀಡುವ ತಳಿಗಳಾದ ಉದಯ ಹಾಗೂ ಪೂರ್ಣ ರಾಗಿ ತಳಿಗಳ ಬಿಡುಗಡೆಗೆ ನಾಂದಿಯಾಯಿತು. ಬತ್ತವನ್ನು ಮುಖ್ಯವಾಗಿ ನೀರಾವರಿ ಬೆಳೆಯಾಗಿ ಬೆಳೆಯಲಾಗುತ್ತಿತ್ತು. ಅಧಿಕ ಇಳುವರಿ ಕೊಡುವ ತಳಿಗಳು ಪ್ರಚಾರಕ್ಕೆ ಬರುವ ಮೊದಲು ಬೆಳೆಯಲಾಗುತ್ತಿದ್ದ ತಳಿಗಳೆಂದರೆ ಸ್ಥಳೀಯವಾದ ದೊಡ್ಡಬತ್ತ, ಕರಿಕಾಳು, ಹೊಟ್ಟೆಕೆಂಭತ್ತಿ ಹಾಗೂ ಪುಟ್ಟಬತ್ತ. ಇವು ದೀರ್ಘಾವಧಿ ತಳಿಗಳಾಗಿದ್ದು, ಸರಾಸರಿ ಇಳುವರಿ ಒಂದು ಎಕರೆಗೆ ಸುಮಾರು ಎಂಟು ಕ್ವಿಂಟಾಲ್ ಮಾತ್ರ ಅಗಿತ್ತು.

ಆಧುನಿಕ ಬೇಸಾಯ ಪದ್ಧತಿಗಳ ಪಾದಾರ್ಪಣೆಯಾದ ನಂತರ ಹಸಿರು ಕ್ರಾಂತಿಯ ಪ್ರಭಾವ ತಾಗಿ, ಜಿಲ್ಲೆ ಪ್ರಗತಿಪಥದಲ್ಲಿ ಸಾಗಿದೆ. ಹಿಂದಿನ ಬರಡು ಭೂಮಿಯ ಸ್ಥಾನದಲ್ಲಿದ್ದ ಜಿಲ್ಲೆಯ ಬಹುತೇಕ ಭಾಗಗಳಲ್ಲಿ ಪ್ರಸ್ತುತ ಹಸಿರು ಗದ್ದೆಗಳು ಆಕ್ರಮಿಸಿವೆ. ಈ ಜಮೀನುಗಳಲ್ಲಿ ಕಬ್ಬು, ತೆಂಗುಗಳ ಜೊತೆಗೆ ರೇಷ್ಮೆ ಬೆಳೆಗಾರರು ಹಿಪ್ಪುನೇರಳೆ ಬೆಳೆಯಲಾಗಿ ಜಿಲ್ಲೆಯು ಹೊನ್ನಾಡಾಗಿ ಮಾರ್ಪಟ್ಟಿದೆ. ಬೆಳೆಗಳ ಅಭಿವೃದ್ಧಿಗೆ ಹೆಚ್ಚಿನ ಸಂಶೋಧನೆಯನ್ನು ಮಾಡಲು ಅನುಕೂಲವಾಗುವಂತೆ ಕೃಷಿ ವಿಶ್ವವಿದ್ಯಾನಿಲಯದ ಸಂಶೋಧನಾ ಕೇಂದ್ರಗಳು ಅಸ್ತಿತ್ವಕ್ಕೆ ಬಂದವು. ೧೯೩೧ ರಲ್ಲಿ

ಸ್ಥಾಪಿತವಾದ ಪ್ರಾದೇಶಿಕ ಸಂಶೋಧನಾ ಕೇಂದ್ರ (ಇರ್ವಿನ್/ವಿಶ್ವೇಶ್ವರಯ್ಯ ನಾಲಾ ಫಾರಂ – ವಿ.ಸಿ.ಫಾರಂ)ವನ್ನು ೧೯೬೫ ರಲ್ಲಿ ಕೃಷಿ ವಿಶ್ವವಿದ್ಯಾನಿಲಯಕ್ಕೆ ವರ್ಗಾಯಿಸಲಾಯಿತು. ನಾಗಮಂಗಲದಲ್ಲಿ ೧೯೮೩ರಲ್ಲಿ ಕೃಷಿ ಸಂಶೋಧನಾ ಕೇಂದ್ರವನ್ನೂ ಸ್ಥಾಪಿಸಲಾಯಿತು.

ಮೈಸೂರು ರಾಜ್ಯದಲ್ಲಿ ೧೯೫೩ ರಲ್ಲಿ ಪ್ರಚಾರಕ್ಕೆ ಬಂದ ಜಪಾನೀ ಸುಧಾರಿತ ಪದ್ಧತಿಯನ್ನು ಮೊಟ್ಟ ಮೊದಲು ಮಂಡ್ಯ ಜಿಲ್ಲೆಯಲ್ಲಿ ಪರಿಚಯಿಸಲಾಯಿತು. ಹೆಚ್ಚು ಇಳುವರಿ ಕೊಡುವ ಮತ್ತು ಕೊಯಮತ್ತೂರು ಸಣ್ಣ ಬತ್ತದಿಂದ ಆಯ್ಕೆಯಾದ ತಳಿಗಳಾದ ಎಸ್ ೬೬೧, ೯೯, ೧೩೯, ೭೦೧, ೭೪೯, ೭೮೪ ಮತ್ತು ೧೯೯೨ ತಳಿಗಳು ಬಳಕೆಗೆ ಬಂದವು. ಇದರೊಂದಿಗೆ ಸಾರಜನಕ ರಾಸಾಯನಿಕ ಗೊಬ್ಬರದ ಉಪಯೋಗದ ಅರಿವಾಗಲು ಪ್ರಾರಂಭವಾಯಿತು. ಈ ಎಲ್ಲಾ ಸುಧಾರಣೆಗಳಿಂದಾಗಿ ಇಳುವರಿ ಸುಮಾರು ಎರಡು ಪಟ್ಟು ಹೆಚ್ಚಾಗಲು ಸಾಧ್ಯವಾಯಿತು. ಕಬ್ಬಿನ ಬೆಳೆಯಲ್ಲಿ ಮೊದಲು ಹೆಚ್ಚು ಪ್ರಚಾರದಲ್ಲಿದ್ದ ತಳಿಗಳೆಂದರೆ ರಸದಾಳಿ (೧೨ ತಿಂಗಳುಗಳ ಅವಧಿ) ಹಾಗೂ ಪಟ್ಟಾಪಟ್ಟಿ (೧೪ ತಿಂಗಳುಗಳ ಅವಧಿ). ಇವು ಬೆಲ್ಲವನ್ನು ತಯಾರಿಸಲು ಯೋಗ್ಯವಾದ ಕಬ್ಬಿನ ತಳಿಗಳಾಗಿದ್ದವು.

## ಭೂ ಉಪಯೋಗ

ಮಂಡ್ಯ ಜಿಲ್ಲೆಯ ಒಟ್ಟು ಭೌಗೋಳಿಕ ವಿಸ್ತೀರ್ಣ ೪.೯೮ ಲಕ್ಷ ಹೆಕ್ಟೇರ್‌ಗಳಾಗಿದ್ದು ಇದು ರಾಜ್ಯದ ಒಟ್ಟು ಭೌಗೋಳಿಕ ವಿಸ್ತೀರ್ಣದ ಶೇ.೨.೬೨ ರಷ್ಟಿದೆ. ನಾಗಮಂಗಲ ತಾಲೂಕು ಜಿಲ್ಲೆಯ ಒಟ್ಟು ಭೌಗೋಳಿಕ ವಿಸ್ತೀರ್ಣದ ಶೇ.೨೦.೮೫ ರಷ್ಟು ಭಾಗವನ್ನು ಹೊಂದಿದ್ದು ಮೊದಲ ಸ್ಥಾನದಲ್ಲಿದೆ. ಶ್ರೀರಂಗಪಟ್ಟಣ ತಾಲೂಕು ಜಿಲ್ಲೆಯ ಒಟ್ಟು ಭೌಗೋಳಿಕ ವಿಸ್ತೀರ್ಣದ ಶೇ. ೭.೧೮ ರಷ್ಟು ಭಾಗವನ್ನು ಹೊಂದಿದೆ. ಅರಣ್ಯ ಪ್ರದೇಶದ ಒಟ್ಟು ವಿಸ್ತೀರ್ಣ ೦.೨೪ ಲಕ್ಷ ಹೆಕ್ಟೇರ್‌ಗಳಾಗಿದ್ದು, ಇದು ಜಿಲ್ಲೆಯ ಒಟ್ಟು ಭೌಗೋಳಿಕ ಪ್ರದೇಶದ ಶೇ. ೪.೭೭ ಮತ್ತು ರಾಜ್ಯದ ಒಟ್ಟು ಅರಣ್ಯ ಪ್ರದೇಶದ ಶೇ.೦.೭೮ ರಷ್ಟಿದೆ. ಮಳವಳ್ಳಿ ಮತ್ತು ಕೃಷ್ಣರಾಜಪೇಟೆ ತಾಲೂಕುಗಳು ಜಿಲ್ಲೆಯ ಒಟ್ಟು ಅರಣ್ಯ ಪ್ರದೇಶದ ಶೇ. ೭೧ರಷ್ಟನ್ನು ಹೊಂದಿವೆ. ಜಿಲ್ಲೆಯಲ್ಲಿ ಒಟ್ಟು ಬಿತ್ತನೆಯಾದ ಪ್ರದೇಶ ೨.೪೭ ಲಕ್ಷ ಹೆಕ್ಟೇರ್‌ಗಳಾಗಿದ್ದು, ಇದು ಜಿಲ್ಲೆಯ ಒಟ್ಟು ಭೌಗೋಳಿಕ ವಿಸ್ತೀರ್ಣದ ಶೇ.೪೦.೭ ರಷ್ಟು ಮತ್ತು ರಾಜ್ಯದ ಒಟ್ಟು ನಿವ್ವಳ ಬಿತ್ತನೆಯಾದ ಪ್ರದೇಶದ ಶೇ.೨.೩೩ ರಷ್ಟು ಆಗಿದೆ. ನಾಗಮಂಗಲ ತಾಲೂಕಿನಲ್ಲಿ ನಿವ್ವಳ ಬಿತ್ತನೆಯಾದ ಪ್ರದೇಶವು ಜಿಲ್ಲೆಯ ನಿವ್ವಳ ಬಿತ್ತನೆಯಾದ ಪ್ರದೇಶದ ಶೇ. ೧೭.೩೯ ರಷ್ಟಿದೆ. ಶ್ರೀರಂಗಪಟ್ಟಣ ತಾಲೂಕಿನಲ್ಲಿ ಈ ಪ್ರಮಾಣವು ಶೇ.೮.೮೮ ರಷ್ಟಿದೆ. ೧೯೯೯–೨೦೦೦ನೇ ಸಾಲಿನ ವಾರ್ಷಿಕ ಋತುಮಾನ ಮತ್ತು ಬೆಳೆ ವರದಿ ಪ್ರಕಾರ ಜಿಲ್ಲೆಯ ಭೂ ಉಪಯೋಗದ ವಿವರಗಳನ್ನು ಹೆಕ್ಟೇರುಗಳಲ್ಲಿ, ಕೋಷ್ಟಕ ೪.೧ ರಲ್ಲಿ ನೀಡಿದೆ.

**ಕೋಷ್ಟಕ ೪.೧ ಜಿಲ್ಲೆಯ ಭೂ ಉಪಯೋಗದ ವಿವರ (ಹೆಕ್ಟೇರುಗಳಲ್ಲಿ)**

| ಕ್ರ.ಸಂ | ವಿವರ | ಕೃಷ್ಣರಾಜ ಪೇಟೆ | ಮದ್ದೂರು | ಮಳವಳ್ಳಿ | ಮಂಡ್ಯ | ನಾಗಮಂಗಲ | ಪಾಂಡವ ಪುರ | ಶ್ರೀರಂಗ ಪಟ್ಟಣ | ಜಿಲ್ಲೆಯ ಮೊತ್ತ |
|---|---|---|---|---|---|---|---|---|---|
| ೧ | ೨ | ೩ | ೪ | ೫ | ೬ | ೭ | ೮ | ೯ | ೧೦ |
| ೧ | | | | | ಒಟ್ಟು ಭೌಗೋಳಿಕ ವಿಸ್ತೀರ್ಣ | | | | |
| ಅ | ಮೋಜಣಿದಾರರುಗಳ ಪರಿಶೀಲನೆಯ ಮೇರೆಗೆ | ೯೧,೫೫೧ | ೬೧,೮೪೬ | ೮೦,೯೪೯ | ೭೧,೫೧೨ | ೧,೦೩,೮೮೫ | ೫೨,೭೪೩ | ೩೫,೭೫೮ | ೪,೯೮,೨೪೪ |
| ಆ | ಗ್ರಾಮಸಂಬಂಧವಾದ ಕಾಗದ ಪತ್ರಗಳ ಮೇರೆಗೆ | ೯೧,೫೫೧ | ೬೧,೮೪೬ | ೮೦,೯೪೯ | ೭೧,೫೧೨ | ೧,೦೩,೮೮೫ | ೫೨,೭೪೩ | ೩೫,೭೫೮ | ೪,೯೮,೨೪೪ |

| ೧ | ೨ | ೩ | ೪ | ೫ | ೬ | ೭ | ೮ | ೯ | ೧೦ |
|---|---|---|---|---|---|---|---|---|---|
| ೨ | ಅರಣ್ಯ | ೫,೭೬೭ | ೨೦ | ೧೨,೧೭೯ | ೧,೫೦೭ | ೨,೫೧೬ | ೨,೦೫೧ | ೭೨೫ | ೨೪,೭೬೫ |
| **೩** | | | | **ಸಾಗುವಳಿಗೆ ದೊರಕದ ಪ್ರದೇಶ** | | | | | |
| ಅ | ವ್ಯವಸಾಯವನ್ನು ಬಿಟ್ಟು ಇತರ ಉದ್ದೇಶಗಳಿಗೆ ಉಪಯೋಗಿಸಿಕೊಂಡಿರುವ ಪ್ರದೇಶ | ೮,೯೫೯ | ೧೮,೫೨೭ | ೬,೬೪೫ | ೮,೯೬೦ | ೯,೨೭೨ | ೪,೭೫೭ | ೩,೬೪೯ | ೬೦,೭೭೯ |
| ಆ | ಬಂಜರು ಮತ್ತು ವ್ಯವಸಾಯ ಮಾಡಲು ಸಾಧ್ಯವಿಲ್ಲದ ಪ್ರದೇಶ | ೩,೫೨೦ | ೭೪೮ | ೧,೮೪೭ | ೩,೯೩೩ | ೬,೮೮೬ | ೨,೮೩೮ | ೧,೮೧೨ | ೨೧,೫೮೪ |
| **೪** | | | | **ಬೀಳು ರಹಿತ ಉಳುಮೆ ಆಗದ ಜಮೀನು** | | | | | |
| ಅ | ಇತರೆ ಸಾಗುವಳಿಗೆ ಯೋಗ್ಯವಾದ ಬಂಜರು ಪ್ರದೇಶ | ೬,೫೧೩ | ೧೨೮ | ೨,೪೨೦ | ೨,೩೨೦ | ೨೬,೧೭೮ | ೩,೯೧೪ | ೫೦೦ | ೪೧,೯೭೩ |
| ಆ | ಖಾಯಂ ಗೋಮಾಳ ಮತ್ತು ಇತರ ಹುಲ್ಲುಗಾವಲು | ೧೫,೪೨೩ | ೧೧೦ | ೮,೮೦೭ | ೬,೮೧೫ | ೪೯೫ | ೩,೬೬೧ | ೨,೮೮೫ | ೩೮,೧೯೬ |
| ಇ | ಬಿತ್ತನೆಯಾಗದಿರುವ ಪ್ರದೇಶದಲ್ಲಿ ನಮೂದಿಸಿಲ್ಲದ ವಿವಿಧ ವೃಕ್ಷ ಮತ್ತು ತೋಪುಗಳಿರುವ ಜಮೀನುಗಳು | ೩೦೦ | ೯೬ | ೪೮೩ | ೨೦೧ | ೮೨೨ | ೯೭೫ | ೩೦೦ | ೩,೧೭೭ |
| **೫** | | | | **ಬೀಳು ಜಮೀನು** | | | | | |
| ಅ | ಚಾಲ್ತಿ ಸಾಗುವಳಿಯಲ್ಲಿಲ್ಲದ ಬೀಳು ಬಿಟ್ಟ ಜಮೀನು | ೨,೯೮೭ | ೨,೫೩೭ | ೫,೭೫೪ | ೬,೪೫೪ | ೧೪,೭೦೭ | ೩,೯೫೧ | ೩,೫೭೭ | ೩೯,೯೬೭ |
| ಆ | ಇತರ ಬೀಳು ಜಮೀನು | ೨,೯೦೦ | ೧೪೬ | ೨,೧೯೫ | ೨,೧೩೭ | ೪,೪೭೭ | ೭,೯೩೦ | ೧,೩೫೬ | ೨೧,೧೪೧ |
| | | | | **ಬಿತ್ತನೆಯಾಗಿರುವ ಪ್ರದೇಶ** | | | | | |
| ೬ | ಬಿತ್ತನೆಯಾಗಿರುವ ನಿವ್ವಳ ಪ್ರದೇಶ | ೪೫,೧೮೨ | ೩೯,೫೨೪ | ೪೦,೬೧೯ | ೩೯,೧೮೫ | ೩೮,೫೩೨ | ೨೨,೬೬೬ | ೨೦,೯೫೪ | ೨,೪೬,೬೬೨ |
| ೭ | ಒಟ್ಟು ಬಿತ್ತನೆಯಾಗಿರುವ ಪ್ರದೇಶ | ೫೧,೬೭೫ | ೪೬,೪೩೧ | ೪೫,೭೨೮ | ೪೫,೮೦೮ | ೪೪,೩೬೧ | ೨೫,೭೭೪ | ೨೫,೬೧೦ | ೨,೮೫,೩೮೭ |
| ೮ | ಒಂದಕ್ಕಿಂತ ಹೆಚ್ಚು ಬಾರಿ ಬಿತ್ತನೆಯಾಗಿರುವ ಪ್ರದೇಶ | ೬,೪೯೩ | ೬,೯೦೭ | ೫,೧೦೯ | ೬,೬೨೩ | ೫,೮೨೯ | ೩,೧೦೮ | ೪,೬೫೬ | ೩೮,೭೨೫ |

ಆಧಾರ : ಮಂಡ್ಯ ಜಿಲ್ಲಾ ಅಂಕಿ-ಅಂಶಗಳ ನೋಟ ೧೯೯೮-೯೯. , ಜಿಲ್ಲಾ ಪಂಚಾಯತ್, ಮಂಡ್ಯ

## ಕೃಷಿ ಭೂ ಹಿಡುವಳಿಗಳು

ಮಂಡ್ಯ ಜಿಲ್ಲೆಯಲ್ಲಿ ನಡೆಸಿದ ಕೃಷಿ ಗಣತಿಯಂತೆ ಇರುವ ಭೂ ಹಿಡುವಳಿಗಳ ಸಂಖ್ಯೆ ಮತ್ತು ವಿಸ್ತೀರ್ಣದ ವಿವರಗಳನ್ನು ಮುಂದಿನ ಕೋಷ್ಟಕ ೪.೨ ರಲ್ಲಿ ನೀಡಿದೆ.

**ಕೋಷ್ಟಕ ೪.೨ ಕೃಷಿ ಗಣತಿಯಂತೆ ಭೂ ಹಿಡುವಳಿಗಳ ವಿವರ**

| ಕೃಷಿ ಗಣತಿಯ ವರ್ಷ | ಕೃಷಿ ಭೂ ಹಿಡುವಳಿಗಳ ಸಂಖ್ಯೆ (ಲಕ್ಷಗಳಲ್ಲಿ) | ಕೃಷಿ ಭೂ ಹಿಡುವಳಿಗಳ ವಿಸ್ತೀರ್ಣ (ಲಕ್ಷ ಹೆಕ್ಟೇರ್‌ಗಳಲ್ಲಿ) | ಸರಾಸರಿ ಭೂ ಹಿಡುವಳಿ ವಿಸ್ತೀರ್ಣ (ಹೆಕ್ಟೇರ್‌ಗಳಲ್ಲಿ) |
|---|---|---|---|
| ೧೯೭೦-೭೧ | ೨.೧೬ | ೨.೯೫ | ೧.೩೭ |
| ೧೯೭೬-೭೭ | ೨.೨೪ | ೨.೭೬ | ೧.೨೩ |
| ೧೯೮೦-೮೧ | ೨.೮೯ | ೩.೧೨ | ೧.೦೮ |
| ೧೯೯೦-೯೧ | ೩.೯೩ | ೩.೨೬ | ೦.೮೩ |
| ೧೯೯೫-೯೬ | ೪.೩೭ | ೩.೩೪ | ೦.೭೬ |

೧೯೯೦-೯೧ ರ ಕೃಷಿ ಗಣತಿಯಂತೆ ಜಿಲ್ಲೆಯಲ್ಲಿ ತಾಲೂಕುವಾರು ಕೃಷಿ ಭೂಹಿಡುವಳಿ ವಿವರವನ್ನು ಮುಂದಿನ ಕೋಷ್ಟಕ ೪.೩ರಲ್ಲಿ ನೀಡಿದೆ.

**ಕೋಷ್ಟಕ ೪.೩ ೧೯೯೦-೯೧ರ ಕೃಷಿ ಗಣತಿಯಂತೆ ಭೂ ಹಿಡುವಳಿಗಳ ಸಂಖ್ಯೆ (ಸಾವಿರಗಳಲ್ಲಿ) ಮತ್ತು ವಿಸ್ತೀರ್ಣ (ಸಾವಿರ ಹೆಕ್ಟೇರುಗಳಲ್ಲಿ)**

| ವಿವರ | ಕೃಷ್ಣರಾಜಪೇಟೆ | ಮದ್ದೂರು | ಮಳವಳ್ಳಿ | ಮಂಡ್ಯ | ನಾಗಮಂಗಲ | ಪಾಂಡವಪುರ | ಶ್ರೀರಂಗಪಟ್ಟಣ | ಜಿಲ್ಲಾ ಮೊತ್ತ |
|---|---|---|---|---|---|---|---|---|
| **೧. ಅತಿ ಸಣ್ಣ (ಒಂದು ಹೆಕ್ಟೇರ್‌ಗೂ ಕಡಿಮೆ ಹಿಡುವಳಿ)** | | | | | | | | |
| ೧. ಸಂಖ್ಯೆ | ೪೩.೯೧ | ೪೮.೩೪ | ೪೯.೮೧ | ೫೬.೪೩ | ೪೧.೭೭ | ೨೧.೧೮ | ೨೦.೫೨ | ೨೮೭.೯೯ |
| ೨. ವಿಸ್ತೀರ್ಣ | ೧೬.೮೧ | ೧೭.೧೫ | ೧೮.೯೧ | ೧೯.೧೫ | ೧೫.೭೦ | ೧೦.೭೪ | ೮.೦೦ | ೧೦೬.೪೦ |
| **೨. ಸಣ್ಣ (೧-೨ ಹೆಕ್ಟೇರ್)** | | | | | | | | |
| ೧. ಸಂಖ್ಯೆ | ೧೨.೨೫ | ೯.೬೫ | ೧೧.೦೫ | ೧೦.೩೭ | ೧೨.೧೫ | ೭.೦೫ | ೫.೨೯ | ೬೭೮.೦೯ |
| ೨. ವಿಸ್ತೀರ್ಣ | ೧೭.೦೮ | ೧೩.೧೯ | ೧೫.೨೮ | ೧೪.೭೦ | ೧೭.೦೫ | ೯.೮೨ | ೭.೩೩ | ೯೪.೪೪ |
| **೩. ಅರೆ ಮಧ್ಯಮ (೨-೪ ಹೆಕ್ಟೇರ್)** | | | | | | | | |
| ೧. ಸಂಖ್ಯೆ | ೩.೩೬ | ೪.೦೬ | ೪.೪೬ | ೫.೦೩ | ೫.೯೩ | ೩.೮೯ | ೩.೧೨ | ೨೯೮.೨೫ |
| ೨. ವಿಸ್ತೀರ್ಣ | ೧೪.೪೦ | ೧೦.೮೧ | ೧೧.೮೭ | ೧೩.೭೧ | ೧೬.೦೮ | ೭.೬೯ | ೫.೬೯ | ೮೦.೨೪ |
| **೪. ಮಧ್ಯಮ (೪-೧೦ ಹೆಕ್ಟೇರ್)** | | | | | | | | |
| ೧. ಸಂಖ್ಯೆ | ೧.೩೨ | ೦.೯೯ | ೧.೦೭ | ೧.೧೦ | ೧.೭೩ | ೦.೫೬ | ೦.೪೬ | ೭.೨೩ |
| ೨. ವಿಸ್ತೀರ್ಣ | ೭.೧೩ | ೫.೨೭ | ೫.೮೮ | ೫.೯೭ | ೯.೬೧ | ೨.೯೭ | ೨.೪೮ | ೩೯೩.೦೦ |
| **೫. ದೊಡ್ಡ (೧೦ ಹೆಕ್ಟೇರ್‌ಗೂ ಹೆಚ್ಚು)** | | | | | | | | |
| ೧. ಸಂಖ್ಯೆ | ೦.೦೬೭ | ೦.೦೫೪ | ೦.೦೭೬ | ೦.೦೪೪ | ೦.೦೮೭ | ೦.೦೨೯ | ೦.೦೨೬ | ೦.೩೮೩ |
| ೨. ವಿಸ್ತೀರ್ಣ | ೧.೦೮ | ೦.೭೨ | ೧.೦೪ | ೦.೮೪ | ೧.೩೧ | ೦.೩೬ | ೦.೩೩ | ೫.೬೮ |
| **೬. ಒಟ್ಟು** | | | | | | | | |
| ೧. ಸಂಖ್ಯೆ | ೬೨.೮೮ | ೬೩.೦೯ | ೬೬.೪೮ | ೭೨.೯೭ | ೬೧.೬೬ | ೩೭.೭೦ | ೨೮.೪೫ | ೩೯೩.೨೪ |
| ೨. ವಿಸ್ತೀರ್ಣ | ೫೬.೪೮ | ೪೭.೧೫ | ೫೨.೯೭ | ೫೪.೩೬ | ೫೯.೭೬ | ೩೧.೫೮ | ೨೩.೭೯ | ೩೨೬.೧೦ |

**ಕೋಷ್ಟಕ ೪.೪ ಮಂಡ್ಯ ಜಿಲ್ಲೆಯ ೧೯೯೦–೯೧ ಹಾಗೂ ೧೯೯೫–೯೬ರ ವರ್ಗವಾರು ಕೃಷಿ ಗಣತಿ ವಿವರ**

| ವಿವರ | ಪರಿಶಿಷ್ಟ ಜಾತಿ | ಪರಿಶಿಷ್ಟ ಪಂಗಡ | ಇತರೆ | ಒಟ್ಟು |
|---|---|---|---|---|
| | **೧. ಕೃಷಿ ಭೂ ಹಿಡುವಳಿಗಳ ಸಂಖ್ಯೆ (ಸಾವಿರಗಳಲ್ಲಿ)** | | | |
| ೧. ೧೯೯೦–೯೧ | ೩೦ | ೨ | ೩೬೧ | ೩೯೩ |
| ೨. ೧೯೯೫–೯೬ | ೩೪ | ೧ | ೪೦೨ | ೪೩೭ |
| | **೨. ಕೃಷಿ ಭೂ ಹಿಡುವಳಿಗಳ ವಿಸ್ತೀರ್ಣ (ಸಾವಿರ ಹೆಕ್ಟೇರ್‌ಗಳಲ್ಲಿ)** | | | |
| ೧. ೧೯೯೦–೯೧ | ೨೨ | ೨ | ೩೦೨ | ೩೨೬ |
| ೨. ೧೯೯೫–೯೬ | ೨೫ | ೨ | ೩೦೭ | ೩೩೪ |
| | **೩. ಸರಾಸರಿ ಕೃಷಿ ಭೂ ಹಿಡುವಳಿಗಳ ವಿಸ್ತೀರ್ಣ (ಹೆಕ್ಟೇರ್‌ಗಳಲ್ಲಿ)** | | | |
| ೧. ೧೯೯೦–೯೧ | ೦.೭೪ | ೦.೯ | ೦.೮೪ | ೦.೮೩ |
| ೨. ೧೯೯೫–೯೬ | ೦.೭೪ | ೨.೦ | ೦.೭೬ | ೦.೭೬ |

ಆಧಾರ : ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ, ಬೆಂಗಳೂರು.

## ಮಣ್ಣು

ಜಿಲ್ಲೆಯಲ್ಲಿರುವ ಮಣ್ಣನ್ನು ಮರಳು ಮಿಶ್ರಿತ ಕೆಂಪು ಮಣ್ಣು ಮತ್ತು ಕೆಂಪುಗೋಡು ಮಣ್ಣು ಎಂದು ಎರಡು ಮುಖ್ಯ ಗುಂಪುಗಳನ್ನಾಗಿ ವಿಂಗಡಿಸಬಹುದು. ಅವುಗಳ ವಿವರಣೆ ಈ ರೀತಿ ಇದೆ.

**ಮರಳು ಮಿಶ್ರಿತ ಕೆಂಪು ಮಣ್ಣು:** ಈ ಮಣ್ಣು ಆಮ್ಲಯುಕ್ತವಾಗಿದ್ದು, ನೈಸ್ ಮತ್ತು ಗ್ರಾನೈಟ್ ಶಿಲೆಗಳಿಂದ ರೂಪುಗೊಂಡಿದೆ. ಇದನ್ನು ಮತ್ತೆ ಮೂರು ಉಪಗುಂಪುಗಳನ್ನಾಗಿ ವಿಂಗಡಿಸಬಹುದು. **ಒಳನಾಡಿನ ಮಣ್ಣು :** ಈ ಮಣ್ಣನ್ನು ಉನ್ನತ ಶ್ರೇಣಿಗಳಲ್ಲಿ ಶೇ.೩.೫ ಕ್ಕಿಂತ ಹೆಚ್ಚು ಇಳಿಜಾರು ಇರುವ ಪ್ರದೇಶಗಳಲ್ಲಿ ಕಾಣಬಹುದು. ಇದು ಸಾಧಾರಣ ಆಳವನ್ನು ಹೊಂದಿರುತ್ತದೆ. ಸಾಧಾರಣ ಕೆಂಪು ಮಿಶ್ರಿತ ಕಂದು ಬಣ್ಣದಿಂದ ಅತಿ ಕೆಂಪು ಮತ್ತು ಕಂದು ಮಿಶ್ರಿತವಾಗಿಯೂ ಇರುತ್ತದೆ. ಮೇಲ್ಭಾಗದಲ್ಲಿ ನೊರಜುಕಲ್ಲು, ಗೋಡು ಕಲ್ಲು ಮಿಶ್ರಿತ ಮರಳು ಹಾಗೂ ಮರಳು ಮಿಶ್ರಿತ ಗೋಡಿನ ಭಾಗ ಹೆಚ್ಚಾಗಿದ್ದು ತಳಭಾಗದಲ್ಲಿ ನೊರಜುಗಲ್ಲು, ಮರಳು ಮಿಶ್ರಿತ ಜೇಡಿ ಮಣ್ಣನ್ನು ಕಾಣಬಹುದು. ಮಣ್ಣಿನ ಗುಣ ಸಮಧಾತುವಾಗಿದ್ದು, ಕೆಲವು ಪ್ರದೇಶಗಳಲ್ಲಿ ಹುಳಿಯ ಅಂಶ ಹೆಚ್ಚಿಗೆ ಕಂಡುಬರುತ್ತದೆ. **ನಡುನಾಡಿನ ಮಣ್ಣು:** ಈ ಮಣ್ಣನ್ನು ಸಾಧಾರಣ ಇಳಿಜಾರಿರುವ ನೈಸ್ ಪ್ರದೇಶಗಳಲ್ಲಿ ಕಾಣಬಹುದು. ಇದು ಅತೀ ಹೆಚ್ಚು ಕೆಂಪು ಮಿಶ್ರಿತ ಕಂದು ಬಣ್ಣದಿಂದ ಮತ್ತು ಕಪ್ಪು ಮಿಶ್ರಿತ ಕಂದು ಬಣ್ಣದಿಂದ ಕೂಡಿರುತ್ತದೆ. ಮೇಲ್ಭಾಗದ ಮಣ್ಣು ಮರಳು ಮಿಶ್ರಿತ ಗೋಡಿನಿಂದ ಕೂಡಿದ್ದು, ತಳಭಾಗದ ಮಣ್ಣಿನಲ್ಲಿ ಮರಳು ಮಿಶ್ರಿತ ಜೇಡಿ ಮತ್ತು ನೊರಜುಗಲ್ಲು ಮಿಶ್ರಿತ ಜೇಡಿ ಮಣ್ಣಿರುತ್ತದೆ. ಈ ಮಣ್ಣಿನ ಗುಣ ಸಮಧಾತುವಾಗಿದ್ದು ಕೆಲವು ಕಡೆ ಹುಳಿ ಅಂಶವಿದೆ. ಈ ಮಣ್ಣಿಗೆ ನೀರು ಬಸಿಯುವ ಶಕ್ತಿ ಇದೆ. **ತಗ್ಗು ಪ್ರದೇಶದ ಮಣ್ಣು :** ಈ ಮಣ್ಣು ಸಾಧಾರಣ ಇಳಿಜಾರು ಮತ್ತು ಕಣಿವೆ ಪ್ರದೇಶಗಳಲ್ಲಿ ಕಂಡುಬರುತ್ತದೆ. ಇದು ಕಂದು ಬಣ್ಣ, ಕಪ್ಪು ಬಣ್ಣ ಮತ್ತು ಕಪ್ಪು ಮಿಶ್ರಿತ ಕಂದು ಬಣ್ಣದಿಂದ ಕೂಡಿದೆ. ಇದರ ಗುಣ ಸಾಮಾನ್ಯವಾಗಿ ಸಮಧಾತುವಾಗಿದ್ದು, ಕೆಲವು ಕಡೆ ಸ್ವಲ್ಪ ಮಟ್ಟಿಗೆ ಚೌಳಿನ ಅಂಶವಿದೆ. ನೀರನ್ನು ಹಿಡಿದಿಟ್ಟುಕೊಳ್ಳುವ ಶಕ್ತಿಯನ್ನು ಈ ಮಣ್ಣು ಹೊಂದಿದೆ. ಈ ವಿಧದ ಮಣ್ಣು ಮಂಡ್ಯ, ಮಳವಳ್ಳಿ, ಮದ್ದೂರು, ನಾಗಮಂಗಲ, ಕೃಷ್ಣರಾಜಪೇಟೆ ಮತ್ತು ಪಾಂಡವಪುರ ತಾಲೂಕುಗಳಲ್ಲಿ ಹೆಚ್ಚಿಗೆ ಕಂಡು ಬರುತ್ತದೆ.

**ಕೆಂಪು ಗೋಡು ಮಣ್ಣು:** ಈ ಮಣ್ಣು ಏರು ತಗ್ಗಿರುವ ಗ್ರಾನೈಟ್ ಕಲ್ಲಿನ ಪ್ರದೇಶಗಳಲ್ಲಿ ಕಾಣಬರುತ್ತದೆ. ಇದು ಅಚ್ಚ ಕಂದು ಬಣ್ಣದಿಂದ ಅಚ್ಚ ಕೆಂಪು ಬಣ್ಣ ಹೊಂದಿದ್ದು, ಮೇಲ್ಭಾಗದ ಪದರಗಳಲ್ಲಿ ಮರಳು ಮಿಶ್ರಿತ ಗೋಡಿನಿಂದ ಜೇಡಿ ಮಿಶ್ರಿತ ಗೋಡಿರುವುದು ಕಂಡು ಬರುತ್ತದೆ. ತಳ ಪದರಗಳಲ್ಲಿ ಗೋಡು, ಜೇಡಿ ಮಿಶ್ರಿತ ಗೋಡು ಮತ್ತು ಕೆಲವು ಕಡೆ ನೊರಜುಗಲ್ಲು ಮಿಶ್ರಿತ ಮರಳುಗೋಡು ಮುಂತಾದ ಮಣ್ಣನ್ನು ಕಾಣಬಹುದು. ಈ ಮಣ್ಣಿಗೆ ನೀರು ಬಸಿಯುವ ಗುಣ ಇದೆ. ಈ ವಿಧದ ಮಣ್ಣು ನೀರಾವರಿ ಪ್ರದೇಶಗಳಲ್ಲಿ ಹೆಚ್ಚಾಗಿ ಕಂಡುಬರುತ್ತದೆ. ಇದು ಮಂಡ್ಯ, ಮದ್ದೂರು, ಶ್ರೀರಂಗಪಟ್ಟಣ, ಮಳವಳ್ಳಿ ಮತ್ತು ಪಾಂಡವಪುರ ತಾಲೂಕುಗಳಲ್ಲಿ ಹರಡಿದೆ. ಮಳವಳ್ಳಿ ತಾಲೂಕಿನ ಕೆಲವು ಕಡೆ ಕಪ್ಪು ಮಣ್ಣಿನ ಪ್ರದೇಶವಿದೆ. ಇದರಲ್ಲಿ ಜೇಡಿಮಣ್ಣಿನ ಭಾಗ ಹೆಚ್ಚಾಗಿದೆ. ಇದು ಸವಕಳಿಗೆ ಹೆಚ್ಚು ತುತ್ತಾಗುವುದಿಲ್ಲ.

ಜಿಲ್ಲೆಯಲ್ಲಿ ಕೆರೆಗಳ ಅಚ್ಚುಕಟ್ಟು ಪ್ರದೇಶ ಹಾಗೂ ನಾಲಾ ಪ್ರದೇಶಗಳಲ್ಲಿ ಜೇಡಿಮಣ್ಣು, ಜೇಡಿಮಿಶ್ರಿತ ಗೋಡು, ಮರಳು ಮಿಶ್ರಿತ ಗೋಡು, ಕೆಂಪು ಮರಳು ಮಿಶ್ರಿತ ಗೋಡು, ನೊರಜುಕಲ್ಲು ಮಿಶ್ರಿತ ಗೋಡು ಮಣ್ಣು, ಮುಂತಾದ ವಿವಿಧ ರೀತಿಯ ಫಲವತ್ತಾದ ಮಣ್ಣುಗಳು ಕಂಡುಬರುತ್ತವೆ. ಒಣ ಪ್ರದೇಶಗಳಲ್ಲಿ ಸಾಮಾನ್ಯವಾಗಿ ಕೆಂಪು ನೊರಜುಕಲ್ಲು ಮಿಶ್ರಿತ ಮಣ್ಣು, ಮರಳು ಮಿಶ್ರಿತ ಗೋಡು ಮತ್ತು ಕೆಂಪು ಮಣ್ಣುಗಳು ಕಂಡು ಬರುತ್ತವೆ.

### ಮಣ್ಣು ಆರೋಗ್ಯ ಕೇಂದ್ರ

ಜಿಲ್ಲಾ ಕೇಂದ್ರ ಮಂಡ್ಯದಲ್ಲಿ ೧೯೬೮ರಲ್ಲಿ ಪ್ರಾರಂಭವಾದ **ಮಣ್ಣು ಪರೀಕ್ಷಾ ಕೇಂದ್ರ**ದ ಹೆಸರನ್ನು **'ಮಣ್ಣು ಆರೋಗ್ಯ ಕೇಂದ್ರ'** ಎಂದು ಆನಂತರ ಬದಲಾಯಿಸಲಾಯಿತು. ಮಣ್ಣು ಮಾದರಿ ವಿಶ್ಲೇಷಣೆಯು ಒಂದು ವೈಜ್ಞಾನಿಕ ಪದ್ಧತಿಯಾಗಿದ್ದು, ಭೂ ಫಲವತ್ತತೆಯನ್ನು ಹಾಗೂ ಬೆಳೆಗಳಿಗೆ ದೊರೆಯುವ ಪೋಷಕಾಂಶಗಳನ್ನು ತಿಳಿದು, ಅನವಶ್ಯಕವಾಗಿ ಹೆಚ್ಚು ರಸಗೊಬ್ಬರಗಳ ಬಳಕೆಯನ್ನು ತಪ್ಪಿಸುತ್ತದೆ. ಅಲ್ಲದೇ ಸಮತೋಲನ ರಸಗೊಬ್ಬರಗಳನ್ನು ಬಳಸಿ ಅಧಿಕ ಉತ್ಪಾದನೆ ಪಡೆಯುವಲ್ಲಿ ಮಹತ್ವದ ಪಾತ್ರ ವಹಿಸುತ್ತದೆ. ಈ ಕೇಂದ್ರದಲ್ಲಿ ರೈತರು ಹಾಗೂ ಕೃಷಿ ವಿಸ್ತರಣಾ ಸಿಬ್ಬಂದಿ ಸಂಗ್ರಹಿಸಿದ ಮಣ್ಣು ಮಾದರಿಗಳನ್ನು ವಿಶ್ಲೇಷಿಸಿ ಸೂಕ್ತ ರಸಗೊಬ್ಬರಗಳ ಬಳಕೆಗೆ ಸಲಹೆ ನೀಡಲಾಗುತ್ತದೆ. ಸಂಚಾರಿ ಮಣ್ಣು ಆರೋಗ್ಯ ಕೇಂದ್ರಗಳು ರೈತರ ಮಣ್ಣು ಮಾದರಿಗಳನ್ನು ಸ್ಥಳದಲ್ಲಿಯೇ ವಿಶ್ಲೇಷಿಸಿ, ಸೂಕ್ತ ಸಮತೋಲನ ರಸಗೊಬ್ಬರಗಳ ಶಿಫಾರಸ್ಸನ್ನು ನೀಡುತ್ತವೆ. ಜೊತೆಗೆ ರೈತರಿಂದ ಪಡೆದ ನೀರಿನ ಮಾದರಿಗಳನ್ನು ಕೃಷಿ ನೀರಾವರಿಗೆ ಯೋಗ್ಯವೇ ಎಂಬುದರ ಬಗ್ಗೆ ವಿಶ್ಲೇಷಿಸಿ ಅವಶ್ಯವಿದ್ದಲ್ಲಿ ಸೂಕ್ತ ಬಳಕೆಯ ಮಾಹಿತಿ ನೀಡಲಾಗುತ್ತವೆ. ಸುಣ್ಣ ಮತ್ತು ಜಿಪ್ಸಂ ಮಾದರಿಗಳನ್ನು ಸಹ ವಿಶ್ಲೇಷಿಸಲಾಗುತ್ತದೆ.

ಮಣ್ಣು ಪರೀಕ್ಷೆ ಮಾಡುವುದರ ಜೊತೆಗೆ ಸಮಸ್ಯೆ ಕಂಡು ಬಂದಂತಹ ರೈತರುಗಳ ಕ್ಷೇತ್ರಗಳಿಗೆ ಭೇಟಿ ನೀಡಿ, ಪರಿಶೀಲಿಸಿ, ನ್ಯೂನತೆ ಕಂಡುಬಂದಲ್ಲಿ ಅದನ್ನು ಸರಿಪಡಿಸಿಕೊಂಡು ಅಧಿಕ ಇಳುವರಿ ಪಡೆಯಲು ತಾಂತ್ರಿಕ ಮಾಹಿತಿ ನೀಡಲಾಗುತ್ತಿದೆ. ಪ್ರಯೋಗಾಲಯದಲ್ಲಿ ದಿನವೊಂದಕ್ಕೆ ೬೦ ರೀತಿಯ ಮಣ್ಣು ಮಾದರಿಗಳ ವಿಶ್ಲೇಷಣೆ ಮಾಡಬಹುದು. ೧೯೯೯ ರಿಂದೀಚೆಗೆ ಈ ಪ್ರಯೋಗಾಲಯದಲ್ಲಿ ಲಘು ಪೋಷಕಾಂಶಗಳಾದ ಸತು, ತಾಮ್ರ, ಮ್ಯಾಂಗನೀಸ್ ಮತ್ತು ಕಬ್ಬಿಣದ ವಿಶ್ಲೇಷಣಾ ಕಾರ್ಯವೂ ಪ್ರಾರಂಭವಾಗಿದೆ. ಈ ಕೇಂದ್ರದಲ್ಲಿ ಪ್ರಮುಖವಾಗಿ ಮಣ್ಣಿನ ರಸಸಾರ, ಕರಗುವ ಲವಣಾಂಶ ಹಾಗೂ ಮುಖ್ಯ ಪೋಷಕಾಂಶಗಳಾದ ಸಾರಜನಕ, ರಂಜಕ ಮತ್ತು ಪೊಟ್ಯಾಷ್ ಅಂಶಗಳನ್ನು ವಿಶ್ಲೇಷಣೆ ಮಾಡಲಾಗುತ್ತಿದೆ. ರಸಸಾರ ವಿಶ್ಲೇಷಣೆಯೊಂದಿಗೆ ಹುಳಿ ಮತ್ತು ಕ್ಷಾರಾಂಶಗಳನ್ನು ನಿರ್ಧರಿಸಲಾಗುತ್ತಿದೆ. ಸಮಸ್ಯಾತ್ಮಕವಾದ ಹುಳಿ ಮಣ್ಣನ್ನು ಸುಧಾರಿಸಲು ಎಕರೆಗೆ ೨೦೦ ಕಿ.ಗ್ರಾಂ.ಸುಣ್ಣವನ್ನು ಬಳಸಲು ರೈತರಿಗೆ ಶಿಫಾರಸ್ಸು ಮಾಡಲಾಗುತ್ತಿದೆ. ಅಂತೆಯೇ ಕ್ಷಾರ ಮಣ್ಣನ್ನು ಸುಧಾರಿಸಲು

ಬಸಿಗಾಲುವೆ ತೆಗೆಯುವುದರೊಂದಿಗೆ ಜಿಪ್ಸಂ ಬಳಸಲು ರೈತರಿಗೆ ಸೂಚಿಸಲಾಗುತ್ತಿದೆ. ಕರಗುವ ಲವಣಾಂಶ ವಿಶ್ಲೇಷಣೆಯ ಆಧಾರದ ಮೇಲೆ ಮಣ್ಣು ಸಾಮಾನ್ಯ, ಅಪಾಯಕಾರಿ ಅಥವಾ ಹಾನಿಕಾರಕ ಎಂಬುದನ್ನು ನಿರ್ಧರಿಸಲಾಗುತ್ತದೆ. ಜಿಲ್ಲೆಯ ಏಳೂ ತಾಲೂಕಗಳು ಸಾಮಾನ್ಯ ಮಣ್ಣಿನಿಂದ ಕೂಡಿರುತ್ತವೆ.

ಮಣ್ಣಿನ ಮಾದರಿಯಲ್ಲಿ ಸಾರಜನಕದ ಅಂಶ ಶೇ.೦.೫ಕ್ಕಿಂತ ಕಡಿಮೆ ಇದ್ದಲ್ಲಿ ಕಡಿಮೆಸಾರ ಎಂತಲೂ, ಶೇ.೦.೫ ರಿಂದ ೦.೭೫ ಇದ್ದಲ್ಲಿ ಮಧ್ಯಮಸಾರ ಎಂತಲೂ ಶೇ.೦.೭೫ ಕ್ಕಿಂತ ಹೆಚ್ಚಾಗಿದ್ದಲ್ಲಿ ಸಾರ ಹೆಚ್ಚಾಗಿದೆ ಎಂತಲೂ ವರ್ಗೀಕರಣ ಮಾಡಲಾಗುತ್ತದೆ. ಮಣ್ಣಿನಲ್ಲಿ ರಂಜಕದ ಅಂಶ ಶೇಕಡ ೯ ಕ್ಕಿಂತ ಕಡಿಮೆ ಇದ್ದಲ್ಲಿ ಕಡಿಮೆ ಸಾರ ಎಂತಲೂ, ಶೇಕಡ ೯ ರಿಂದ ಶೇಕಡ ೨೨ ಇದ್ದಲ್ಲಿ ಮಧ್ಯಮಸಾರ ಎಂತಲೂ ಶೇ.೨೨ಕ್ಕಿಂತ ಹೆಚ್ಚಾಗಿದ್ದಲ್ಲಿ ಹೆಚ್ಚಿನ ರಂಜಕಯುಕ್ತ ಮಣ್ಣು ಎಂದೂ ವರ್ಗೀಕರಣ ಮಾಡಲಾಗುತ್ತದೆ. ಅಂತೆಯೇ ಪೊಟ್ಯಾಷ್ ಅಂಶವು ೫೦ ಕ್ಕಿಂತ ಕಡಿಮೆ ಇದ್ದಲ್ಲಿ ಕಡಿಮೆ ಸಾರ ಎಂತಲೂ, ೫೦ರಿಂದ ೧೫೦ ಇದ್ದಲ್ಲಿ ಮಧ್ಯಮಸಾರ ಎಂತಲೂ, ೧೫೦ಕ್ಕಿಂತ ಹೆಚ್ಚಾಗಿದ್ದಲ್ಲಿ ಮಣ್ಣಿನಲ್ಲಿ ಪೊಟ್ಯಾಷ್ ಅಂಶ ಅಧಿಕವಾಗಿದೆ ಎಂದು ವರ್ಗೀಕರಣ ಮಾಡಲಾಗುತ್ತದೆ.

ಕೃಷಿಗೆ ಉಪಯೋಗಿಸುವ ನೀರು, ಬಳಕೆಗೆ ಯೋಗ್ಯವೋ ಇಲ್ಲವೋ ಎಂಬುದನ್ನು ನಿರ್ಧರಿಸಲು ಈ ಪ್ರಯೋಗಾಲಯದಲ್ಲಿ ಪ್ರಮುಖವಾಗಿ ನೀರಿನ ರಸಸಾರ, ಕರಗುವ ಲವಣಾಂಶ, ಕಾರ್ಬೋನೇಟ್, ಬೈಕಾರ್ಬೋನೇಟ್, ಸೋಡಿಯಂ, ಕ್ಯಾಲ್ಸಿಯಂ ಮತ್ತು ಮೆಗ್ನೇಷಿಯಂ ಕ್ಲೋರೈಡ್, ಸೋಡಿಯಂ ಹೀರುವ ಪ್ರಮಾಣ ಮತ್ತು ರೆಸಿಡ್ಯುಯಲ್ ಸೋಡಿಯಂ ಕಾರ್ಬೋನೇಟ್ ಅಂಶಗಳನ್ನು ವಿಶ್ಲೇಷಿಸಲಾಗುತ್ತಿದೆ. ಲಘು ಪೋಷಕಾಂಶದ ಮಣ್ಣಿನಲ್ಲಿ ನಿಗದಿಯಾದ ಪ್ರಮಾಣ ನಿರ್ಧರಿಸಲು ಅವುಗಳ ಕ್ರಿಟಿಕಲ್ ಲಿಮಿಟ್ ಅನ್ನು ಬಳಸಲಾಗುತ್ತಿದೆ. ಸತು ೧ ಪಿಪಿಎಂ. (ಪಾರ್ಟ್ಸ್ ಪರ್ ಮಿಲಿಯನ್, ಹತ್ತು ಲಕ್ಷದಲ್ಲಿ ಒಂದು ಭಾಗ) ತಾಮ್ರ ೦.೨ ಪಿಪಿಎಂ., ಮ್ಯಾಂಗನೀಸ್ ೨ ಪಿಪಿಎಂ. ಮತ್ತು ಕಬ್ಬಿಣದ ಕ್ರಿಟಿಕಲ್ ಲಿಮಿಟ್ ೪.೫ ಪಿಪಿಎಂ. ಆಗಿರುತ್ತದೆ.

### ಕೃಷಿ ಪಾಠಶಾಲೆ

ಜಿಲ್ಲೆಯ ಕೃಷಿ ಪಾಠಶಾಲೆಯು ಬೆಂಗಳೂರು – ಮೈಸೂರು ರಾಜ್ಯ ಹೆದ್ದಾರಿಯಲ್ಲಿ ತಾಲೂಕು ಕೇಂದ್ರ ಮದ್ದೂರಿಗೆ ಅನತಿ ದೂರದ ಸೋಮನಹಳ್ಳಿ ಗ್ರಾಮದಲ್ಲಿದೆ. ಕೃಷಿಯು ಸಾಂಪ್ರದಾಯಿಕವಾಗಿ ಒಂದು ಕೌಟುಂಬಿಕ ಉದ್ದಿಮೆ ಎಂದು ಪರಿಗಣಿಸಲ್ಪಟ್ಟಿದೆ. ಆದುದರಿಂದ ಇದು ರೈತ ಮಹಿಳೆಯರು ಮತ್ತು ಮಕ್ಕಳನ್ನು ಒಳಗೊಂಡಿರುತ್ತದೆ. ಕೃಷಿ ಉತ್ಪಾದನೆಯಲ್ಲಿ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಮಹಿಳೆಯರು ಮುಖ್ಯ ಪಾತ್ರ ವಹಿಸುತ್ತಿದ್ದಾರೆ. ಕೃಷಿ ಜಮೀನುಗಳಲ್ಲಿನ ಶೇ. ೬೦ ರಿಂದ ೭೦ ರಷ್ಟು ಕೆಲಸಗಳನ್ನು ಮಹಿಳೆಯರೇ ಮಾಡುತ್ತಾರೆಂದು ಅಂದಾಜು ಮಾಡಲಾಗಿದೆ. ಸೋಮನಹಳ್ಳಿಯ ಕೃಷಿ ಪಾಠಶಾಲೆಯಲ್ಲಿ ಮುಖ್ಯವಾಗಿ ಆಧುನಿಕ ಬೇಸಾಯದ ಬಗ್ಗೆ ಅಲ್ಪಾವಧಿ ತರಬೇತಿಯಾಗಿ ರೈತ ಮಹಿಳೆಯರು ಹಾಗೂ ಮಕ್ಕಳಿಗೆ ಮೂರು ತಿಂಗಳ ತರಬೇತಿಯನ್ನು ನೀಡಲಾಗುತ್ತದೆ. ಪ್ರತೀ ತಂಡಕ್ಕೆ ೨೪ ಶಿಕ್ಷಣಾರ್ಥಿಗಳಂತೆ ವರ್ಷಕ್ಕೆ ಮೂರು ತಂಡಗಳಲ್ಲಿ ಒಟ್ಟು ೭೨ ಜನ ರೈತ ಮಕ್ಕಳಿಗೆ ಪ್ರತೀ ವರ್ಷವೂ ತರಬೇತಿಯನ್ನು ನೀಡಲಾಗುತ್ತದೆ. ಶಿಕ್ಷಣಾರ್ಥಿಗಳಿಗೆ ವಸತಿ ಹಾಗೂ ಭೋಜನ ಇತ್ಯಾದಿ ಸೌಕರ್ಯಗಳಿದ್ದು, ಸೈದ್ಧಾಂತಿಕ ಹಾಗೂ ಪ್ರಾಯೋಗಿಕ ತರಬೇತಿಯನ್ನು ನೀಡಲಾಗುತ್ತದೆ. ಈ ಸಂಬಂಧ ಶಾಲೆಗೆ ಹೊಂದಿಕೊಂಡಿರುವ ೧೫.೩೧ ಹೆಕ್ಟೇರ್ ವಿಸ್ತೀರ್ಣದ ಕ್ಷೇತ್ರದಲ್ಲಿ ೧೨.೪೬ ಹೆಕ್ಟೇರ್ ಭೂಮಿಯು ಸಾಗುವಳಿಗೆ ಯೋಗ್ಯವಾಗಿದ್ದು, ಅಲ್ಲಿ ರೈತರ ಅವಶ್ಯಕತೆಗಳಿಗನುಗುಣವಾಗಿ ಭತ್ತ, ರಾಗಿ, ತೊಗರಿ, ಅಲಸಂದೆ ಇತ್ಯಾದಿ ಬೆಳೆಗಳ ಬೀಜೋತ್ಪಾದನೆ ಮಾಡಲಾಗುತ್ತಿದೆ. ಬೀಜೋತ್ಪಾದನೆ ಕಾರ್ಯಕ್ಕೆ ಸೋಮನಹಳ್ಳಿ ಕೆರೆ, ಶಿಂಷಾ ಏತ ನೀರಾವರಿ ಹಾಗೂ ಕ್ಷೇತ್ರದಲ್ಲಿರುವ ಮೂರು ಕೊಳವೆ ಬಾವಿಗಳ ನೀರನ್ನು ಉಪಯೋಗಿಸಿಕೊಳ್ಳಲಾಗುತ್ತಿದೆ.

## ಗ್ರಾಮೀಣ ಅಭಿವೃದ್ಧಿ ತರಬೇತಿ ಕೇಂದ್ರ, ಮಂಡ್ಯ

ಗ್ರಾಮೀಣ ಅಭಿವೃದ್ಧಿ ತರಬೇತಿ ಕೇಂದ್ರವು ಮಂಡ್ಯ–ಮೇಲುಕೋಟೆ ಮಾರ್ಗದಲ್ಲಿ, ಮುಖ್ಯರಸ್ತೆಯಿಂದ ಸುಮಾರು ಮೂರು ಕಿಲೋಮೀಟರುಗಳ ದೂರದಲ್ಲಿ ಸ್ಥಾಪಿತಗೊಂಡಿದೆ. ಈ ಕೇಂದ್ರವು ೧೯೫೨ರಲ್ಲಿ ಗ್ರಾಮ ಮಟ್ಟದ ಸಮುದಾಯ ಕಾರ್ಯಕರ್ತರನ್ನು ತರಬೇತಿಗೊಳಿಸಲು ವಿಸ್ತರಣಾ ತರಬೇತಿ ಕೇಂದ್ರ ಎಂಬ ಹೆಸರಿನಿಂದ ಪ್ರಾರಂಭವಾಯಿತು. ಪ್ರಾರಂಭದಲ್ಲಿ ಕೃಷಿ ಪದವೀಧರರು ಮತ್ತು ಕೃಷಿಯಲ್ಲಿ ಡಿಪ್ಲೊಮಾ ಪಡೆದವರಿಗೆ, ನಂತರ ಗ್ರಾಮೀಣ ಪ್ರದೇಶದ ಹಿನ್ನೆಲೆಯಿಂದ ಮೂಲಕೃಷಿ ತರಬೇತಿ ಪಡೆದಂತಹ ಮೆಟ್ರಿಕ್ಯೂಲೇಟ್‌ಗಳಿಗೆ ಸಮುದಾಯ ಕಾರ್ಯಕರ್ತರನ್ನಾಗಿ ಕೆಲಸ ನಿರ್ವಹಿಸಲು ಬೇಕಾಗುವ ಆರು ತಿಂಗಳ ಅವಧಿಯ ತರಬೇತಿಯನ್ನು ೧೯೫೯ರವರೆಗೂ ನೀಡಲಾಗುತ್ತಿತ್ತು. ನಂತರ ಈ ಕೇಂದ್ರದ ಹೆಸರನ್ನು 'ಗ್ರಾಮ ಸೇವಕ ತರಬೇತಿ ಕೇಂದ್ರ' ಎಂದು ಬದಲಾಯಿಸಿ ೧೯೬೬ ರವರೆವಿಗೂ ಹೊಸದಾಗಿ ಆಯ್ಕೆಗೊಂಡ ಗ್ರಾಮಸೇವಕರುಗಳಿಗೆ ಎರಡು ವರ್ಷಗಳ ಸೇವಾ ಪೂರ್ವ ತರಬೇತಿಯನ್ನು ನೀಡಲಾಗುತ್ತಿತ್ತು. ೧೯೫೯ ರಲ್ಲೇ ಈ ತರಬೇತಿ ಕೇಂದ್ರಕ್ಕೆ ಹೊಂದಿಕೊಂಡಂತೆ ಗೃಹ ವಿಜ್ಞಾನ ಶಾಖೆಯು ಪ್ರಾರಂಭವಾಗಿ ಹೊಸದಾಗಿ ಆಯ್ಕೆಗೊಂಡ ಗ್ರಾಮಸೇವಕಿಯರಿಗೂ ಸಹ ಸೇವಾ ಪೂರ್ವ ತರಬೇತಿಯನ್ನು ನೀಡಲು ಪ್ರಾರಂಭಿಸಿತ್ತು. ೧೯೬೦ ರಿಂದ ಸೇವಾ ನಿರತ ಗ್ರಾಮ ಸೇವಕರಿಗೆ ಮತ್ತು ಗ್ರಾಮ ಸೇವಕಿಯರಿಗೆ ಒಂದು ತಿಂಗಳ ಪುನ:ಶ್ಚೇತನಾ ತರಬೇತಿಯನ್ನು ನೀಡುವುದರ ಜೊತೆಗೆ ರೈತರು, ರೈತ ಮಹಿಳೆಯರು, ಗ್ರಾಮೀಣ ಯುವಕರು ಮತ್ತು ವಿವಿಧ ವರ್ಗದ ಅಧಿಕಾರಿಗಳು ಹಾಗೂ ಇತರೆ ಸಿಬ್ಬಂದಿ ವರ್ಗದವರಿಗೆ ಅನ್ವಯಿಕ ಪೋಷಣೆ ಕಾರ್ಯಕ್ರಮದಡಿ ತರಬೇತಿ ನೀಡಲು ಪ್ರಾರಂಭಿಸಲಾಯಿತು.

೧೯೬೬ರಲ್ಲಿ ಈ ಕೇಂದ್ರವು ಅಪ್‌ಡೇಟೆಡ್ ಗ್ರಾಮ ಸೇವಕ ತರಬೇತಿ ಕೇಂದ್ರವಾಗಿ ಬದಲಾವಣೆಗೊಂಡು ಕೃಷಿ ಪಶುಸಂಗೋಪನೆ ಮತ್ತು ವಿಸ್ತರಣೆಗಳ ಮುಂದುವರಿದ ಆಧುನಿಕ ತಾಂತ್ರಿಕತೆಗಳ ಬಗ್ಗೆ ೧೦ ವರ್ಷಗಳಿಗೂ ಹೆಚ್ಚು ಸೇವೆ ಸಲ್ಲಿಸಿದ್ದ ಗ್ರಾಮ ಸೇವಕರಿಗೆ ಒಂದು ವರ್ಷದ ಉನ್ನತ ತರಬೇತಿಯನ್ನು ಪ್ರಾರಂಭಿಸಿತು. ನಂತರ ಗ್ರಾಮ ಜೀವನದ ವಿವಿಧ ಸ್ತರಗಳಿಗೆ ಸಮುದಾಯ ವಿಕಾಸ ತಲುಪಲೆಂಬ ದೃಷ್ಟಿಯಿಂದ ಮತ್ತು ಕಾಲಿಕ ಬದಲಾವಣೆಗಳಿಗೆ ಅವು ಸ್ಪಂದಿಸಲು, ಈ ತರಬೇತಿ ಕೇಂದ್ರವು ೧೯೭೦ ರಿಂದ 'ಗ್ರಾಮೀಣ ಅಭಿವೃದ್ಧಿ ತರಬೇತಿ ಕೇಂದ್ರ'ವೆಂಬ ಹೊಸ ಅಭಿದಾನವನ್ನು ಪಡೆದು ಕೃಷಿ ಇಲಾಖೆಯ ಆಡಳಿತಕ್ಕೊಳಪಟ್ಟು ಅಧಿಕಾರಿಗಳಿಗೆ, ಯುವಕ ರೈತರಿಗೆ ಹಾಗೂ ರೈತ ಮಹಿಳೆಯರಿಗೆ ತರಬೇತಿ ನೀಡುವುದನ್ನು ಮುಂದುವರಿಸಿಕೊಂಡು ಬರುತ್ತಿದೆ.

ಗ್ರಾಮೀಣ ಜೀವನಕ್ಕೆ ನೆರವಾಗುವ ಕೃಷಿ ಸಹಾಯಕರು, ರೈತರು, ರೈತ ಮಹಿಳೆಯರು, ಯುವ ಮುಂದಾಳುಗಳೇ ಮುಂತಾದವರಿಗೆ ತರಬೇತಿ ನೀಡುವ ಕಾರ್ಯಕ್ರಮವನ್ನು ಈ ಕೇಂದ್ರವು ಹಮ್ಮಿಕೊಂಡಿದೆ. ಇದರೊಡನೆ ರೈತನ ಮನೆ ಬಾಗಿಲಿಗೆ ಕೃಷಿ ಜ್ಞಾನವನ್ನು ಒಯ್ಯುವ ಹಾಗೂ ಸಮಸ್ಯೆಗಳನ್ನು ನೇರವಾಗಿ ಅರಿಯುವ ದೃಷ್ಟಿಯಿಂದ ಆಗಾಗ್ಗೆ ಹಳ್ಳಿಗಳಲ್ಲಿ ಸಂಚಾರಿ ತರಬೇತಿ ಶಿಬಿರಗಳನ್ನು ನಡೆಸಲಾಗುತ್ತದೆ. ೧೯೮೨ ರಿಂದ ಡ್ಯಾನಿಡಾ ಅನುದಾನಿತ, ಮಹಿಳಾ ಮತ್ತು ಯುವ ತರಬೇತಿ ವಿಸ್ತರಣಾ ಯೋಜನೆ (ವೈಟೆಪ್) ಕಾರ್ಯಕ್ರಮಗಳ ಎರಡನೇ ಹಂತವು ಕಾರ್ಯಗತವಾಗಿದೆ. ಈ ಕೇಂದ್ರದ ಪ್ರಧಾನ ಚಟುವಟಿಕೆಗಳಲ್ಲಿ ರಾಷ್ಟ್ರೀಯ ಕೃಷಿ ವಿಸ್ತರಣೆ ಯೋಜನೆಯಡಿ ೧. ಹೊಸದಾಗಿ ಆಯ್ಕೆಗೊಂಡ ಕೃಷಿ ಸಹಾಯಕರಿಗೆ ಒಂದು ವರ್ಷ ಅವಧಿಯ ಸೇವಾಪೂರ್ವ ತರಬೇತಿ, ೨. ಸೇವಾ ನಿರತ ಕೃಷಿ ಸಹಾಯಕರಿಗೆ ೩೦ ದಿನಗಳ ಅವಧಿಯ ವಾರ್ಷಿಕ ಮೂರು ಪುನಃಶ್ಚೇತನ ತರಬೇತಿ ಶಿಬಿರಗಳು ಮತ್ತು ೩. ಒಂದು ದಿನದ ವಾರ್ಷಿಕ ೭೫ ಸುತ್ತು ಸಂಚಾರಿ ಶಿಬಿರಗಳು. ಡ್ಯಾನಿಡಾ ಅನುದಾನಿತ ವೈಟೆಪ್ ಯೋಜನೆಯಡಿ– ೧ ರೈತ ಮಹಿಳೆಯರಿಗೆ ೧೦ ದಿವಸಗಳ ವಾರ್ಷಿಕ ೧೧ ಶಿಬಿರಗಳು; ೨. ಯುವ ರೈತರಿಗೆ ೧೪ ದಿವಸಗಳ ವಾರ್ಷಿಕ ೧೧ ಶಿಬಿರಗಳು, ೩. ಸಂಪರ್ಕ ಕಾರ್ಯಕರ್ತೆಯರಿಗೆ ೫ ದಿವಸಗಳ ವಾರ್ಷಿಕ ೫ ಶಿಬಿರಗಳು; ೪. ರೈತ ಮಹಿಳೆಯರಿಗೆ ೨ ದಿವಸಗಳ ವಾರ್ಷಿಕ ೧೧ ಹಂಗಾಮು ಪೂರ್ವ ತರಬೇತಿ ಶಿಬಿರಗಳು;

೫. ರೈತ ಮಹಿಳೆಯರಿಗೆ ೨ ದಿವಸಗಳ ವಾರ್ಷಿಕ ೫ ಅಥವಾ ೬ ಸಂಸ್ಥಾಪೂರ್ವ ತರಬೇತಿ ಶಿಬಿರಗಳು ಹಾಗೂ ಪ್ರಾತ್ಯಕ್ಷಿಕೆಗಾಗಿ ಇರುವ ಕೃಷಿ ಭೂಮಿಯಲ್ಲಿ ಬೀಜೋತ್ಪಾದನೆ ಕೈಗೊಳ್ಳುವ ಕಾರ್ಯಕ್ರಮಗಳೂ ಸೇರಿವೆ. ಗ್ರಾಮೀಣ ಅಭಿವೃದ್ಧಿ ತರಬೇತಿ ಕೇಂದ್ರದ ಕೃಷಿ ಕ್ಷೇತ್ರದ ವಿಸ್ತೀರ್ಣ ೨೮.೪೬ ಹೆ. ಆಗಿದ್ದು, ಅದರಲ್ಲಿ ಸಾಗುವಳಿ ವಿಸ್ತೀರ್ಣ ಖುಷ್ಕಿ ೪.೮ ಹೆ. ತರಿ ೪.೮ ಹೆ. ಹಾಗೂ ಬಾಗಾಯ್ತು ೦.೮ ಹೆಕ್ಟೇರ್‌ಗಳಷ್ಟಿದೆ. ಈ ಕೇಂದ್ರದಲ್ಲಿ ಪ್ರಾಂಶುಪಾಲರು, ತಾಂತ್ರಿಕ ಮತ್ತು ಆಡಳಿತ ವರ್ಗಗಳಿಗೆ ಸೇರಿದ ಬೋಧಕ ಸಿಬ್ಬಂದಿ, ಮತ್ತು ಇತರೆ ೫೯ ಜನ ಸಿಬ್ಬಂದಿ ವರ್ಗದವರಿದ್ದಾರೆ.

**ಪ್ರಾದೇಶಿಕ ಸಂಶೋಧನಾ ಕೇಂದ್ರ ವಿ.ಸಿ.ಫಾರಂ, ಮಂಡ್ಯ**

ಮಂಡ್ಯ-ಮೇಲುಕೋಟೆ ಮಾರ್ಗದಲ್ಲಿರುವ ಇರ್ವಿನ್/ವಿಶ್ವೇಶ್ವರಯ್ಯ ನಾಲಾ ಫಾರಂ ಅನ್ನು ೧೯೩೧ ರಲ್ಲಿ ಆಗಿನ ಮೈಸೂರು ಸಂಸ್ಥಾನದ ಕೃಷಿ ಇಲಾಖೆಯ ನಿರ್ದೇಶಕರಾಗಿದ್ದ ಲೆಸ್ಲಿ ಸಿ.ಕೋಲ್‌ಮನ್‌ರವರ ನೇತೃತ್ವದಲ್ಲಿ ಗಾಣದಾಳು ಗ್ರಾಮದ ವ್ಯಾಪ್ತಿಯಲ್ಲಿ ಸ್ಥಾಪಿಸಲಾಯಿತು. ಇದಕ್ಕೆ ಸರ್ಕಾರಿ ಗಾಣದಾಳು ಫಾರಂ ಎಂದು ಹೆಸರಿತ್ತು. ಕೃಷ್ಣರಾಜಸಾಗರ ಜಲಾಶಯದ ನೀರಾವರಿಗೊಳಪಟ್ಟ ನಂತರ ಕೆಲವು ಕಾಲ ಈ ಕ್ಷೇತ್ರವನ್ನು ಇರ್ವಿನ್ ನಾಲಾ ಫಾರಂ ಎಂದೂ ಕರೆಯಲಾಗುತ್ತಿತ್ತು. ಈ ಜಲಾಶಯದ ಶಿಲ್ಪಿ ವಿಶ್ವೇಶ್ವರಯ್ಯನವರ ಸೇವೆಯ ಸವಿನೆನಪಿಗಾಗಿ ಈ ಕ್ಷೇತ್ರವನ್ನು ಮುಂದೆ ವಿಶ್ವೇಶ್ವರಯ್ಯ ನಾಲಾ ಫಾರಂ ಎಂದು ಕರೆಯಲಾಯಿತು. ಈ ಕ್ಷೇತ್ರವು ಸುಮಾರು ೨೬೩ ಹೆಕ್ಟೇರು ವಿಸ್ತೀರ್ಣವುಳ್ಳದ್ದಾಗಿದೆ. ರಾಜ್ಯದಲ್ಲಿ ಕೃಷಿ ವಿಶ್ವವಿದ್ಯಾನಿಲಯವು ೧೯೬೫ರಲ್ಲಿ ಅಸ್ತಿತ್ವಕ್ಕೆ ಬಂದ ನಂತರ ಇದನ್ನು ವಿವಿಧೋದ್ದೇಶಗಳನ್ನು ಒಳಗೊಂಡ ಕೃಷಿ ಸಂಶೋಧನಾ ಕೇಂದ್ರವನ್ನಾಗಿ ರೂಪಿಸಲಾಯಿತು. ಇದು ೧೨ ಡಿಗ್ರಿ ಉತ್ತರ ಅಕ್ಷಾಂಶ ಮತ್ತು ೭೬ ಡಿಗ್ರಿ ಪೂರ್ವದ ರೇಖಾಂಶದಲ್ಲಿದ್ದು, ಸಮುದ್ರ ಮಟ್ಟದಿಂದ ಸುಮಾರು ೭೯೫ ಮೀಟರುಗಳಷ್ಟು ಎತ್ತರದಲ್ಲಿದೆ. ಈ ಸಂಶೋಧನಾ ಕೇಂದ್ರದ ವಾರ್ಷಿಕ ಗರಿಷ್ಠ ಮತ್ತು ಕನಿಷ್ಠ ಉಷ್ಣತೆ ಅನುಕ್ರಮವಾಗಿ ೩೪ ಮತ್ತು ೧೫ ಡಿಗ್ರಿ ಸೆಲ್ಸಿಯಸ್ ಆಗಿದ್ದು ಇಲ್ಲಿನ ಸರಾಸರಿ ಮಳೆಯ ಪ್ರಮಾಣ ೭೬೫ ಮಿ.ಮೀ. ಆಗಿರುತ್ತದೆ. ಈ ಕೇಂದ್ರದ ಮಣ್ಣು ಕೆಂಪು ಗೋಡು ಮರಳಿನದಾಗಿದ್ದು ಸಾಧಾರಣ ನೀರು ಬಸಿದು ಹೋಗುವ ಸಾಮರ್ಥ್ಯದಿಂದ ಕೂಡಿದೆ. ಈ ಮಣ್ಣಿನ ರಸಸಾರ ಶೇಕಡ ೫.೫ ರಿಂದ ೧೦.೬ ಇದ್ದು ಫಲವತ್ತತೆಯು ಸಾರಜನಕದಲ್ಲಿ ಅತಿ ಕಡಿಮೆ, ರಂಜಕ ಮಧ್ಯಮ ಮತ್ತು ಪೊಟ್ಯಾಷ್ ಪ್ರಮಾಣವು ಮಧ್ಯಮದಿಂದ ಹೆಚ್ಚು ಇರುತ್ತದೆ.

ಈ ಸಂಶೋಧನಾ ಕೇಂದ್ರದಲ್ಲಿ ಕೃಷಿಗೆ ಸಂಬಂಧಿಸಿದಂತೆ ವಿವಿಧ ವಿಭಾಗಗಳಿವೆ. ಪ್ರತಿಯೊಂದು ವಿಭಾಗದಲ್ಲೂ ನುರಿತ ಕಾರ್ಯಶೀಲ ಸಂಶೋಧಕರು ರೈತಾಪಿ ಜನರ ಸಮಸ್ಯೆಗಳ ಸೂಕ್ತ ಪರಿಹಾರಕ್ಕಾಗಿ ಸತತವಾಗಿ ಕೆಲಸ ಮಾಡುತ್ತಿದ್ದಾರೆ. ಈ ಪ್ರದೇಶದ ಮುಖ್ಯ ಬೆಳೆಗಳಾದ ಕಬ್ಬು, ಭತ್ತ ಮತ್ತು ರಾಗಿ ಬೆಳೆಗಳಲ್ಲಿ ವಿಶೇಷ ಪ್ರಗತಿ ಸಾಧಿಸಿರುವ ಹೆಮ್ಮೆ ಈ ಕೇಂದ್ರದ್ದಾಗಿದೆ. ರಾಜ್ಯದ ಆಹಾರ ಸಮೃದ್ಧಿಗೆ ಕಾರಣವಾದ ಅನೇಕ ಅಧಿಕ ಇಳುವರಿಯ ಭತ್ತ, ಕಬ್ಬು, ಮುಸುಕಿನ ಜೋಳ ಮತ್ತು ರಾಗಿ ತಳಿಗಳನ್ನು ನೀಡಿರುವುದು ಈ ಸಂಶೋಧನಾ ಕೇಂದ್ರದ ಪ್ರಯತ್ನದ ಸಾರ್ಥಕತೆಯನ್ನು ತೋರುತ್ತದೆ. ಉತ್ತಮ ಗುಣಮಟ್ಟವುಳ್ಳ ಬಿತ್ತನೆಗಾಗಿ ರೈತರಿಂದ ಅಪಾರ ಬೇಡಿಕೆಯಿರುವುದರಿಂದ ಭತ್ತ, ರಾಗಿ, ಕಬ್ಬು, ದ್ವಿದಳ ಧಾನ್ಯಗಳು, ಮುಸುಕಿನ ಜೋಳ ಮತ್ತು ತೆಂಗು ಇವುಗಳ ಬೀಜೋತ್ಪಾದನೆಯನ್ನು ಅತ್ಯಂತ ಸಮರ್ಪಕವಾಗಿ ಕೈಗೊಳ್ಳಲಾಗಿದೆ. ಜೊತೆಗೆ ಮೇವಿನ ಬೆಳೆಗಳು ದ್ವಿದಳ ಧಾನ್ಯಗಳು, ತೋಟದ ಬೆಳೆಗಳು, ಹೈನುಗಾರಿಕೆ, ಮೀನುಗಾರಿಕೆ ಹಾಗೂ ಅರಣ್ಯ ವಿಷಯಗಳಲ್ಲೂ ಕೂಡ ಸಂಶೋಧನೆಗಳನ್ನು ನಡೆಸಲಾಗುತ್ತಿದೆ.

ರಾಜ್ಯದ ಕೃಷಿ ಇಲಾಖೆಯ ವಿವಿಧ ವರ್ಗಗಳ ಅಧಿಕಾರಿಗಳಿಗೆ ಇಲ್ಲಿ ತರಬೇತಿ ಮತ್ತು ವೀಕ್ಷಣಾ ಕಾರ್ಯಕ್ರಮವಿದ್ದು, ಇದರಲ್ಲಿ ಸಂಶೋಧನಾ ಕೇಂದ್ರದ ವಿಜ್ಞಾನಿಗಳು ಸಕ್ರಿಯವಾಗಿ ಭಾಗವಹಿಸುತ್ತಿದ್ದಾರೆ. ಇಲ್ಲಿಯ

ವಿವಿಧ ವಿಭಾಗಗಳ ತಜ್ಞರು ಸೂಕ್ತ ಕಾಲದಲ್ಲಿ ತಮ್ಮ ತಮ್ಮ ಬೆಳೆಗಳ ಬಗ್ಗೆ ಅಗತ್ಯವಾದ ಮಾಹಿತಿಯನ್ನು ಆಕಾಶವಾಣಿ ಸಂದರ್ಶನಗಳ ಮೂಲಕ ರೈತರಿಗೆ ತಿಳಿಸುವುದಲ್ಲದೆ ಅಲ್ಲಿಗೆ ಭೇಟಿ ಕೊಡುವ ರೈತರಿಗೆ ಅವರ ಅಗತ್ಯಗಳಿಗನುಸಾರವಾಗಿ ಬೆಳೆಗಳ ಬಗ್ಗೆ ವಿವರಗಳನ್ನು ಕೊಡುತ್ತಾರೆ. ಈ ಕೇಂದ್ರದಲ್ಲಿ ಕಂಡುಹಿಡಿಯಲ್ಪಟ್ಟ ಉತ್ತಮ ತಳಿ ಹಾಗೂ ಕೃಷಿ ಪದ್ಧತಿಗಳನ್ನು ರೈತರಿಗೆ ತಿಳಿಯಪಡಿಸುವಲ್ಲಿ ಹಾಗೂ ರೈತರ ಸಮಸ್ಯೆಗಳಿಗೆ ತಾಂತ್ರಿಕ ಪರಿಹಾರಕ್ಕೋಸ್ಕರ ಕೇಂದ್ರದ ತಜ್ಞರಿಗೆ ತಿಳಿಸುವಲ್ಲಿ ಇಲ್ಲಿನ ವಿಸ್ತರಣಾ ವಿಭಾಗವು ಪ್ರಮುಖ ಪಾತ್ರ ವಹಿಸುತ್ತಿದೆ. ಕೃಷಿ ವಿಶ್ವವಿದ್ಯಾನಿಲಯದ ಕ್ರಮಬದ್ಧವಾದ ಸಂಶೋಧನೆಗಳೊಂದಿಗೆ ಖ್ಯಾತ ಸಂಶೋಧನಾ ಸಂಸ್ಥೆಗಳಾದ ಭಾರತೀಯ ಕೃಷಿ ಅನುಸಂಧಾನ ಪರಿಷತ್ತು (ಐ.ಸಿ.ಎ.ಆರ್), ಅಂತರಾಷ್ಟ್ರೀಯ ಭತ್ತ ಸಂಶೋಧನಾ ಸಂಸ್ಥೆ (ಐ.ಆರ್.ಆರ್.ಐ) ಮತ್ತು ಕೇಂದ್ರೀಯ ಆಹಾರ ಮತ್ತು ತಂತ್ರಜ್ಞಾನ ಸಂಶೋಧನಾ ಸಂಸ್ಥೆ (ಸಿ.ಎಫ್.ಟಿ.ಆರ್.ಐ.) ಮುಂತಾದ ಸಂಸ್ಥೆಗಳೊಂದಿಗೆ ಮುಖ್ಯ ಬೆಳೆಗಳ ಅಭಿವೃದ್ಧಿ ಮತ್ತು ಸುಧಾರಣೆಗಾಗಿ ಕೆಲವು ಸಂಘಟಿತ ಸಂಶೋಧನೆಗಳನ್ನು ಕೂಡ ಕೈಗೊಳ್ಳಲಾಗುತ್ತಿದೆ. ಅಚ್ಚುಕಟ್ಟು ಪ್ರದೇಶ ಅಭಿವೃದ್ಧಿ ಪ್ರಾಧಿಕಾರ(ಸಿ.ಎ.ಡಿ.ಎ) ಆಶ್ರಯದಲ್ಲಿ ವಿವಿಧ ಬೆಳೆಗಳ ನೀರಿನ ಅವಶ್ಯಕತೆಯ ಬಗ್ಗೆ ಸಂಶೋಧನಾ ಕಾರ್ಯಗಳನ್ನು ಕೈಗೊಳ್ಳಲಾಗುತ್ತಿದೆ. ಈ ಕೇಂದ್ರಗಳಲ್ಲಿ ಕಂಡು ಹಿಡಿಯಲ್ಪಟ್ಟ ಉತ್ತಮ ತಳಿ ಮತ್ತು ಕೃಷಿ ಪದ್ಧತಿಗಳನ್ನು ರೈತರು ಅಳವಡಿಸುವಂತೆ ಮಾಡಲು ಮತ್ತು ರೈತರ ಸಮಸ್ಯೆಗಳನ್ನು ತಜ್ಞರಿಗೆ ತಲುಪಿಸಿ ಅವುಗಳಿಗೆ ತಾಂತ್ರಿಕ ಪರಿಹಾರ ಕಂಡು ಹಿಡಿದು ನೆರವಾಗಲು ವಿಸ್ತರಣಾ ವಿಭಾಗ ಕೆಲಸ ಮಾಡುತ್ತಿದೆ. ಇದರ ಕಾರ್ಯವ್ಯಾಪ್ತಿ ಮಂಡ್ಯ ಮತ್ತು ಮೈಸೂರು ಜಿಲ್ಲೆಗಳ ೧೩ ತಾಲೂಕುಗಳನ್ನೊಳಗೊಂಡಿದೆ.

ಸಂಶೋಧನಾ ತಂತ್ರಜ್ಞಾನಗಳನ್ನು ರೈತರಿಗೆ ವರ್ಗಾಯಿಸುವ ಸಲುವಾಗಿ ಪ್ರಯೋಗ ಶಾಲೆಯಿಂದ ತಾಕುಗಳಿಗೆ ಎಂಬ ಯೋಜನೆ ಕೈಗೊಳ್ಳಲಾಗಿದ್ದು, ನುರಿತ ವಿಜ್ಞಾನಿಗಳು ಸಕ್ರಿಯವಾಗಿ ಭಾಗವಹಿಸುತ್ತಿದ್ದಾರೆ. ಭತ್ತ,ರಾಗಿ, ಕಬ್ಬು ಮತ್ತು ನೆಲಗಡಲೆ ಬೆಳೆಗಳ ತಳಿವರ್ಧಕ ಬಿತ್ತನೆ (ಬ್ರೀಡರ್ ಸೀಡ್) ಬೀಜ ಉತ್ಪಾದಿಸಿ ಕೃಷಿ ಇಲಾಖೆಗೂ ಹಾಗೂ ಸರ್ಕಾರದ ಅಧಿಕೃತ ಸಂಸ್ಥೆಗಳಿಗೂ ಒದಗಿಸಲಾಗುತ್ತದೆ. ಜೊತೆಗೆ ಹುಲ್ಲಿನ ಬೇರುಗಳು, ಜೈವಿಕ ಗೊಬ್ಬರಗಳು ಮತ್ತು ತೆಂಗಿನ ಸಸಿಗಳನ್ನೂ ರೈತರಿಗೆ ಒದಗಿಸಲಾಗುತ್ತದೆ.

**ತಳಿ ಅಭಿವೃದ್ಧಿ :** ಕೃಷಿ ವಿಶ್ವವಿದ್ಯಾನಿಲಯವು ಪ್ರಾರಂಭವಾದ ಮೇಲೆ ಭತ್ತದ ಸಂಶೋಧನೆಯನ್ನು ನಾಗೇನಹಳ್ಳಿಯಿಂದ ಮಂಡ್ಯಕ್ಕೆ ವರ್ಗಾಯಿಸಿ ರಾಜ್ಯದ ವಿವಿಧ ಪ್ರದೇಶಗಳಿಗೆ ಅಧಿಕ ಇಳುವರಿಯ ವಿವಿಧ ತಳಿಗಳನ್ನು ಅಭಿವೃದ್ಧಿಪಡಿಸುವ ಹೊಣೆಯನ್ನು ವಹಿಸಲಾಯಿತು. ಇದೇ ಸಮಯದಲ್ಲಿ ಆಮದು ಮಾಡಿಕೊಂಡ ತಾಯ್‌ಚುಂಗ್ ನೇಟೀವ್ ೧ ಮತ್ತು ಐ ಆರ್ ೮ ತಳಿಗಳನ್ನು ಈ ಕೇಂದ್ರದಲ್ಲಿ ಪರೀಕ್ಷಿಸಿ ರಾಜ್ಯದ ವಿವಿಧ ಪ್ರದೇಶಗಳಿಗೆ ಶಿಫಾರಸ್ಸು ಮಾಡಲಾಯಿತು. ಹೈದರಾಬಾದಿನಲ್ಲಿ ಅಭಿವೃದ್ಧಿಪಡಿಸಿದ ಜಯ ತಳಿಯು ಉತ್ತಮ ತಳಿಯೆಂದು ಗುರುತಿಸಿ ೧೯೬೮ ರಲ್ಲಿ ಪ್ರಪ್ರಥಮವಾಗಿ ಅಧಿಕ ಇಳುವರಿಯ ಜಯಭತ್ತದ ತಳಿಯನ್ನು ರಾಜ್ಯದಲ್ಲೂ ಬಿಡುಗಡೆ ಮಾಡಲಾಯಿತು.

ಅಧಿಕ ಇಳುವರಿಯ ತಳಿಗಳನ್ನು ಸಂಕರಣದಲ್ಲಿ ಉಪಯೋಗಿಸಿಕೊಂಡು ಹೊಸ ತಳಿಗಳನ್ನು ಅಭಿವೃದ್ಧಿಪಡಿಸುವಾಗ ರಾಜ್ಯದ ವಿವಿಧ ಪ್ರದೇಶದ ಮಣ್ಣು, ಹವಾಮಾನ, ಕೀಟ, ರೋಗ ಮತ್ತು ಅಕ್ಕಿಯ ಗುಣಗಳನ್ನು ಗಮನದಲ್ಲಿ ಇಟ್ಟುಕೊಳ್ಳಲಾಯಿತು. ಮೊದಲನೆಯ ಕಂತಿನಲ್ಲಿ ನೀರಾವರಿ ಪ್ರದೇಶಕ್ಕೆ ಬೇಕಾದ ವಿವಿಧ ಅವಧಿಯ ತಳಿಗಳನ್ನು ಬಿಡುಗಡೆ ಮಾಡಲಾಯಿತು. ಇದೇ ಸಮಯದಲ್ಲಿ ಇಂಡೋನೇಷಿಯಾದಿಂದ ಬೆಂಕಿ ರೋಗ ನಿರೋಧಕ ಇಂಟಾನನ್ನು ಘಟ್ಟ ಪ್ರದೇಶಗಳಿಗೂ, ಅನ್ನಪೂರ್ಣ ಎಂಬ ಕೇರಳದ ಕೆಂಪು ಅಕ್ಕಿ ಮತ್ತು ಜಿ.ಎಮ್.ಆರ್.೧೭ ಎಂಬ ಆಂಧ್ರ ಪ್ರದೇಶದ ಕಣೆ ನಿರೋಧಕ ತಳಿಗಳನ್ನು ಕರಾವಳಿ ಪ್ರದೇಶಕ್ಕೂ ಆಮದು ಮಾಡಿಕೊಂಡು, ಪರೀಕ್ಷಿಸಿ, ಶಿಫಾರಸ್ಸು ಮಾಡಲಾಯಿತು. ಇದೇ ಸಮಯದಲ್ಲಿ ವಿಕ್ರಮ್ ಎಂಬ ಕಣೆ ನಿರೋಧಕ ತಳಿಯನ್ನು ದೇಶದಲ್ಲಿ ಪ್ರಪ್ರಥಮವಾಗಿ

ರಾಜ್ಯದ ಕರಾವಳಿ ಪ್ರದೇಶಕ್ಕೆ ಬಿಡುಗಡೆ ಮಾಡಲಾಯಿತು. ಎರಡನೇ ಹಂತದಲ್ಲಿ ಭತ್ತದ ತಳಿಗಳನ್ನು ಅಭಿವೃದ್ಧಿಪಡಿಸುವಾಗ ಕೀಟ, ರೋಗ ಮತ್ತು ಬರನಿರೋಧಕ ಶಕ್ತಿಗಳನ್ನು ಸೇರಿಸುವ ಮತ್ತು ಅಕ್ಕಿಯ ಗುಣಗಳನ್ನು ಉತ್ತಮಪಡಿಸುವ ಅಂಶಗಳಿಗೆ ಹೆಚ್ಚಿನ ಪ್ರಾಧಾನ್ಯತೆಯನ್ನು ನೀಡಲಾಯಿತು. ಐಇಟಿ ೭೫೭೫ ಎಂಬ ಕಂದುಜಿಗಿ ಹುಳು ನಿರೋಧಕ ತಳಿಯನ್ನು ಅಭಿವೃದ್ಧಿಪಡಿಸಿ ಇದರ ಬಾಧೆಯಿರುವ ಜಮೀನುಗಳಿಗೆ ಹಾಕಲು ಶಿಫಾರಸ್ಸು ಮಾಡಲಾಯಿತು. ಘಟ್ಟ ಪ್ರದೇಶಗಳಿಗೆ ಬೆಂಕಿ ರೋಗ ನಿರೋಧಕ ಐಇಟಿ ೭೯೯೧ ತಳಿಯನ್ನು ಕಂಡು ಹಿಡಿಯಲಾಯಿತು. ಇಲ್ಲಿಯವರೆಗೆ ಬಿಡುಗಡೆ ಮಾಡಿದ ತಳಿಗಳ ವಿವರಗಳನ್ನು ಕೋಷ್ಟಕ ೪.೫ ರಲ್ಲಿ ನೀಡಿದೆ.

## ಕೋಷ್ಟಕ ೪.೫ ಭತ್ತದ ತಳಿಗಳ ವಿವರ

| ಬತ್ತದ ತಳಿಗಳು | ಅವಧಿ (ದಿನ ಗಳಲ್ಲಿ) | ಅಕ್ಕಿಯ ಗುಣ | ಬಿತ್ತನೆ ಕಾಲ | ನಾಟಿ ಕಾಲ | ಇಳುವರಿ ಹೆಕ್ಟೇರ್‌ಗೆ ಟನ್‌ಗಳಲ್ಲಿ |
|---|---|---|---|---|---|
| | | ನಾಲಾ ನೀರಾವರಿ ಪ್ರದೇಶಗಳು | | | |
| ೧ | ೨ | ೩ | ೪ | ೫ | ೬ |
| | | **ಮುಂಗಾರು** | | | |
| ಜಯ | ೧೪೦–೧೪೫ | ದಪ್ಪ | ಜೂನ್ ಕೊನೆಯೊಳಗೆ | ಜುಲೈ ಮೂರನೇ ವಾರದೊಳಗೆ | ೫.೫ ರಿಂದ ೬.೦ |
| ಮಂಡ್ಯ ವಿಜಯ | ೧೪೦–೧೪೫ | ಸಣ್ಣ | ಜೂನ್ ಕೊನೆಯೊಳಗೆ | ಜುಲೈ ಮೂರನೇ ವಾರದೊಳಗೆ | ೫.೦ ರಿಂದ ೫.೫ |
| ಪ್ರಕಾಶ್ | ೧೪೦–೧೪೬ | ಸಣ್ಣ | ಜೂನ್ ಕೊನೆಯೊಳಗೆ | ಜುಲೈ ಮೂರನೇ ವಾರದೊಳಗೆ | ೫.೦ ರಿಂದ ೫.೬ |
| ಐ ಇ ಟಿ ಆ೧೧೬ | ೧೩೫–೧೪೦ | ಮಧ್ಯಮ ಸಣ್ಣ | ಜುಲೈ ಮೊದಲನೇ ವಾರದೊಳಗೆ | ಜುಲೈ ಕೊನೆಯೊಳಗೆ | ೪.೫ ರಿಂದ ೫.೦ |
| ಐ ಇ ಟಿ ೭೫೭೫ | ೧೩೦–೧೩೫ | ಮಧ್ಯಮ ಸಣ್ಣ | ಜುಲೈ ಎರಡನೇ ವಾರದೊಳಗೆ | ಆಗಸ್ಟ್ ಮೊದಲನೇ ವಾರದೊಳಗೆ | ೪.೫ ರಿಂದ ೫.೦ |
| ಐ ಆರ್ ೨೦ | ೧೩೦–೧೩೫ | ಮಧ್ಯಮ ಸಣ್ಣ | ಜುಲೈ ಎರಡನೇ ವಾರದೊಳಗೆ | ಆಗಸ್ಟ್ ಮೊದಲನೇ ವಾರದೊಳಗೆ | ೪.೫ ರಿಂದ ೫.೦ |
| ರಾಶಿ | ೧೨೦–೧೨೫ | ಮಧ್ಯಮ ಸಣ್ಣ | ಜುಲೈ ಕೊನೆಯೊಳಗೆ | ಆಗಸ್ಟ್ ಮೂರನೇ ವಾರದೊಳಗೆ | ೪.೦ ರಿಂದ ೪.೫ |
| ಕರ್ನಾಟಕ ಹೈಬ್ರಿಡ್ ಬತ್ತ (ಕೆಆರ್‌ಎಚ್೧) | ೧೨೦–೧೨೬ | ಮಧ್ಯಮ ಸಣ್ಣ | ಜುಲೈ ಎರಡನೇ ವಾರದೊಳಗೆ | ಆಗಸ್ಟ್ ಮೂರನೇ ವಾರದೊಳಗೆ | ೫.೫ ರಿಂದ ೬.೦ |
| ಕರ್ನಾಟಕ ಹೈಬ್ರಿಡ್ ಬತ್ತ (ಕೆಆರ್‌ಎಚ್೨) | ೧೩೦–೧೩೫ | ಮಧ್ಯಮ ಸಣ್ಣ | ಜುಲೈ ಕೊನೆಯೊಳಗೆ | ಆಗಸ್ಟ್ ಮೊದಲನೇ ವಾರದೊಳಗೆ | ೫.೫ ರಿಂದ ೬.೦ |
| ಮಂಗಳ | ೧೧೫–೧೨೦ | ಮಧ್ಯಮ ಸಣ್ಣ | ಆಗಸ್ಟ್ ಎರಡನೇ ವಾರದೊಳಗೆ | ಸೆಪ್ಟೆಂಬರ್ ಮೊದಲನೇ ವಾರದೊಳಗೆ | ೩.೫ ರಿಂದ ೪.೦ |
| | | | **ಬೇಸಿಗೆ** | | |
| ಅಲ್ಪಾವಧಿ ತಳಿಗಳು | – | – | ಜನವರಿ ೩ನೇ ವಾರದೊಳಗೆ | ಫೆಬ್ರವರಿ ೨ನೇ ವಾರದೊಳಗೆ | |

| ೧ | ೨ | ೩ | ೪ | ೫ | ೬ |
|---|---|---|---|---|---|
| | | | **ಚೌಳುಮಣ್ಣಿನ ಪ್ರದೇಶಗಳು** | | |
| | | | **ಮುಂಗಾರು** | | |
| ಪ್ರಕಾಶ್ | ೧೪೦–೧೪೫ | ಸಣ್ಣ | ಜೂನ್ ಕೊನೆಯೊಳಗೆ | ಜುಲೈ ಮೊದಲನೇ ವಾರದೊಳಗೆ | ೪.೦ ರಿಂದ ೪.೫ |
| ಪ್ರಗತಿ | ೧೩೦–೧೩೫ | ಮಧ್ಯಮ ಸಣ್ಣ | ಜುಲೈ ಎರಡನೇ ವಾರದೊಳಗೆ | ಆಗಸ್ಟ್ ಮೊದಲನೇ ವಾರದೊಳಗೆ | ೩.೦ ರಿಂದ ೩.೫ |
| ಐಆರ್ ೩೦೮೬೪ | ೧೩೦–೧೩೫ | ಮಧ್ಯಮ ಸಣ್ಣ | ಜುಲೈ ಎರಡನೇ ವಾರದೊಳಗೆ | ಆಗಸ್ಟ್ ಮೊದಲನೇ ವಾರದೊಳಗೆ | ೩.೫ ರಿಂದ ೪.೦ |
| ತೆಲ್ಲಹಂಸ | ೧೨೦–೧೨೫ | ಮಧ್ಯಮ ಸಣ್ಣ | ಜುಲೈ ಕೊನೆಯೊಳಗೆ | ಆಗಸ್ಟ್ ಮೂರನೇ ವಾರದೊಳಗೆ | ೩.೦ ರಿಂದ ೩.೫ |
| ಮಂಗಳ | ೧೧೫–೧೨೦ | ಮಧ್ಯಮ ಸಣ್ಣ | ಆಗಸ್ಟ್ ಎರಡನೇ ವಾರದೊಳಗೆ | ಸೆಪ್ಟೆಂಬರ್ ಮೂರನೇ ವಾರದೊಳಗೆ | ೩.೦ ರಿಂದ ೩.೫ |
| | | | **ಬೇಸಿಗೆ** | | |
| ರಾಶಿ | ೧೨೦–೧೨೫ | ಮಧ್ಯಮ ಸಣ್ಣ | ಜನವರಿ ಮೂರನೇ ವಾರದೊಳಗೆ | ಫೆಬ್ರವರಿ ಎರಡನೇ ವಾರದೊಳಗೆ | ೩.೫ ರಿಂದ ೪.೦ |
| ಮಂಗಳ | ೧೧೫–೧೨೦ | ಮಧ್ಯಮ ಸಣ್ಣ | ಜನವರಿ ಮೂರನೇ ವಾರದೊಳಗೆ | ಫೆಬ್ರವರಿ ಎರಡನೇ ವಾರದೊಳಗೆ | ೩.೫ ರಿಂದ ೪.೦ |

| ಭತ್ತದ ತಳಿ | ಬಿಡುಗಡೆ ಯಾದ ವರ್ಷ | ಅವಧಿ (ದಿವಸಗಳಲ್ಲಿ) | ಇಳುವರಿ ಸಾಮರ್ಥ್ಯ ಹೆಕ್ಟೇರಿಗೆ ಟನ್‌ಗಳಲ್ಲಿ | ವಿಶೇಷ ಗುಣಗಳು |
|---|---|---|---|---|
| ೧. ಜಯ | ೧೯೬೮ | ೧೪೦–೧೪೫ | ೮.೦–೮.೫ | ಹೆಚ್ಚು ಪ್ರದೇಶಗಳಿಗೆ ಹೊಂದಿಕೊಳ್ಳುವ ತಳಿ |
| ೨. ಸೋನಾ | ೧೯೭೪ | ೧೪೫–೧೫೦ | ೭.೦–೭.೫ | ಸಣ್ಣ ಅಕ್ಕಿ, ಬಿಗಿ ತೆನೆ |
| ೩. ವಾಣಿ | ೧೯೭೬ | ೧೪೫–೧೫೦ | ೭.೫–೮.೦ | ಸಣ್ಣ ಅಕ್ಕಿ |
| ೪. ಪ್ರಕಾಶ್ | ೧೯೭೭ | ೧೪೦–೧೪೫ | ೭.೫–೮.೦ | ಸಣ್ಣ ಅಕ್ಕಿ |
| ೫. ಐ ಆರ್ ೨೦ | ೧೯೭೨ | ೧೩೦–೧೩೫ | ೬.೦–೬.೫ | ಹೆಚ್ಚು ಪ್ರದೇಶಗಳಿಗೆ ಹೊಂದಿಕೊಳ್ಳುವ ತಳಿ |
| ೬. ಪುಷ್ಪ | ೧೯೭೬ | ೧೨೫–೧೩೦ | ೬.೦–೬.೫ | ಸಣ್ಣ ಅಕ್ಕಿ |
| ೭. ಪ್ರಗತಿ | ೧೯೭೨ | ೧೩೦–೧೩೫ | ೫.೮–೬.೦ | ಉತ್ತಮ ಅಕ್ಕಿ |
| ೮. ಮಧು | ೧೯೭೨ | ೧೨೦–೧೨೫ | ೫.೮–೬.೪ | ಉತ್ತಮ ಅಕ್ಕಿ |
| ೯. ರಾಶಿ | ೧೯೭೭ | ೧೨೦–೧೨೫ | ೫.೮–೬.೪ | ಬರ ನಿರೋಧಕ |
| ೧೦. ಮಂಗಳ | ೧೯೭೫ | ೧೧೫–೧೨೦ | ೫.೦–೫.೫ | ಚೌಳು ನಿರೋಧಕ |
| ೧೧. ಇಂಟಾನ್ | ೧೯೭೫ | ೧೫೫–೧೬೦ | ೪.೫–೫.೦ | ಅಧಿಕ ಹುಲ್ಲಿನ ತಳಿ |
| ೧೨. ವಿಕ್ರಮ್ | ೧೯೭೪ | ೧೩೫–೧೪೦ | ೫.೦–೫.೫ | ಕಣೆ ಹುಳು ನಿರೋಧಕ |
| ೧೩. ಶಕ್ತಿ | ೧೯೭೮ | ೧೩೦–೧೩೫ | ೫.೦–೫.೫ | ಕಣೆ ಹುಳು ನಿರೋಧಕ |
| ೧೪. ಜಿ.ಎಂ.ಆರ್.೧೭ | ೧೯೭೬ | ೧೧೦–೧೧೫ | ೪.೦–೪.೫ | ಕಣೆ ಹುಳು ನಿರೋಧಕ |
| ೧೫. ಅನ್ನಪೂರ್ಣ | ೧೯೭೭ | ೧೦೦–೧೧೫ | ೪.೦–೪.೫ | ಕೆಂಪು ಅಕ್ಕಿ |
| ೧೬. ಫಲ್ಗುಣ | ೧೯೭೬ | ೧೪೫–೧೫೦ | ೫.೫–೬.೦ | ಕಣೆ ಹುಳು ನಿರೋಧಕ |
| ೧೭. ಮಂಡ್ಯ ವಾಣಿ | ೧೯೮೨ | ೧೩೦–೧೩೫ | ೬.೦–೬.೫ | ಅತಿ ಉತ್ತಮ ಅಕ್ಕಿ |
| ೧೮. ಕರ್ಣ | ೧೯೮೫ | ೧೩೦–೧೩೫ | ೫.೫–೬.೦ | ಉತ್ತಮ ಇಳುವರಿ |
| ೧೯. ಮಹಾವೀರ | ೧೯೮೫ | ೧೩೦–೧೩೫ | ೪.೫–೫.೦ | ಕಣೆ ಹುಳು ನಿರೋಧಕ |
| ೨೦. ಅವಿನಾಶ್ | ೧೯೮೫ | ೧೪೦–೧೪೫ | ೪.೫–೫.೫ | ಬರ ನಿರೋಧಕ |
| ೨೧. ಅಭಿಲಾಷ್ | ೧೯೮೫ | ೧೫೫–೧೬೦ | ೫.೫–೬.೦ | ಬರ ನಿರೋಧಕ |
| ೨೨. ಐ.ಇ.ಟಿ.೭೧೯೧ | ೧೯೮೭ | ೧೪೫–೧೫೦ | ೪.೫–೫.೦ | ಬೆಂಕಿ ರೋಗ ನಿರೋಧಕ |
| ೨೩. ಐ.ಇ.ಟಿ. ೭೫೭೫ | ೧೯೮೮ | ೧೩೦–೧೩೫ | ೬.೦–೬.೫ | ಕಂದು ಜಿಗಿ ಹುಳು ನಿರೋಧಕ |

**ರಾಗಿ ತಳಿ ಅಭಿವೃದ್ಧಿ:** ಈ ಕೇಂದ್ರದಲ್ಲಿ ರಾಗಿ ತಳಿ ಅಭಿವೃದ್ಧಿ ಕಾರ್ಯಗಳನ್ನು ಮೂರು ಹಂತಗಳಲ್ಲಿ ಕೈಗೊಳ್ಳಲಾಗಿದೆ. ೧೯೩೧ರಿಂದ ೧೯೫೧ರ ಸಮಯದ ಮೊದಲ ಹಂತದಲ್ಲಿ ದೇಶೀಯ ತಳಿಗಳ ಸಂಗ್ರಹಣೆ ಹಾಗೂ ಆಯ್ಕೆ ಕೆಲಸ ಮಾಡಲಾಯಿತು. ಆ ಸಮಯದಲ್ಲಿ ರಾಗಿಯ ಸರಾಸರಿ ಇಳುವರಿಯು ಮಳೆ ಆಶ್ರಯದಲ್ಲಿ ಹೆಕ್ಟೇರಿಗೆ ೭.೫ ಕ್ವಿಂಟಾಲ್ ಮತ್ತು ನೀರಾವರಿಯಲ್ಲಿ ೧೫ ಕ್ವಿಂಟಾಲ್ ಇತ್ತು. ೧೯೫೧ ರಿಂದ ೧೯೬೪ರ ಎರಡನೇ ಹಂತದ ರಾಗಿ ಅಭಿವೃದ್ಧಿಯಲ್ಲಿ ವಿವಿಧ ನಾಡ ತಳಿಗಳ ಸಂಕರಣ (ಹೈಬ್ರಿಡ್) ಕೆಲಸವನ್ನು ಕೈಗೊಳ್ಳಲಾಯಿತು. ಇದರಿಂದ ಮಳೆ ಆಶ್ರಿತ ಮತ್ತು ನೀರಾವರಿ ಭೂಮಿಗಳೆರಡರಲ್ಲೂ ರಾಗಿಯ ಇಳುವರಿಯು ಅಧಿಕಗೊಂಡು ಕ್ರಮವಾಗಿ ಹೆಕ್ಟೇರಿಗೆ ೨೨ ಕ್ವಿಂಟಾಲ್ ಮತ್ತು ೩೭ ಕ್ವಿಂಟಾಲ್‌ಗಳಿಗೆ ತಲುಪಿತು. ಇನ್ನು ಮೂರನೇ ಹಂತವು ಪ್ರಮುಖವಾಗಿದ್ದು ಇದು ಕೃಷಿ ವಿಶ್ವವಿದ್ಯಾನಿಲಯದ ಆರಂಭದಿಂದ ಇದುವರೆವಿಗೂ ನಡೆದ ಚಟುವಟಿಕೆಗಳನ್ನೊಳಗೊಂಡಿದೆ. ಈ ಹಂತದ ತಳಿ ಅಭಿವೃದ್ಧಿ ಕಾರ್ಯದಲ್ಲಿ ಆಫ್ರಿಕಾ ದೇಶದ ಸೀಮೆ ರಾಗಿ ತಳಿಗಳ ಬಳಕೆ ಮತ್ತು ಸಂಪರ್ಕ ವಿಧಾನದ ಸಂಕರಣ ಕೆಲಸಗಳಿಂದ ರಾಗಿ ತಳಿ ಅಭಿವೃದ್ಧಿ ಕೆಲಸಕ್ಕೆ ಹೊಸ ಆಯಾಮ ದೊರೆತಂತಾಯಿತು. ಈ ಶ್ರಮದಾಯಕ ಕೆಲಸದಿಂದ ಮಳೆ ಆಶ್ರಯ ಹಾಗೂ ನೀರಾವರಿಗಾಗಿ ವಿವಿಧ ಕೃಷಿ ವಲಯಗಳಿಗೆ ಸೂಕ್ತವಾದ, ವಿವಿಧ ಕಾಲಮಾನದಲ್ಲಿ ಬೆಳೆಯಲಾಗುವ ಕೀಟ ಹಾಗೂ ರೋಗ ಬಾಧೆಯನ್ನು ತಡೆದುಕೊಳ್ಳುವ ರಾಗಿ ತಳಿಗಳನ್ನು ಅಭಿವೃದ್ಧಿಪಡಿಸಲಾಯಿತು. ಈ ತಳಿಗಳು ಭಾರತ ಮತ್ತು ಆಫ್ರಿಕಾದ ರಾಗಿ ತಳಿಗಳ ಸಂಕರಣದಿಂದಾದುದರಿಂದ ಇವುಗಳಿಗೆ ಇಂಡಾಫ್ ತಳಿಗಳೆಂದು ಹೆಸರಿಡಲಾಯಿತು. ಈ ತಳಿಗಳಲ್ಲಿ ಇಂಡಾಫ್ ೧,೩,೫,೭,೮ ಮತ್ತು ೯ ತಳಿಗಳ ಬಿಡುಗಡೆಯಾಗಿದ್ದು ಇದು ಕೃಷಿ ವಿಶ್ವವಿದ್ಯಾನಿಲಯದ ಮಹತ್ವದ ಸಾಧನೆಯಾಗಿದೆ. ಈ ತಳಿಗಳ ಅಭಿವೃದ್ಧಿಯಿಂದಾಗಿ ರಾಗಿ ಇಳುವರಿಯಲ್ಲಿ ಪ್ರತಿ ಹೆಕ್ಟೇರಿಗೆ ಖುಷ್ಕಿಯಲ್ಲಿ ಸುಮಾರು ೨೫-೩೦ ಕ್ವಿಂಟಾಲ್ ಮತ್ತು ನೀರಾವರಿಯಲ್ಲಿ ೪೫-೫೦ ಕ್ವಿಂಟಾಲ್‌ನಷ್ಟು ಇಳುವರಿ ಪಡೆಯಲು ಸಾಧ್ಯವಾಗಿದೆ.

ರಾಗಿ ತಳಿ ಅಭಿವೃದ್ಧಿಯಲ್ಲಿ ಪ್ರಮುಖವಾದ ಹೆಸರು ರಾಗಿ ಲಕ್ಷ್ಮಣಯ್ಯ ಅವರದು. ಇವರು ಅರುಣ, ಅನ್ನಪೂರ್ಣ, ಉದಯ, ಪೂರ್ಣ, ಕಾವೇರಿ, ಶಕ್ತಿ ಹಾಗೂ ಇಂಡಾಫ್ ತಳಿಗಳನ್ನು ಅಭಿವೃದ್ಧಿಪಡಿಸುವಲ್ಲಿ ಮುಖ್ಯ ಪಾತ್ರವಹಿಸಿದ್ದಾರೆ. ಇಂಡಾಫ್ ತಳಿಗಳ ಬಿಡುಗಡೆಯಿಂದ ಗರಿಷ್ಠ ಪ್ರಮಾಣದ ಉತ್ಪಾದನೆ ಪಡೆಯುವುದರೊಂದಿಗೆ ಸಾಕಷ್ಟು ಸ್ವಾವಲಂಬನೆ ಸಾಧಿಸಲಾಯಿತು. ಈ ತಳಿಗಳು ಅಧಿಕ ಇಳುವರಿ ಕೊಡಬಲ್ಲವಾಗಿದ್ದು, ಉತ್ಪಾದನಾ ಘಟಕಗಳಿಗೆ ಚೆನ್ನಾಗಿ ಸ್ಪಂದಿಸುತ್ತಿದ್ದು ವಿವಿಧ ಕೃಷಿ ವಲಯಗಳಿಗೆ ಸೂಕ್ತವೆನಿಸಿವೆ. ಈ ತಳಿಗಳ ಉಪಯೋಗದಿಂದ ಇದುವರೆಗೆ ಕಾರ್ ಮತ್ತು ಹೈನ್ ಬೆಳೆಯಾಗಿ ಬೆಳೆಯುವ ರಾಗಿಯನ್ನು ಕೊನೆ ಮುಂಗಾರು, ಹಿಂಗಾರು ಹಾಗೂ ನೀರಾವರಿ ಹೀಗೆ ಮೂರು ಬೆಳೆಗಳಾಗಿ ಬೆಳೆಯಲು ಸಾಧ್ಯವಾಗಿದೆ. ಇತ್ತೀಚಿನ ಸಂಶೋಧನೆಗಳಿಂದ ಹೊಸ ರಾಗಿ ತಳಿಗಳಾದ ಇಂಡಾಫ್ ೬, ೧೦, ೧೫, ಎಂ.ಆರ್.೧, ಎಂ.ಆರ್ ೨ ಮತ್ತು ಇಂಡಾಫ್ ೧೧ ಬಿಳಿ ರಾಗಿ ತಳಿಗಳನ್ನು ಅಭಿವೃದ್ಧಿಪಡಿಸಲಾಯಿತು. ಇವು ರೊಟ್ಟಿ, ಮುದ್ದೆ, ಮಾಲ್ಟ್ ಹಾಗೂ ಮಕ್ಕಳ ಪೌಷ್ಟಿಕ ಆಹಾರ ಮುಂತಾದವುಗಳಿಗೆ ಉಪಯುಕ್ತವೆನಿಸಿವೆ.

**ಕೋಷ್ಟಕ ೪.೬ ಜಿಲ್ಲೆಯಲ್ಲಿ ಬೆಳೆಯುವ ವಿವಿಧ ರಾಗಿ ತಳಿಗಳ ವಿವರ**

| ಕ್ರ.ಸಂ. | ತಳಿಯ ಹೆಸರು | ಅವಧಿ (ದಿನಗಳಲ್ಲಿ) | ಇಳುವರಿ (ಟನ್ / ಹೆಕ್ಟೇರ್) |
|---|---|---|---|
| ೧ | ೨ | ೩ | ೪ |
| ೧. | ಹೆಚ್. ೨೨ | ೧೫೦ | ೧.೩-೧.೬ |
| ೨. | ಕೆ. ೧ | ೧೨೦-೧೨೫ | ೧.೧-೧.೩ |
| | | | ೧.೬-೨.೨ (ನೀ) |

| ೧ | ೨ | ೩ | ೪ |
|---|---|---|---|
| ೩ | ಆರ್ ೦೮೭೦ | ೧೩೦–೧೫೫ | ೧.೧–೧.೩ |
| ೪. | ಇ.ಎಸ್ ೧೧ | ೧೧೦–೧೨೦ | ೦.೯–೧.೩ |
| | | | ೧.೧–೧.೬ (ನೀ) |
| ೫. | ಸಿ.ಓ. ೧ | ೧೨೦ | ೨.೪–೨.೭ |
| ೬. | ಇ.ಎಸ್. ೧೩ | ೧೧೫–೧೨೦ | ೧.೬–೧.೭ |
| ೭. | ಹೆಚ್. ೧ | ೧೨೦–೧೩೦ | ೨.೨ |
| ೮. | ಅರುಣ | ೬೫ | ೨.೫ |
| ೯. | ಪೂರ್ಣ | ೧೦೫ | ೪.೦ |
| ೧೦. | ಉದಯ | ೯೦ | ೩.೦ |
| ೧೧. | ಅನ್ನಪೂರ್ಣ | ೧೧೦ | ೪.೦ |
| ೧೨. | ಕಾವೇರಿ | ೧೨೦ | ೪.೦ |
| ೧೩. | ಶಕ್ತಿ | ೧೨೦ | ೩.೦–೪.೫ |
| ೧೪. | ೫–೬ | ೯೨ | ೩.೦ |
| ೧೫. | ಇಂಡಾಫ್–೧ | ೧೨೦–೧೨೫ | ೩.೬–೩.೮ |
| ೧೬. | ಇಂಡಾಫ್–೩ | ೧೩೦–೧೩೫ | ೩.೬–೪.೦ |
| ೧೭. | ಇಂಡಾಫ್–೫ | ೧೦೫–೧೧೫ | ೪.೫–೫.೦ |
| ೧೮. | ಇಂಡಾಫ್–೭ | ೧೧೫–೧೨೫ | ೫.೦–೬.೦ |
| ೧೯. | ಇಂಡಾಫ್–೮ | ೧೨೦–೧೨೫ | ೩.೦–೪.೦ |
| ೨೦. | ಇಂಡಾಫ್–೯ | ೯೫–೧.೫ | ೩.೦–೪.೦ |
| ೨೧. | ಇಂಡಾಫ್–೬ | ೧೧೫–೧೨೦ | ೩.೫–೪.೦ |
| ೨೨. | ಇಂಡಾಫ್–೧೦ | ೧೨೦–೧೨೫ | ೪.೦–೫.೦ |
| ೨೩. | ಇಂಡಾಫ್–೧೧ | ೧೧೫–೧೨೦ | ೩.೫–೪.೦ |
| | | | ೪.೦–೪.೫ (ನೀ) |
| ೨೪. | ಇಂಡಾಫ್–೧೫ | ೧೨೫–೧೩೫ | ೪.೦–೪.೫ |
| ೨೫. | ಎಂ. ಆರ್.–೧ | ೧೨೦–೧೨೫ | ೩.೫–೪.೫ |
| | | | ೨.೫–೩.೦ (ನೀ) |
| ೨೬. | ಎಂ. ಆರ್–೨ | ೧೨೦–೧೨೫ | ೩.೦–೩.೫ |
| | | | ೨.೦–೨.೫ |
| ೨೭. | ಎಂ. ಆರ್–೩ | ೧೨೫–೧೩೦ | ೪.೫–೫.೦ |
| | | | ೫.೫–೬.೦ (ನೀ) |
| ೨೮. | ಪಿ. ಆರ್–೨೦೨ | ೧೧೫–೧೨೦ | ೨.೦–೨.೫ |
| ೨೯. | ಹೆಚ್. ಆರ್. ೯೧೧ | ೧೧೫–೧೨೫ | ೩.೦–೩.೫ |
| | | | ೨.೦–೩.೦ (ನೀ) |
| ೩೦. | ಜಿ.ಪಿ.ಯು. ೨೮ | ೧೦೫–೧೧೫ | ೩.೫–೪.೦ |
| | | | ೨.೫–೩.೦ (ನೀ) |
| ೩೧. | ಜಿ.ಪಿ.ಯು.–೨೬ | ೯೫–೧೦೫ | ೩.೦–೩.೫ |
| | | | ೨.೫–೩.೦ |
| ೩೨. | ಎಲ್. ೫ | ೧೨೦–೧೨೫ | ೨.೫–೩.೦ |

ಮುಸುಕಿನ ಜೋಳದ ಕೇದಿಗೆ ರೋಗ ನಿರೋಧಕ ತಳಿ ಅಭಿವೃದ್ಧಿ ರಾಷ್ಟ್ರೀಯ ಯೋಜನೆಯು ವಿ.ಸಿ.ಫಾರಂನಲ್ಲಿ ಕೇದಿಗೆ ರೋಗದ ಮೇಲೆ ಸಂಶೋಧನೆ ನಡೆಸುವ ಮುಖ್ಯ ಉದ್ದೇಶದಿಂದ ೧೯೮೧ರಲ್ಲಿ ಅಸ್ತಿತ್ವಕ್ಕೆ ಬಂದಿತು. ರಾಜ್ಯದಲ್ಲಿ ಅದುವರೆಗೆ ಕೇದಿಗೆ ಮತ್ತು ಹುರಿ ಜಿಂಕೆ ರೋಗ ನಿರೋಧಕ ಶಕ್ತಿಯುಳ್ಳ ತಳಿಗಳ ಕೊರತೆ ಇದ್ದಿತು. ಮಂಡ್ಯ ಮತ್ತು ನಾಗೇನಹಳ್ಳಿ ಸಂಶೋಧನಾ ಕೇಂದ್ರಗಳಲ್ಲಿನ ಮುಸುಕಿನ ಜೋಳದ ತಜ್ಞರ ಸತತ ಪರಿಶ್ರಮದಿಂದಾಗಿ ಗಂಗಾ-೧೧ ಎಂಬ ಸಂಕರಣ ತಳಿಯನ್ನು ಬಿಡುಗಡೆ ಮಾಡಲಾಗಿದೆ. ಈ ಸಂಕರಣ ತಳಿಯು ಮೇಲೆ ನಮೂದಿಸಿರುವ ರೋಗಗಳ ವಿರುದ್ಧ ನಿರೋಧಕ ಶಕ್ತಿಯನ್ನು ಹೊಂದಿದ್ದು, ದೇಶದೆಲ್ಲೆಡೆ ಪ್ರಸಿದ್ಧಿ ಹೊಂದಿದೆ.

**ಕಬ್ಬಿನ ತಳಿ ಅಭಿವೃದ್ಧಿ:** ಈ ಕೇಂದ್ರದಿಂದ ರಾಜ್ಯದ ದಕ್ಷಿಣ ಭಾಗಗಳಿಗೆ, ಅದರಲ್ಲೂ ಮುಖ್ಯವಾಗಿ ಕಾವೇರಿ ಜಲಾನಯನ ಪ್ರದೇಶದ ಕಬ್ಬಿನ ಸಾಗುವಳಿಗೆ ಮೂಲ ಬೇಸಾಯ ತಾಂತ್ರಿಕತೆಗಳಲ್ಲದೇ ಇತ್ತೀಚಿನ ಸಮಸ್ಯೆಗಳಿಗನುಗುಣವಾಗಿ ಸಂಶೋಧನೆ ಕೈಗೊಂಡು ಹಲವಾರು ಸುಧಾರಿತ ಬೇಸಾಯ ಪದ್ಧತಿಗಳನ್ನು ಶಿಫಾರಸ್ಸು ಮಾಡಲಾಗುತ್ತಿದೆ. ಕಬ್ಬು ಮತ್ತು ಸಕ್ಕರೆ ಇಳುವರಿಯನ್ನು ಹೆಚ್ಚಿಸುವುದಲ್ಲದೇ ಸಕ್ಕರೆ ಕಾರ್ಖಾನೆಗಳ ದೀರ್ಘಾವಧಿ ಅರೆಯುವಿಕೆಗೆ, ವಿವಿಧ ಕಾಲದ ನಾಟಿ ಹಾಗೂ ಕಟಾವಿಗೆ ಯೋಗ್ಯವಾದ ತಳಿಗಳ ಬಳಕೆ ಅತ್ಯಾವಶ್ಯಕ. ಈ ದಿಶೆಯಲ್ಲಿ ಕೈಗೊಂಡ ಸಂಶೋಧನೆಯ ಫಲವಾಗಿ ಕೆಳಕಂಡ ತಳಿಗಳನ್ನು ಬಿಡುಗಡೆ ಮಾಡಲಾಗಿದೆ. ಸಿ.ಓ.೪೧೯ ತಳಿಯು ಮಧ್ಯಮಾವಧಿಯಿಂದ ದೀರ್ಘಾವಧಿ ಅಂದರೆ ೧೨-೧೪ ತಿಂಗಳ ಸಾಗುವಳಿಗೆ ಸೂಕ್ತ ತಳಿಯಾಗಿ ರಾಜ್ಯದ ದಕ್ಷಿಣ ಭಾಗಗಳಿಗೆ ಶಿಫಾರಸ್ಸು ಮಾಡಲ್ಪಟ್ಟಿದೆ. ಇದು ಅಧಿಕ ಸಕ್ಕರೆ ಅಂಶ ಹೊಂದಿದ್ದು ಜೂನ್-ಆಗಸ್ಟ್ ತಿಂಗಳುಗಳಲ್ಲಿ ನಾಟಿ ಮಾಡಿದ ಬೆಳೆಯಿಂದ ಎಕರೆಗೆ ಸರಾಸರಿ ೬೦-೭೦ ಟನ್ ಇಳುವರಿ ಪಡೆಯಬಹುದು. ಇದು ಬೆಲ್ಲ ತಯಾರಿಕೆಗೂ, ಕೂಳೆ ಬೇಸಾಯಕ್ಕೂ ಯೋಗ್ಯ ತಳಿ. ಇದು ಶುಷ್ಕ ವಾತಾವರಣದಲ್ಲಿ ಸಹ ತೃಪ್ತಿಕರ ಇಳುವರಿ ಕೊಡುತ್ತದೆ. ೧೨-೧೩ ತಿಂಗಳಿಗೆ ಕಟಾವಿಗೆ ಬರುವ ಸಿ. ಓ ೬೨೧೭೫ ಎಂಬ ಮಧ್ಯಮಾವಧಿ ತಳಿಯನ್ನು ರಾಜ್ಯದ ದಕ್ಷಿಣ ಭಾಗಗಳ ಸಾಗುವಳಿಗೆ ಶಿಫಾರಸ್ಸು ಮಾಡಲಾಗಿದೆ. ಇದು ಸಿ ಓ ೪೧೯ ತಳಿಗಿಂತ ಶೇ.೨೫-೩೦ ರಷ್ಟು ಹೆಚ್ಚಿನ ಕಬ್ಬಿನ ಇಳುವರಿ ಹಾಗೂ ಅದರಷ್ಟೇ ಸಕ್ಕರೆ ಅಂಶ ಹೊಂದಿದ್ದು ಅಧಿಕ ಇಳುವರಿ ತಳಿಯೆಂದು ಪ್ರಸಿದ್ಧಿಯಾಗಿದೆ. ಇದು ಬೆಲ್ಲ ತಯಾರಿಕೆಗೂ ಸೂಕ್ತ ತಳಿ. ಬಿ೩೭೧೭೨ ಎಂಬ ತಳಿಯನ್ನು ಬೇಸಿಗೆಗೆ ನಾಟಿ ಹಾಗೂ ತಡವಾಗಿ ಕಟಾವು ಮಾಡುವ ಸನ್ನಿವೇಶಕ್ಕೆ ಶಿಫಾರಸ್ಸು ಮಾಡಲಾಗಿದೆ. ಈ ತಳಿಯು ಸಿ ಓ ೪೧೯ ತಳಿಗಿಂತ ಶೇ.೨೫ರಷ್ಟು ಹೆಚ್ಚಿನ ಇಳುವರಿ ಹೊಂದಿದ್ದು ಉತ್ತಮ ಸಕ್ಕರೆ ಅಂಶವುಳ್ಳದ್ದಾಗಿದೆ. ಬೆಲ್ಲ ತಯಾರಿಕೆ ಹಾಗೂ ಕೂಳೆ ಬೇಸಾಯಕ್ಕೆ ಉತ್ತಮ ತಳಿ ಎಂದು ಕಂಡು ಬಂದಿದೆ. ರಾಜ್ಯದ ಉತ್ತರ ಭಾಗದ ಪ್ರದೇಶಗಳಲ್ಲಿ ಶೀಘ್ರ ಕಟಾವಿಗೆ ಬರುವ ಹಾಗೂ ಇಳುವರಿ ಮತ್ತು ಗುಣಮಟ್ಟದಲ್ಲಿ ಸಿಓ ೭೪೦ ತಳಿಗಿಂತಲೂ ಉತ್ತಮವೆಂದು ಗುರುತಿಸಲ್ಪಟ್ಟ ಸಿಓ ೬೪೧೫ ತಳಿಯನ್ನು ೧೯೭೬ರಲ್ಲಿ ಬಿಡುಗಡೆ ಮಾಡಲಾಯಿತು. ೧೯೮೬ರಲ್ಲಿ ಸಿಓ ೭೪೦ ತಳಿಗಿಂತಲೂ ಅಧಿಕ ಇಳುವರಿ ಮತ್ತು ಸಕ್ಕರೆ ಅಂಶ ಹೊಂದಿರುವ ಸಿ ಓ ೭೨೧೯ (ಸಂಜೀವಿನಿ) ಎಂಬ ಇನ್ನೊಂದು ತಳಿಯನ್ನೂ ಬಿಡುಗಡೆ ಮಾಡಲಾಯಿತು.

**ಹೈಬ್ರಿಡ್ ಭತ್ತ :** ಕರ್ನಾಟಕದಲ್ಲಿ ಹೈಬ್ರಿಡ್ ಭತ್ತದ ಸಂಶೋಧನೆ ೮೦ರ ದಶಕದಲ್ಲಿ ಪ್ರಾರಂಭವಾಯಿತು. ಭತ್ತದ ತಳಿ ವಿಜ್ಞಾನಿ ಎಂ.ಮಹದೇವಪ್ಪನವರು ತಮ್ಮ ಸಿಬ್ಬಂದಿಯೊಡನೆ ಹೈಬ್ರಿಡ್ ಭತ್ತದ ಮೂಲಭೂತ ಸಂಶೋಧನೆಯನ್ನು ೧೯೮೧ರಲ್ಲಿ ಕೈಗೊಂಡರು. ನಮ್ಮ ದೇಶದಲ್ಲಿರುವ ಹೈಬ್ರಿಡ್ ಭತ್ತದ ಸಂಶೋಧನಾ ಕೇಂದ್ರಗಳಲ್ಲಿ ಮಂಡ್ಯದ ವಿ.ಸಿ. ಫಾರಂ ಪ್ರಮುಖವಾದುದು. ಬಿ.ವಿದ್ಯಾಚಂದ್ರರ ನೇತೃತ್ವದ ತಂಡ ಈ ಸಂಶೋಧನೆಯನ್ನು ಮುಂದುವರಿಸಿತು. ಮೊದಲನೇ ಹಂತದಲ್ಲಿ ಚೈನಾ ದೇಶದ ಹೈಬ್ರಿಡ್ ತಳಿಗಳನ್ನು ಆಮದು ಮಾಡಿಕೊಂಡು ಪರೀಕ್ಷಿಸಿದಾಗ ಆ ತಳಿಗಳು ಸ್ಥಳೀಯ ಪ್ರದೇಶಕ್ಕೆ ಹೊಂದಿಕೊಳ್ಳಲಿಲ್ಲ. ಅವುಗಳಿಗೆ ಯಾವುದೇ ರೀತಿಯ ಕೀಟ ಮತ್ತು ರೋಗ

ನಿರೋಧಕ ಶಕ್ತಿ ಇರಲಿಲ್ಲ. ಎರಡನೇ ಹಂತದಲ್ಲಿ ಚೈನಾ ದೇಶದ ಹೈಬ್ರಿಡ್ ತಳಿಗಳ ತಾಯಿ ಬೀಜಗಳನ್ನು ಉಪಯೋಗಿಸಿದ ಹೈಬ್ರಿಡ್ ತಳಿಗಳಿಗೂ ಇದೇ ದುರವಸ್ಥೆ ಕಂಡು ಬಂದಿತು. ಆದ್ದರಿಂದ ಮೂರನೇ ಹಂತದಲ್ಲಿ ಫಿಲಿಫೈನ್ಸ್‌ನ ಅಂತಾರಾಷ್ಟ್ರೀಯ ಭತ್ತ ಸಂಶೋಧನಾ ಸಂಸ್ಥೆಯ, ಕೆಲವು ಹೈಬ್ರಿಡ್ ತಳಿಗಳ ತಾಯಿಬೀಜಗಳನ್ನು ಸ್ಥಳೀಯ ತಳಿಗಳೊಡನೆ ಸಂಕರಣ ಮಾಡಿ ಅಭಿವೃದ್ಧಿಪಡಿಸಿದಾಗ ಉತ್ತಮ ಫಲಿತಾಂಶ ದೊರಕಿತು. ಇದರ ಫಲವಾಗಿ ಪ್ರಪಂಚದಲ್ಲಿ ಹೈಬ್ರಿಡ್ ತಳಿಗಳನ್ನು ಬೆಳೆಯುವ ಸಾಲಿಗೆ ಕರ್ನಾಟಕವೂ ಸೇರಿತು.

ಹೈಬ್ರಿಡ್ ತಳಿಗಳ ಬೀಜವನ್ನು ಹೊಸದಾಗಿ ಪ್ರತೀ ಸಲ ಖರೀದಿಸಬೇಕಾಗುತ್ತದೆ. ಇದನ್ನು ಪ್ರತೀ ಸಲ ಗಂಡು ಹಾಗೂ ಹೆಣ್ಣು ತಳಿಗಳ ಸಂಕರಣದಿಂದ ಉತ್ಪಾದಿಸಲಾಗುತ್ತದೆ. ಇದರಿಂದ ಉತ್ಪಾದಿಸಿದ ಹೈಬ್ರಿಡ್ ಬೀಜದಲ್ಲಿ ಮಿಶ್ರ ಗುಣಗಳು ಇರುವುದರಿಂದ ಅವು ಹೆಚ್ಚಿನ ಚೈತನ್ಯದಿಂದ ಉತ್ತಮ ಬೆಳೆ ಮತ್ತು ಇಳುವರಿ ಕೊಡುತ್ತವೆ. ಒಮ್ಮೆ ಬೆಳೆದ ಹೈಬ್ರಿಡ್ ಬೆಳೆಯ ಕಾಳನ್ನು ಬೀಜವಾಗಿ ಉಪಯೋಗಿಸಿದರೆ ಅದರಲ್ಲಿರುವ ಮಿಶ್ರಗುಣಗಳು ಬೇರೆಬೇರೆಯಾಗಿ, ಗಿಡದ ಎತ್ತರದಲ್ಲಿ, ಕಾಳಿನಗಾತ್ರದಲ್ಲಿ, ಕಟಾವಿನ ಅವಧಿಯಲ್ಲಿ ಹಾಗೂ ಇತರ ಗುಣಗಳಲ್ಲಿ ಗಿಡದಿಂದ ಗಿಡಕ್ಕೆ ವ್ಯತ್ಯಾಸವುಂಟಾಗಿ ಇಳುವರಿ ತುಂಬಾ ಕಡಿಮೆಯಾಗುತ್ತದೆ. ದುಬಾರಿಯಾದ ಹೈಬ್ರಿಡ್ ತಳಿಯ ಬೀಜೋತ್ಪಾದನೆಗೂ ಸಾಕಷ್ಟು ಪ್ರದೇಶ ಬೇಕಾಗುವುದರಿಂದ ಇದನ್ನೂ ಕೂಡ ತರಬೇತಿ ಹೊಂದಿದ ರೈತರ ಮೂಲಕವೇ ಮಾಡಲಾಗುತ್ತದೆ.

ಈ ಕೇಂದ್ರದ ಸಂಶೋಧನೆಯ ಫಲವಾಗಿ ಎರಡು ಹೈಬ್ರಿಡ್ ತಳಿಗಳನ್ನು ಬಿಡುಗಡೆ ಮಾಡಲಾಗಿದೆ. ಮೊದಲನೇಯದು ಕರ್ನಾಟಕ ಹೈಬ್ರಿಡ್ ಭತ್ತ ೧ (ಕೆ.ಆರ್.ಹೆಚ್ ೧). ಇದೊಂದು ಮಧ್ಯಮ ಎತ್ತರದ ತಳಿಯಾಗಿದ್ದು ೮೫ ರಿಂದ ೯೦ ಸೆಂ.ಮೀ.ನಷ್ಟು ಎತ್ತರ ಬೆಳೆಯುತ್ತದೆ. ಈ ತಳಿಯು ೧೨೦ ರಿಂದ ೧೨೫ ದಿವಸಗಳಲ್ಲಿ ಕೊಯಿಲಿಗೆ ಬರುತ್ತದೆ. ಇದರ ಕಾಳು ಉದ್ದ ಹಾಗೂ ಸಣ್ಣದಾಗಿದ್ದು ಒಂದು ಸಾವಿರ ಕಾಳು ೨೩ ಗ್ರಾಂ ನಷ್ಟು ತೂಗುತ್ತದೆ. ಇದರ ರೋಗ ನಿರೋಧಕತೆ ಜಯ ತಳಿಯಷ್ಟೇ ಇರುತ್ತದೆ. ಈ ಹೈಬ್ರಿಡ್ ತಳಿ ಸರಾಸರಿ ಹೆಕ್ಟೇರಿಗೆ ೬.೧೫ ಟನ್ ಇಳುವರಿ ಕೊಟ್ಟರೆ ಮಂಗಳ ರಾಶಿ ತಳಿಗಳು ಹೆಕ್ಟೇರಿಗೆ ೪.೩೬ ಟನ್ ಇಳುವರಿ ಮಾತ್ರ ಕೊಟ್ಟಿವೆ ಎಂದು ಸಂಶೋಧನೆ ತಿಳಿಸುತ್ತದೆ. ಈ ತಳಿಯನ್ನು ೧೯೯೪ ರಲ್ಲಿ ಕರ್ನಾಟಕದ ನೀರಾವರಿ ಪ್ರದೇಶಕ್ಕೆ ಬಿಡುಗಡೆ ಮಾಡಲಾಯಿತು.

ಕರ್ನಾಟಕ ಹೈಬ್ರಿಡ್ ಭತ್ತ ೨ (ಕೆ.ಆರ್.ಹೆಚ್.೨) ಎಂಬ ಇನ್ನೊಂದು ತಳಿಯನ್ನು ಕರ್ನಾಟಕದ ನೀರಾವರಿ ಪ್ರದೇಶಕ್ಕೆ ೧೯೯೬ರಲ್ಲಿ ಬಿಡುಗಡೆ ಮಾಡಲಾಯಿತು. ಈ ತಳಿಯು ೧೩೦ ರಿಂದ ೧೩೫ ದಿವಸಗಳಲ್ಲಿ ಅಂದರೆ ಐ.ಆರ್.೨೦ ತಳಿಯಷ್ಟೇ ಅವಧಿಯಲ್ಲಿ ಕೊಯಿಲಿಗೆ ಬರುತ್ತದೆ. ಈ ತಳಿಯ ಪೈರು ಜಯ ಹಾಗೂ ಇತರೇ ಮಧ್ಯಮ ಎತ್ತರದ ತಳಿಗಳಿಗಿಂತ ಎತ್ತರವಾಗಿದ್ದು, ೧೦೦ ರಿಂದ ೧೦೫ ಸೆಂ.ಮೀ.ಎತ್ತರಕ್ಕೆ ಬೆಳೆಯುತ್ತದೆ. ಈ ತಳಿ ತಕ್ಕಮಟ್ಟಿಗೆ ಬೆಂಕಿ ರೋಗ ನಿರೋಧಕತೆಯನ್ನೂ ಹೊಂದಿದೆ. ಇದರ ಕಾಳು ಉದ್ದ ಹಾಗೂ ಸಣ್ಣದಾಗಿದೆ. ಈ ತಳಿ ಸರಾಸರಿ ಹೆಕ್ಟೇರಿಗೆ ೭.೩ ಟನ್ ಇಳುವರಿ ಕೊಟ್ಟರೆ ಜಯ ತಳಿ ಹೆಕ್ಟೇರಿಗೆ ೫.೯ ಟನ್ ಇಳುವರಿ ಕೊಟ್ಟಿದೆ ಎಂದು ಸಂಶೋಧನೆಯಿಂದ ತಿಳಿದುಬಂದಿದೆ. ಹೈಬ್ರಿಡ್ ತಳಿಗಳು ಬೇಸಾಯ ಕ್ರಮದಲ್ಲಿ ಬೇರೆ ತಳಿಗಳಿಗಿಂತ ವ್ಯತ್ಯಾಸವಿದೆ.

**ಪರತಂತ್ರ ಜೀವಿ ಪ್ರಯೋಗಾಲಯ :** ಪರತಂತ್ರ ಜೀವಿ ಪ್ರಯೋಗಾಲಯವನ್ನು ೧೯೩೫ರಲ್ಲಿ ಮಂಡ್ಯದಲ್ಲಿ ಸ್ಥಾಪಿಸಲಾಯಿತು. ಕಬ್ಬಿನ ಬೆಳೆಯ ಕಾಂಡ ಕೊರೆಯುವ ಹುಳುವಿನ ಹಾವಳಿ ತಡೆಯಲು ಟ್ರೈಕೋಗ್ರಾಮ ಪರತಂತ್ರ ಜೀವಿಯನ್ನು ಕಬ್ಬಿನ ಗದ್ದೆಯಲ್ಲಿ ಬಿಡುಗಡೆ ಮಾಡಿ ಕಬ್ಬಿನ ಪೈರನ್ನು ರಕ್ಷಿಸಬಹುದು. ಟ್ರೈಕೊಗ್ರಾಮ ಪರತಂತ್ರ ಜೀವಿ ಚಿಕ್ಕಕಣಜದಂತಿದ್ದು ಪ್ರಕೃತಿಯಲ್ಲಿ ಸಾಕಷ್ಟು ದೊರೆಯದ ಕಾರಣ, ಪ್ರಯೋಗಾಲಯದಲ್ಲಿ ಉತ್ಪಾದಿಸಿ ಕಬ್ಬಿನ

ಕಾಂಡ ಕೊರೆಯುವ ಹುಳುವಿನ ಹತೋಟಿಗೆ ಬಿಡುಗಡೆ ಮಾಡಲಾಗುತ್ತದೆ. ಈ ಟ್ರೈಕೋಗ್ರಾಮ ಕಿಲೋನಿಸ್ ಮೊಟ್ಟೆಗಳನ್ನು ಪ್ರತೀ ವಾರವೂ ೧೫,೦೦೦ ದಂತೆ ಐದು ವಾರ (ಹೆಕ್ಟೇರಿಗೆ ಒಟ್ಟು ೭೫,೦೦೦) ಕಬ್ಬಿನ ಗದ್ದೆಯಲ್ಲಿ ಬಿಡುಗಡೆ ಮಾಡುವುದರಿಂದ ಮೊಟ್ಟೆಯ ಹಂತದಲ್ಲಿಯೇ ಕೀಟವು ನಾಶವಾಗಿ ನಿರೀಕ್ಷಿತ ಇಳುವರಿ ದೊರೆಯುವುದು.

**ಸಮಗ್ರ ಬೆಳೆ ವಿಮಾ ಯೋಜನೆ :** ರೈತರ ಬೆಳೆಗಳು ಪ್ರಕೃತಿ ವಿಕೋಪಗಳಿಗೆ ತುತ್ತಾಗುವುದರಿಂದ ರೈತರು ಪ್ರತಿ ಹಂಗಾಮಿನಲ್ಲೂ ನಷ್ಟವನ್ನು ಹೊಂದುತ್ತಾರೆ. ಅವರಿಗೆ ಆದ ನಷ್ಟವನ್ನು ತುಂಬಿ ಕೊಡಲು ಹಾಗೂ ಮುಂದಿನ ಹಂಗಾಮಿಗೆ ಬೆಳೆ ಸಾಲ ಪಡೆಯುವ ಅರ್ಹತೆಯನ್ನು ಉಳಿಸುವ ಸಲುವಾಗಿ ರಾಜ್ಯ ಹಾಗೂ ಕೇಂದ್ರ ಸರ್ಕಾರಗಳು ಜೊತೆಗೂಡಿ ರಾಜ್ಯದಲ್ಲಿ ವ್ಯಾಪಕ ಬೆಳೆ ವಿಮಾ ಯೋಜನೆಯನ್ನು ೧೯೮೫ರ ಮುಂಗಾರು ಹಂಗಾಮಿನಿಂದ ಪ್ರಾರಂಭಿಸಿವೆ. ಈ ಯೋಜನೆಯಡಿ ಏಕದಳ ಮತ್ತು ದ್ವಿದಳ ಧಾನ್ಯಗಳ ಆಯ್ದ ಬೆಳೆಗಳ ಸಾಗುವಳಿ ಮಾಡಲು ಸಹಕಾರಿ ಬ್ಯಾಂಕು, ವಾಣಿಜ್ಯ ಬ್ಯಾಂಕು ಹಾಗೂ ಸ್ಥಳೀಯ ಗ್ರಾಮೀಣ ಬ್ಯಾಂಕುಗಳಿಂದ ಬೆಳೆ ಸಾಲ ಪಡೆಯುವ ಎಲ್ಲಾ ರೈತರಿಗೂ ಬೆಳೆ ವಿಮಾ ಯೋಜನೆ ಕಡ್ಡಾಯ ಮಾಡಲಾಗಿದೆ.

ಪ್ರತಿ ಹಂಗಾಮಿನಲ್ಲೂ ನಿರ್ದಿಷ್ಟ ಕ್ಷೇತ್ರಗಳಲ್ಲಿ ಬೆಳೆ ಕಟಾವು ಸಮೀಕ್ಷೆಯ ಆಧಾರವನ್ನವಲಂಬಿಸಿ ರೈತರ ನಷ್ಟದ ಪ್ರಮಾಣವನ್ನು ತೀರ್ಮಾನಿಸಲಾಗುವುದು. ನಷ್ಟ ಪರಿಹಾರದ ಮೊಬಲಗನ್ನು ಮುಂಬೈನ ಭಾರತೀಯ ಸಾಮಾನ್ಯ ವಿಮಾ ನಿಗಮ, ಮತ್ತು ರಾಜ್ಯ ಸರ್ಕಾರವು ೨:೧ ರ ಪ್ರಮಾಣದಲ್ಲಿ ಭರಿಸುತ್ತವೆ. ಈ ಯೋಜನೆಯಡಿ ನಷ್ಟದ ಅಂದಾಜನ್ನು ಪ್ರಸ್ತುತ ತಾಲೂಕು ಮಟ್ಟದಲ್ಲಿ ನಿರ್ಧರಿಸಲಾಗುತ್ತಿದ್ದು, ಮುಂದೆ ಇದನ್ನು ಹೋಬಳಿ ಮಟ್ಟದಲ್ಲಿಯೇ ನಿರ್ಧರಿಸಲು ತೀರ್ಮಾನಿಸಲಾಗಿದೆ. ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ವಿಮಾ ಕಂತಿನ ಮೇಲೆ ನೀಡಬೇಕಾದ ಶೇ.೫೦ ರ ಸಹಾಯಧನವನ್ನು ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಸಮನಾಗಿ ಹಂಚಿಕೊಳ್ಳುತ್ತವೆ. ಈ ಯೋಜನೆ ಜಿಲ್ಲೆಯ ಎಲ್ಲಾ ತಾಲೂಕುಗಳಲ್ಲಿ ಜಾರಿಯಲ್ಲಿದೆ.

**ರೈತರ ಶೈಕ್ಷಣಿಕ ಪ್ರವಾಸ :** ಕೃಷಿ ಸಂಶೋಧನಾ ಸಂಸ್ಥೆಗಳು ಇತ್ತೀಚೆಗೆ ಸಂಶೋಧನೆಯಿಂದ ಕಂಡು ಹಿಡಿದ ತಂತ್ರಜ್ಞಾನವನ್ನು ಜಿಲ್ಲೆ, ರಾಜ್ಯ ಮತ್ತು ರಾಷ್ಟ್ರಮಟ್ಟದ ರೈತರ ಮೇಳ ಮತ್ತು ವಸ್ತುಪ್ರದರ್ಶನಗಳಲ್ಲಿ ಪ್ರದರ್ಶಿಸುತ್ತಿವೆ. ಇತ್ತೀಚಿನ ಬೆಳವಣಿಗೆಗಳನ್ನು ಪ್ರಗತಿಪರ ರೈತರ ಕ್ಷೇತ್ರಗಳಲ್ಲಿ ಅನುಷ್ಠಾನಗೊಳಿಸಲಾಗುತ್ತದೆ. ಕೃಷಿಸಂಬಂಧಿತ ಉಪಕಸಬುಗಳನ್ನು ಸಹ ರೈತರಿಗೆ ಪರಿಚಯ ಮಾಡಿಕೊಡಲಾಗುತ್ತದೆ. ಇತ್ತೀಚಿನ ಸಂಶೋಧನೆಗಳನ್ನು ಪರಿಚಯ ಮಾಡಿಸಲು ಪ್ರತೀ ವರ್ಷ ೫೦ ರೈತರನ್ನು ಹೊರಜಿಲ್ಲೆ ಹಾಗೂ ಹೊರ ರಾಜ್ಯಗಳಿಗೆ ಪ್ರವಾಸಕ್ಕೆ ಕಳುಹಿಸಿ ಕೊಡಲಾಗುತ್ತದೆ.

**ಕೃಷಿ ಪ್ರಶಸ್ತಿ :** ರೈತರ ತೀವ್ರ ಪ್ರಯತ್ನ ಹಾಗೂ ಸಕ್ರಿಯ ಪಾಲ್ಗೊಳ್ಳುವಿಕೆಯಿಂದಾಗಿ ಕಳೆದ ಮೂರು ದಶಕಗಳಲ್ಲಿ ಕೃಷಿ ಉತ್ಪಾದನೆಯಲ್ಲಿ ಗಣನೀಯ ಹೆಚ್ಚಳ ಆಗಿದೆ. ಇಂತಹ ರೈತರನ್ನು ಗುರುತಿಸಲು ರಾಜ್ಯ, ಜಿಲ್ಲಾ ಹಾಗೂ ತಾಲೂಕು ಮಟ್ಟಗಳಲ್ಲಿ ಕೃಷಿ ಪ್ರಶಸ್ತಿ ಬಹುಮಾನಗಳನ್ನು ನೀಡಲಾಗುತ್ತಿದೆ. ಈ ಯೋಜನೆಯಡಿ ಆಯ್ಕೆ ಮಾಡಲಾದ ಬೆಳೆಗಳಲ್ಲಿ ಪ್ರತೀ ಬೆಳೆಗೂ ಮೂರು ಬಹುಮಾನಗಳನ್ನು ನೀಡಲಾಗುತ್ತಿದೆ. ಅದರ ವಿವರಗಳು ಈ ಕೆಳಗಿನಂತಿದೆ.

| ಹಂತಗಳು | ರಾಜ್ಯಮಟ್ಟ | ಜಿಲ್ಲಾಮಟ್ಟ | ತಾಲೂಕುಮಟ್ಟ |
|---|---|---|---|
| ಪ್ರಥಮ ಬಹುಮಾನ | ೧,೦೦,೦೦೦ | ೫೦,೦೦೦ | ೨೫,೦೦೦ |
| ದ್ವಿತೀಯ ಬಹುಮಾನ | ೫೦,೦೦೦ | ೨೫,೦೦೦ | ೧೦,೦೦೦ |
| ತೃತೀಯ ಬಹುಮಾನ | ೨೫,೦೦೦ | ೧೦,೦೦೦ | ೫,೦೦೦ |

## ಜಿಲ್ಲೆಯಲ್ಲಿ ಬೆಳೆಯುವ ವಿವಿಧ ಕೃಷಿ ಬೆಳೆಗಳ ವಿವರ

ಜಿಲ್ಲೆಯಲ್ಲಿ ಕಬ್ಬು, ಭತ್ತ, ರಾಗಿ ಮತ್ತು ದ್ವಿದಳ ಧಾನ್ಯಗಳನ್ನು ಪ್ರಮುಖವಾಗಿ ಬೆಳೆಯಲಾಗುತ್ತದೆ. ವಿಸ್ತೀರ್ಣದಲ್ಲಿ ರಾಗಿ ಬೆಳೆಯು ಒಟ್ಟು ಶೇ.೩೯.೭ ರಷ್ಟು, ಭತ್ತದ ಬೆಳೆಯು ಶೇ.೩೪.೫ರಷ್ಟು ಮತ್ತು ದ್ವಿದಳ ಧಾನ್ಯಗಳು ಶೇ.೧೫.೩ರಷ್ಟು ಪ್ರದೇಶದಲ್ಲಿ ಬೆಳೆಯಲ್ಪಡುತ್ತವೆ. ಜಿಲ್ಲೆಯಲ್ಲಿ ೧೯೯೮–೯೯ನೇ ಸಾಲಿನಲ್ಲಿ ಬೆಳೆದ ಕೃಷಿ ಬೆಳೆಗಳ ವಿಸ್ತೀರ್ಣ, ಉತ್ಪಾದನೆ ಮತ್ತು ಇಳುವರಿಯ ಅಂದಾಜು ವಿವರಗಳನ್ನು ಕೋಷ್ಟಕ ೪.೭ ರಲ್ಲಿ ನೀಡಿದೆ.

**ಕೋಷ್ಟಕ ೪.೭ ಮಂಡ್ಯ ಜಿಲ್ಲೆಯಲ್ಲಿ ೧೯೯೮–೯೯ನೇ ಸಾಲಿನಲ್ಲಿ ಬೆಳೆದ ಮುಖ್ಯ ಕೃಷಿ ಬೆಳೆಗಳ ವಿಸ್ತೀರ್ಣ, ಉತ್ಪಾದನೆ ಮತ್ತು ಇಳುವರಿಯ ಅಂದಾಜು**

| ಕ್ರ.ಸಂ. | ಬೆಳೆಯ ಹೆಸರು | ಋತು | ವಿಸ್ತೀರ್ಣ– ಹೆಕ್ಟೇರುಗಳಲ್ಲಿ | ಉತ್ಪಾದನೆ– ಟನ್ನುಗಳಲ್ಲಿ | ಇಳುವರಿ ಪ್ರತೀ ಹೆಕ್ಟೇರ್‌ಗೆ ಕಿ.ಗ್ರಾಂ.ಗಳಲ್ಲಿ |
|---|---|---|---|---|---|
| ೧. | ಭತ್ತ | ಮುಂಗಾರು | ೬೦,೭೮೫ | ೨೬೮,೩೧೭ | ೪,೬೪೭ |
| | | ಬೇಸಿಗೆ | ೧೯,೧೦೭ | ೯೯,೯೭೯ | ೫,೫೦೮ |
| | | ವಾರ್ಷಿಕ | ೭೯,೮೯೨ | ೩೬೮,೨೯೬ | ೪,೮೫೩ |
| | | ನೀರಾವರಿ | ೭೯,೪೯೨ | ೩೬೭,೩೬೧ | ೪,೮೬೫ |
| ೨. | ಜೋಳ | ವಾರ್ಷಿಕ | ೩,೫೩೬ | ೩,೬೧೮ | ೧,೦೭೭ |
| ೩. | ರಾಗಿ | ಮುಂಗಾರು | ೮೦,೫೯೩ | ೧೫೬,೦೨೭ | ೨,೦೩೮ |
| | | ಹಿಂಗಾರು | ೨,೪೦೧ | ೩,೪೮೮ | ೧,೫೨೯ |
| | | ಬೇಸಿಗೆ | ೨,೪೭೩ | ೫,೨೪೪ | ೨,೨೩೨ |
| | | ವಾರ್ಷಿಕ | ೮೫,೪೬೭ | ೧೬೪,೭೫೯ | ೨,೦೨೯ |
| | | ನೀರಾವರಿ | ೮,೬೬೦ | ೧೭,೫೧೯ | ೨,೧೨೯ |
| ೪. | ಒಟ್ಟು ಏಕದಳ ಧಾನ್ಯಗಳು | ಮುಂಗಾರು | ೧೪೪,೯೪೧ | ೩೩೮,೬೯೮ | ೨,೪೬೦ |
| | | ಹಿಂಗಾರು | ೨,೪೦೧ | ೩,೪೮೮ | ೧,೫೨೯ |
| | | ಬೇಸಿಗೆ | ೨೧,೮೫೦ | ೭೧,೯೩೩ | ೩,೫೦೯ |
| | | ವಾರ್ಷಿಕ | ೧೬೮,೯೨೨ | ೪೧೪,೧೧೯ | ೨,೫೮೧ |
| | | ನೀರಾವರಿ | ೮೮,೨೫೭ | ೨೬೨,೮೧೪ | ೩,೧೩೫ |
| ೫. | ತೊಗರಿ | ವಾರ್ಷಿಕ | ೨,೦೬೦ | ೯೫೯ | ೪೯೦ |
| ೬. | ಉದ್ದು | ವಾರ್ಷಿಕ | ೫೪೪ | ೨೨೭ | ೪೩೯ |
| ೭. | ಹುರುಳಿ | ವಾರ್ಷಿಕ | ೨೭,೦೫೨ | ೧೫,೭೮೫ | ೬೧೪ |
| ೮. | ಹೆಸರು | ವಾರ್ಷಿಕ | ೭೯೩ | ೧೮೫ | ೨೪೬ |
| ೯. | ಅವರೆ | ವಾರ್ಷಿಕ | ೪,೭೨೨ | ೯೭೩ | ೨೦೬ |
| ೧೦. | ಒಟ್ಟು ಬೇಳೆಕಾಳುಗಳು | ವಾರ್ಷಿಕ | ೪೧,೬೭೮ | ೨೧೦೪೭ | ೫೩೨ |
| ೧೧. | ಒಟ್ಟು ಆಹಾರಧಾನ್ಯಗಳು | ವಾರ್ಷಿಕ | ೨೧೦,೬೭೦ | ೪೩೫,೨೦೯ | ೨,೧೭೫ |
| ೧೨. | ನೆಲಗಡಲೆ | ವಾರ್ಷಿಕ | ೮,೯೮೨ | ೭೮೦೫ | ೯೧೫ |
| ೧೩. | ಹರಳು | ವಾರ್ಷಿಕ | ೨,೦೬೯ | ೧೭೬೫ | ೮೯೮ |
| ೧೪. | ಎಳ್ಳು | ವಾರ್ಷಿಕ | ೪,೧೨೭ | ೨೩೪೮ | ೫೬೯ |
| ೧೫. | ಹುಚ್ಚೆಳ್ಳು | ವಾರ್ಷಿಕ | ೩,೦೭೯ | ೫೭೯ | ೧೯೦ |
| ೧೬. | ಸೂರ್ಯಕಾಂತಿ | ವಾರ್ಷಿಕ | ೯೭ | ೨೮ | ೩೦೪ |
| ೧೭. | ಒಟ್ಟು ಎಣ್ಣೆ ಕಾಳುಗಳು | ವಾರ್ಷಿಕ | ೧೮,೩೯೮ | ೧೨,೫೭೨ | ೭೧೯ |
| ೧೮. | ಹತ್ತಿ | ವಾರ್ಷಿಕ | ೪೪ | ೬೫ | ೨೬೪ |
| ೧೯. | ಕಬ್ಬು | ವಾರ್ಷಿಕ | ೩೦,೬೩೦ | ೪೦,೧೫,೫೯೩ | ೧೩೮ |

ಆಧಾರ : ಕರ್ನಾಟಕದ ಮುಖ್ಯ ಬೆಳೆಗಳ ಪರಿಷ್ಕೃತ ಅಂತಿಮ ಅಂದಾಜು, ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ, ಬೆಂಗಳೂರು ೨೦೦೧ ಡಿ.ಇ.ಎಸ್.ನಂ. ೧೮/೨೦೦೧.

೧೯೭೦ ರಿಂದ ೨೦೦೦ದ ವರೆಗೆ ಆಯ್ದ ವರ್ಷಗಳಲ್ಲಿ ಕೃಷಿಗೆ ಸಂಬಂಧಿಸಿದ ಅಂಕಿ-ಅಂಶಗಳನ್ನು ಕೋಷ್ಟಕ ೪.೮ರಲ್ಲಿ ನೀಡಿದೆ.

**ಕೋಷ್ಟಕ ೪.೮ ಕೃಷಿಗೆ ಸಂಬಂಧಿಸಿದ ಜಿಲ್ಲೆಯ ಅಂಕಿ ಅಂಶಗಳು**

| ವಿವರ | | ೧೯೭೦-೭೧ | ೮೦-೮೧ | ೯೦-೯೧ | ೯೫-೯೬ | ೯೯-೨೦೦೦ |
|---|---|---|---|---|---|---|
| ೧ | ೨ | ೩ | ೪ | ೫ | ೬ | ೭ |
| ೧. | ***ಒಟ್ಟು ಭೌಗೋಳಿಕ ಕ್ಷೇತ್ರದಲ್ಲಿ ಶೇಕಡಾವಾರು ಪ್ರದೇಶ*** | | | | | |
| ಅ) | ಅರಣ್ಯ | ೪.೮೬ | ೪.೭೬ | ೪.೭೭ | ೪.೭೭ | ೪.೯೭ |
| ಆ) | ವ್ಯವಸಾಯೇತರ | ೧೦.೭೪ | ೧೨.೦೨ | ೧೨.೧೬ | ೧೨.೧೮ | ೧೨.೨೦ |
| ಇ) | ಬಂಜರು ಮತ್ತು ವ್ಯವಸಾಯಕ್ಕೆ ಯೋಗ್ಯವಲ್ಲದ ಭೂಮಿ | ೨.೯೯ | ೪.೩೫ | ೪.೩೫ | ೪.೩೪ | ೪.೩೩ |
| ಈ) | ಖಾಯಂ ಗೋಮಾಳ ಮತ್ತು ಇತರ ಹುಲ್ಲುಗಾವಲು ಭೂಮಿ | ೧೧.೧೯ | ೯.೧೪ | ೮.೨೯ | ೭.೬೩ | ೭.೬೭ |
| ಉ) | ವಿವಿಧ ವೃಕ್ಷ ಮತ್ತು ತೋಪುಗಳಿರುವ ಭೂಮಿ | ೦.೩೪ | ೦.೩೯ | ೦.೬೫ | ೦.೬೩ | ೦.೬೪ |
| ಊ) | ವ್ಯವಸಾಯಕ್ಕೆ ಯೋಗ್ಯವಾದ ಬಂಜರು ಭೂಮಿ | ೧೦.೩೭ | ೮.೬೩ | ೭.೯೭ | ೭.೮೪ | ೮.೪೨ |
| ಋ) | ಇತರ ಬೀಳು ಭೂಮಿ | ೧.೪೦ | ೧.೬೫ | ೪.೮೧ | ೩.೯೬ | ೪.೨೪ |
| ೠ) | ಚಾಲ್ತಿ ಬೀಳು ಭೂಮಿ | ೩.೮೪ | ೧೦.೪೪ | ೮.೬೮ | ೭.೮೯ | ೮.೦೨ |
| ಎ) | ನಿವ್ವಳ ಬಿತ್ತನೆ ಪ್ರದೇಶ | ೫೪.೨೮ | ೪೮.೬೨ | ೪೮.೩೩ | ೫೦.೭೬ | ೪೯.೫೧ |
| ೨. | ಬೆಳೆ ಸಾಂದ್ರತೆ | ೧೧೦.೮೪ | ೧೨೪.೬೭ | ೧೧೪.೯೫ | ೧೨೩.೦೬ | ೧೧೫.೭ |
| ೩. | ನಿವ್ವಳ ಬಿತ್ತನೆ ಪ್ರದೇಶದಲ್ಲಿ ಒಂದಕ್ಕಿಂತ ಹೆಚ್ಚು ಬಾರಿ ಬಿತ್ತನೆಯಾದ ಪ್ರದೇಶದ ಶೇ. | ೧೦.೮೪ | ೨೪.೬೬ | ೧೪.೯೫ | ೨೩.೦೬ | ೧೫.೭೦ |
| ೪. | ನಿವ್ವಳ ಬಿತ್ತನೆ ಪ್ರದೇಶದಲ್ಲಿ ನಿವ್ವಳ ನೀರಾವರಿಯಾದ ಪ್ರದೇಶದ ಶೇ. | ೩೧.೬ | ೪೦.೨ | ೪೧.೪ | ೪೪.೪೩ | ೪೩.೭೯ |
| ೫. | ಒಟ್ಟು ಬಿತ್ತನೆಯಾದ ಪ್ರದೇಶದಲ್ಲಿ ಒಟ್ಟು ನೀರಾವರಿಯಾದ ಪ್ರದೇಶ ಶೇ. | ೩೪.೨೦ | ೪೩.೦೫ | ೪೬.೪೦ | ೪೪.೨೧ | ೪೯.೪೨ |
| ೬. | **ನಿವ್ವಳ ನೀರಾವರಿ ಪ್ರದೇಶದ ಶೇ.** | | | | | |
| ಅ) | ಕಾಲುವೆಗಳಿಂದ | ೭೩.೦೭ | ೮೩.೪೦ | ೮೩.೧೬ | ೮೨.೭೩ | ೭೯.೯೪ |
| ಆ) | ಕೆರೆಗಳಿಂದ | ೧೭.೦೦ | ೬.೩೪ | ೭.೪೮ | ೭.೩೯ | ೭.೫೫ |
| ಇ) | ಬಾವಿಗಳಿಂದ | ೭.೦೦ | ೯.೦೦ | ೪.೦೦ | ೮.೭೭ | ೧೧.೬೩ |
| ಈ) | ಇತರೆ ಮೂಲಗಳಿಂದ | ೨.೦೦ | ೩.೦೦ | ೧.೦೦ | ೧.೧೧ | ೦.೮೮ |
| | **ಒಟ್ಟು ಬಿತ್ತನೆಯಾದ ಪ್ರದೇಶದಲ್ಲಿ ಶೇ.** | | | | | |
| ಅ) | ಭತ್ತ | ೨೧.೨೨ | ೨೧.೬೪ | ೨೪.೫೨ | ೨೩.೧೪ | ೨೭.೬೫ |
| ಆ) | ರಾಗಿ | ೨೯.೦೯ | ೨೨.೬೭ | ೨೭.೫೩ | ೩೧.೬೬ | ೨೩.೭೪ |
| ಇ) | ಜೋಳ | ೫.೯೭ | ೧.೨೪ | ೧.೭೧ | ೧.೯೧ | ೧.೦೨ |
| ಈ) | ಒಟ್ಟು ಏಕದಳ ಧಾನ್ಯಗಳು | ೫೭.೯೬ | ೪೭.೧೪ | ೫೩.೮೨ | ೫೬.೭೯ | ೫೨.೨೫ |
| ಉ) | ಒಟ್ಟು ದ್ವಿದಳ ಧಾನ್ಯಗಳು | ೨೧.೧೮ | ೨೯.೫೭ | ೧೭.೩೫ | ೧೩.೮೭ | ೧೭.೪೮ |
| ಊ) | ಕಬ್ಬು | ೫.೮೪ | ೮.೩೫ | ೧೦.೮೩ | ೧೦.೮೫ | ೧೦.೯೯ |
| ಋ) | ಎಣ್ಣೆಕಾಳು ಬೆಳೆಗಳು | ೩.೯೩ | ೩.೬೩ | ೭.೨೦ | ೭.೫೫ | ೪.೮೮ |
| | **ಸರಾಸರಿ ಉತ್ಪನ್ನ (ಹೆಕ್ಟೇರಿಗೆ ಕಿ.ಗ್ರಾಂಗಳಲ್ಲಿ)** | | | | | |
| ಅ) | ಭತ್ತ | ೨೩೫೪ | ೨೯೬೩ | ೨೯೫೩ | ೩೩೬೦ | ೩೨೮೬ |

| ೧ | ೨ | ೩ | ೪ | ೫ | ೬ | ೭ |
|---|---|---|---|---|---|---|
| ಆ) | ಜೋಳ | ೯೭೫ | ೧೨೫೬ | ೫೫೯ | ೬೭೫ | ೧೦೩೯ |
| ಇ) | ರಾಗಿ | ೯೦೭ | ೧೪೮೦ | ೭೪೦ | ೧೯೧೬ | ೧೭೩೨ |
| ಈ) | ತೊಗರಿ | ೫೨೮ | ೩೩೩ | ೪೧೬ | ೨೮೩ | ೬೦೦ |
| ಉ) | ಕಬ್ಬು (ಹೆಕ್ಟೇರಿಗೆ ಟನ್‌ಗಳಲ್ಲಿ) | ೮೯ | ೧೦೬ | ೧೧೬ | ೧೧೯ | ೧೩೮ |
| ಊ) | ನೆಲಗಡಲೆ | ೧೧೨೭ | ೧೦೫೯ | ೭೩೦ | ೯೮೭ | ೮೩೭ |
| | ರಾಜ್ಯದ ಒಟ್ಟು ಆಹಾರಧಾನ್ಯ ಉತ್ಪಾದನೆಯಲ್ಲಿ ಜಿಲ್ಲೆಯ ಶೇ. | ೪.೩೮ | ೪.೯೮ | ೪.೧೨ | ೫.೦೦ | ೩.೯೦ |
| ೧೦) | ತಲಾವಾರು ಲಭ್ಯವಿರುವ ಸಾಗುವಳಿಗೆ ಯೋಗ್ಯ ಭೂಮಿ (ಹೆಕ್ಟೇರುಗಳಲ್ಲಿ) | ೦.೨೬ | ೦.೨೨ | ೦.೨೭ | ೦.೨೫ | – |

## ಕೋಷ್ಟಕ ೪.೯ ಮಂಡ್ಯ ಜಿಲ್ಲೆಯಲ್ಲಿ ೧೯೯೯–೨೦೦೦ನೇ ಸಾಲಿನಲ್ಲಿ ಬೆಳೆದ ಮುಖ್ಯ ಬೆಳೆಗಳ ವಿಸ್ತೀರ್ಣ, ಉತ್ಪಾದನೆ ಮತ್ತು ಇಳುವರಿಯ ಅಂದಾಜು

| ಕ್ರ ಸಂ | ಬೆಳೆಗಳು | ಋತು | ವಿಸ್ತೀರ್ಣ ಹೆಕ್ಟೇರುಗಳಲ್ಲಿ | ಉತ್ಪಾದನೆ ಟನ್ನುಗಳಲ್ಲಿ | ಇಳುವರಿ ಹೆಕ್ಟೇರಿಗೆ ಕಿ.ಗ್ರಾಂ |
|---|---|---|---|---|---|
| ೧ | ೨ | ೩ | ೪ | ೫ | ೬ |
| ೧ | ಭತ್ತ | ಮುಂಗಾರು – ನೀ (ನೀರಾವರಿ) | ೫೯,೧೪೪ | ೨,೭೮,೯೧೪ | ೪,೯೬೪ |
| | | ಹಿಂಗಾರು – ನೀ | ೨೮೯ | ೯೨೩ | ೩,೩೬೧ |
| | | ಬೇಸಿಗೆ – ನೀ | ೧೯,೪೮೭ | ೮೯,೫೪೬ | ೪,೮೩೭ |
| | | ಒಟ್ಟು | ೭೮,೯೨೦ | ೩,೬೯,೩೮೩ | ೪,೯೨೭ |
| ೨ | ಜೋಳ | ಮುಂಗಾರು – ನೀ | ೪೩ | ೧೦೦ | ೨,೪೪೫ |
| | | ಮುಂಗಾರು – ಮಳೆಯಾಶ್ರಿತ | ೨,೩೫೪ | ೨,೨೬೫ | ೧,೦೧೩ |
| ೩ | ಮುಸುಕಿನಜೋಳ | ಒಟ್ಟು | ೪೫ | ೧೨೭ | ೨,೯೭೧ |
| ೪ | ರಾಗಿ | ಮುಂಗಾರು – ನೀ | ೩,೫೮೪ | ೭,೮೩೪ | ೨,೩೦೧ |
| | | ಮುಂಗಾರು – ಮಳೆಯಾಶ್ರಿತ | ೫೬,೫೧೫ | ೯೦,೯೬೧ | ೧,೬೯೪ |
| | | ಹಿಂಗಾರು – ನೀ | ೩,೬೯೩ | ೪,೭೮೫ | ೧,೩೬೪ |
| | | ಹಿಂಗಾರು – ಮಳೆಯಾಶ್ರಿತ | ೧,೧೩೮ | ೧,೧೪೮ | ೧,೦೬೨ |
| | | ಬೇಸಿಗೆ – ನೀ | ೨,೮೨೩ | ೬,೭೪೮ | ೨,೫೧೬ |
| | | ಒಟ್ಟು | ೬೭,೭೫೩ | ೧,೧೧,೪೭೬ | ೧,೭೩೨ |
| ೫ | ಒಟ್ಟು ಏಕದಳ ಧಾನ್ಯಗಳು | ಮುಂಗಾರು – ನೀ | ೬೨,೭೯೬ | ೧,೯೪,೦೩೨ | ೩,೨೫೩ |
| | | ಮುಂಗಾರು – ಮಳೆಯಾಶ್ರಿತ | ೫೮,೮೮೯ | ೯೩,೨೭೨ | ೧,೬೬೭ |
| | | ಹಿಂಗಾರು – ನೀ | ೩,೯೮೨ | ೫,೪೦೧ | ೧,೪೨೮ |
| | | ಹಿಂಗಾರು – ಮಳೆಯಾಶ್ರಿತ | ೧,೧೩೮ | ೧,೧೪೮ | ೧,೦೬೨ |
| | | ಬೇಸಿಗೆ – ನೀ | ೨೨,೩೧೦ | ೬೬,೪೭೦ | ೩,೧೩೬ |
| | | ಒಟ್ಟು – ನೀ | ೮೯,೦೮೮ | ೨,೬೫,೯೦೩ | ೩,೧೪೨ |
| | | ಒಟ್ಟು – ಮಳೆ | ೬೦,೦೨೭ | ೯೪,೪೨೦ | ೧,೬೫೬ |
| ೬ | ಒಟ್ಟು ಏಕದಳ ಮತ್ತು ತೃಣ ಧಾನ್ಯಗಳು | ಮುಂಗಾರು ಒಟ್ಟು | ೧,೨೧,೬೯೧ | ೨,೮೭,೩೦೮ | ೨,೪೮೫ |
| | | ವಾರ್ಷಿಕ | ೧,೪೯,೧೨೧ | ೩,೬೦,೩೨೭ | ೨,೫೪೪ |
| ೭ | ತೊಗರಿ | ಮುಂಗಾರು | ೧,೨೨೦ | ೬೯೫ | ೬೦೦ |
| ೮ | ಉದ್ದು | ವಾರ್ಷಿಕ | ೬೪೦ | ೨೧೯ | ೩೬೦ |

| ೧ | ೨ | ೩ | ೪ | ೫ | ೬ |
|---|---|---|---|---|---|
| ೯ | ಹುರುಳಿ | ಮುಂಗಾರು | ೯,೦೮೫ | ೪,೪೪೫ | ೫೧೫ |
| | | ಹಿಂಗಾರು/ಬೇಸಿಗೆ | ೨೮,೬೨೪ | ೧೫,೦೧೦ | ೫೫೨ |
| | | ವಾರ್ಷಿಕ | ೩೭,೭೦೯ | ೧೯,೪೫೫ | ೫೪೩ |
| ೧೦ | ಹೆಸರು | ಮುಂಗಾರು | ೪೩೬ | ೧೫೧ | ೩೬೪ |
| | | ಹಿಂಗಾರು/ಬೇಸಿಗೆ | ೨೬೪ | ೬೬ | ೨೬೨ |
| | | ವಾರ್ಷಿಕ | ೭೦೦ | ೨೧೭ | ೩೨೬ |
| ೧೧ | ಅವರೆ | ವಾರ್ಷಿಕ | ೩,೨೬೩ | ೬೭೨ | ೨೦೬ |
| ೧೨ | ಇತರೆ ದ್ವಿದಳ ಧಾನ್ಯಗಳು | ಮುಂಗಾರು | ೪,೮೩೭ | ೨,೫೪೩ | ೫೩೧ |
| | | ಹಿಂಗಾರು/ಬೇಸಿಗೆ | ೨,೬೭೮ | ೨೩೯ | ೯೦ |
| | | ವಾರ್ಷಿಕ | ೭,೫೧೫ | ೨,೭೮೨ | ೩೭೪ |
| ೧೩ | ಕಡಲೆ | ವಾರ್ಷಿಕ | ೨೧೩ | ೧೧೭ | ೫೭೮ |
| ೧೪ | ಒಟ್ಟು ದ್ವಿದಳ ಧಾನ್ಯಗಳು | ಮುಂಗಾರು | ೧೯,೨೪೮ | ೮,೬೩೯ | ೪೭೨ |
| | | ಹಿಂಗಾರು/ಬೇಸಿಗೆ | ೩೨,೦೧೨ | ೧೫,೫೧೮ | ೫೧೦ |
| | | ವಾರ್ಷಿಕ | ೫೧,೨೬೦ | ೨೪,೧೫೭ | ೪೯೬ |
| ೧೫ | ನೆಲಗಡಲೆ | ಮುಂಗಾರು | ೬,೪೪೩ | ೫,೦೮೬ | ೮೩೧ |
| | | ಹಿಂಗಾರು/ಬೇಸಿಗೆ | ೧೩೧ | ೧೪೪ | ೧,೧೫೬ |
| | | ವಾರ್ಷಿಕ | ೬,೫೭೪ | ೫,೨೩೦ | ೮೩೭ |
| ೧೬ | ಹರಳು | ಮುಂಗಾರು | ೧,೬೭೮ | ೧,೨೯೪ | ೮೧೨ |
| ೧೭ | ಎಳ್ಳು | ಮುಂಗಾರು | ೩,೩೯೯ | ೧,೨೫೯ | ೩೯೦ |
| ೧೮ | ಸೋಯಾ ಅವರೆ | ಮುಂಗಾರು | ೪೮ | ೪೪ | ೯೬೩ |
| ೧೯ | ಹುಚ್ಚೆಳ್ಳು | ಮುಂಗಾರು | ೨,೧೬೮ | ೪೦೮ | ೧೯೦ |
| ೨೦ | ಸೂರ್ಯಕಾಂತಿ | ವಾರ್ಷಿಕ | ೪೯ | ೨೯ | ೬೨೩ |
| ೨೧ | ಒಟ್ಟು ಎಣ್ಣೆ ಕಾಳುಗಳು | ವಾರ್ಷಿಕ | ೧೩,೯೧೬ | ೮,೨೬೪ | ೬೨೫ |
| ೨೨ | ಹತ್ತಿ | ವಾರ್ಷಿಕ | ೧೦೯ | ೧೨೧ | ೧೯೯ |
| ೨೩ | ಕಬ್ಬು | ವಾರ್ಷಿಕ – ನೀ | ೩೧,೩೭೭ | ೪೧,೧೩,೫೨೫ | ೧೩೮ |
| | | **ತೋಟಗಾರಿಕಾ ಬೆಳೆಗಳು** | | | |
| ೨೪ | ಆಲೂಗಡ್ಡೆ | ಮುಂಗಾರು | ೧೧ | ೧೩೪ | ೧೨,೧೬೯ |
| | | ಹಿಂಗಾರು | ೪೭ | ೯೪೬ | ೨೦,೧೩೦ |
| | | ವಾರ್ಷಿಕ | ೫೮ | ೧೦೮೦ | ೧೮,೬೨೧ |
| ೨೫ | ಈರುಳ್ಳಿ | ಮುಂಗಾರು | ೮೦ | ೪೬೯ | ೫,೮೬೫ |
| | | ಹಿಂಗಾರು | ೧೩೩ | ೧೩೩೫ | ೧೦,೦೩೭ |
| | | ಬೇಸಿಗೆ | ೫೮ | ೬೧೬ | ೧೦,೬೨೮ |
| | | ವಾರ್ಷಿಕ | ೨೭೧ | ೨,೪೨೦ | ೮,೯೩೦ |
| ೨೬ | ಟೊಮಾಟೋ | ಮುಂಗಾರು | ೭೧೮ | ೧೧,೦೭೭ | ೧೫,೪೨೭ |
| | | ಹಿಂಗಾರು | ೪೦೨ | ೫,೦೩೪ | ೧೨,೫೨೨ |
| | | ಬೇಸಿಗೆ | ೩೨೯ | ೧,೮೭೫ | ೫,೭೦೦ |
| | | ವಾರ್ಷಿಕ | ೧,೪೪೯ | ೧೭,೯೮೬ | ೧೨,೪೧೩ |
| ೨೭ | ಹುರುಳಿಕಾಯಿ | ಮುಂಗಾರು | ೧೧೮ | ೧,೧೪೬ | ೯,೭೧೦ |
| | | ಹಿಂಗಾರು | ೧೨೩ | ೧,೨೫೮ | ೧೦,೨೩೦ |
| | | ಬೇಸಿಗೆ | ೬೬ | ೬೬೬ | ೧೦,೦೮೮ |
| | | ಒಟ್ಟು | ೩೦೭ | ೩,೦೭೦ | ೧೦,೦೦೦ |
| ೨೮ | ಬದನೆ | ಮುಂಗಾರು | ೩೬೬ | ೩,೮೯೧ | ೧೦,೬೩೨ |

| ೧ | ೨ | ೩ | ೪ | ೫ | ೬ |
|---|---|---|---|---|---|
| | | ಹಿಂಗಾರು | ೧೮೯ | ೨,೩೪೬ | ೧೨,೪೧೩ |
| | | ಬೇಸಿಗೆ | ೧೭೪ | ೨,೦೨೯ | ೧೧,೬೫೯ |
| | | ವಾರ್ಷಿಕ | ೭೨೯ | ೮,೨೬೬ | ೧೧,೩೩೯ |
| ೨೯ | ಬಾಳೆ | ವಾರ್ಷಿಕ | ೧,೨೧೧ | ೨೩,೭೮೮ | ೧೯,೬೪೩ |
| ೩೦ | ಸಿಹಿಗೆಣಸು | ವಾರ್ಷಿಕ | ೧೦ | ೬೩ | ೬,೩೧೪ |
| ೩೧ | ಮಾವು | ವಾರ್ಷಿಕ | ೩,೭೭೫ | ೧೪,೩೧೧ | ೩,೭೯೧ |
| ೩೨ | ಗೋಡಂಬಿ | ವಾರ್ಷಿಕ | ೧೬೨ | ೫೬ | ೩೪೯ |
| ೩೩ | ಸೀಬೆ | ವಾರ್ಷಿಕ | ೧೮೧ | ೯೯೨ | ೫,೪೭೮ |
| ೩೪ | ಸಪೋಟ | ವಾರ್ಷಿಕ | ೨೯೮ | ೯೭೪ | ೩,೨೬೮ |
| ೩೫ | ನಿಂಬೆ | ವಾರ್ಷಿಕ | ೩೯ | ೪೩೩ | ೧೧,೧೦೭ |
| ೩೬ | ಒಣಮೆಣಸಿನಕಾಯಿ | ಮುಂಗಾರು | ೬೩೦ | ೫೨೭ | ೮೩೬ |
| | | ಹಿಂಗಾರು | ೯೫ | ೧೫೦ | ೧,೫೭೯ |
| | | ಬೇಸಿಗೆ | ೧೦೧ | ೧೩೧ | ೧,೩೦೦ |
| | | ಒಟ್ಟು | ೮೨೬ | ೮೦೮ | ೯೭೮ |
| ೩೭ | ಅರಿಶಿನ | ವಾರ್ಷಿಕ | ೯೪ | ೪೦೭ | ೪,೩೩೪ |
| ೩೮ | ಅಡಿಕೆ | ವಾರ್ಷಿಕ | ೬೮೧ | ೪,೫೮೭ | ೬,೮೦೩ |
| ೩೯ | ತೆಂಗು | ವಾರ್ಷಿಕ | ೧೬,೯೫೬ | ೮೦,೯೯೫ | ೪,೮೨೫ |

ಆಧಾರ : ಕರ್ನಾಟಕದ ಮುಖ್ಯ ಬೆಳೆಗಳ ಪರಿಷ್ಕೃತ ಅಂತಿಮ ಅಂದಾಜು, ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ, ಬೆಂಗಳೂರು ೨೦೦೨, ಡಿ ಇ ಎಸ್ ನಂ ೧೬/೨೦೦೨

**ಕೃಷಿ ಋತುಗಳು**

ಜಿಲ್ಲೆಯ ಕೃಷಿ ಋತುಗಳನ್ನು ಸ್ಥಳೀಯವಾಗಿ ಕಾರ್ ಮತ್ತು ಹೈನ್ ಋತುಗಳೆಂದು ಗುರುತಿಸಿದ್ದಾರೆ. ಕಾರ್ ಋತು ಏಪ್ರಿಲ್–ಮೇ ತಿಂಗಳಲ್ಲೂ ಮತ್ತು ಹೈನ್ ಋತು ಜುಲೈ ತಿಂಗಳಲ್ಲೂ ಪ್ರಾರಂಭವಾಗುತ್ತವೆ. ಇವೆರಡು ಋತುಗಳ ಜೊತೆಗೆ ಸೆಪ್ಟೆಂಬರ್–ಅಕ್ಟೋಬರ್ ತಿಂಗಳಲ್ಲಿ ಪ್ರಾರಂಭವಾಗುವ ಹಿಂಗಾರು ಋತು ಮತ್ತೊಂದು ಕೃಷಿ ಚಟುವಟಿಕೆಯ ಕಾಲವಾಗಿದೆ. ಆದರೆ ಇತ್ತೀಚೆಗೆ ಕೃಷಿ ಕಾಲವನ್ನು ಹಿಂಗಾರು (ರಬಿ), ಮುಂಗಾರು (ಖಾರೀಪ್) ಮತ್ತು ಬೇಸಿಗೆ ಋತುಗಳೆಂದು ಕರೆಯಲಾಗುತ್ತಿದೆ. ಪ್ರಮುಖ ಬೆಳೆಗಳ ಕಾಲವನ್ನುಕೋಷ್ಟಕ ೪.೧೦ ರಲ್ಲಿ ನೀಡಿದೆ.

**ಕೋಷ್ಟಕ ೪.೧೦ ಪ್ರಮುಖ ಬೆಳೆಗಳ ಕಾಲ**

| ಬೆಳೆ | ಋತು | ಬಿತ್ತನೆ | ಅಂತರ ಬೇಸಾಯ | ಕೊಯಿಲು |
|---|---|---|---|---|
| ೧. ಭತ್ತ | ಹೈನ್ | ಜೂನ್–ಜುಲೈ | ಆಗಸ್ಟ್–ಸೆಪ್ಟೆಂಬರ್ | ಡಿಸೆಂಬರ್–ಜನವರಿ |
| | ಕಾರ್ | ಫೆಬ್ರವರಿ–ಮಾರ್ಚ್ | ಏಪ್ರಿಲ್–ಮೇ | ಜೂನ್–ಜುಲೈ |
| ೨. ರಾಗಿ | ಹೈನ್ | ಜೂನ್–ಜುಲೈ | ಆಗಸ್ಟ್–ಸೆಪ್ಟೆಂಬರ್ | ಡಿಸೆಂಬರ್–ಜನವರಿ |
| | ಕಾರ್ | ಫೆಬ್ರವರಿ–ಮಾರ್ಚ್ | ಏಪ್ರಿಲ್–ಮೇ | ಜೂನ್–ಜುಲೈ |
| ೩. ಜೋಳ | ಮುಂಗಾರು | ಮಾರ್ಚ್–ಏಪ್ರಿಲ್ | ಏಪ್ರಿಲ್–ಮೇ | ಜೂನ್–ಜುಲೈ |
| | ಚಳಿಗಾಲ | ಸೆಪ್ಟೆಂಬರ್–ಅಕ್ಟೋಬರ್ | ನವೆಂಬರ್ | ಡಿಸೆಂಬರ್–ಜನವರಿ |
| ೪. ಕಬ್ಬು | ವಾರ್ಷಿಕ | ಜನವರಿ–ಫೆಬ್ರವರಿ | ಏಪ್ರಿಲ್–ಮೇ | ಜೂನ್–ಜುಲೈ |
| | | ಸೆಪ್ಟೆಂಬರ್–ಅಕ್ಟೋಬರ್ | ಡಿಸೆಂಬರ್–ಜನವರಿ | ಜನವರಿ–ಫೆಬ್ರವರಿ |

**ಕೃಷಿ ಉಪಕರಣಗಳು :** ಜಿಲ್ಲೆಯಲ್ಲಿ ಪ್ರಸ್ತುತ ಈ ಕೆಳಕಂಡ ಕೃಷಿ ಉಪಕರಣಗಳನ್ನು ಬಳಸಲಾಗುತ್ತಿದೆ. ಭೂಮಿಯನ್ನು ಹದಮಾಡುವ ಉಪಕರಣಗಳಲ್ಲಿ ಕೋಲಾರ ಮೌಲ್ಡ್ ಬೋರ್ಡ ಪ್ಲೋ(ಕೆ.ಎಂ.ಪ್ಲೋ), ಬಾರ್ ಪಾಯಿಂಟ್ ನೇಗಿಲು, ಬಂಡ್ ಫಾರ್ಮರ್(ಬದು ಮಾಡುವ ಉಪಕರಣ), ಪಡ್ಲರ್(ಗದ್ದೆ ಸಮ ಮಾಡುವ ಉಪಕರಣ), ರಿಡ್ಜರ್(ಬಿತ್ತನೆಗೆ ಅಣಿಮಾಡುವ ಉಪಕರಣ); ಬಿತ್ತನೆ ಉಪಕರಣಗಳಲ್ಲಿ ರಾಗಿ ಸಂಯುಕ್ತ ಕೂರಿಗೆ, ನೆಲಗಡಲೆ ಸಂಯುಕ್ತ ಕೂರಿಗೆ ಹಾಗೂ ಬಹುಸಾಲು ಸಾಧನ ಹಾಗೂ ಡ್ರಂ ಸೀಡರ್; ಒಕ್ಕಣೆ ಸಾಧನಗಳಲ್ಲಿ ಕಡಲೆ ಕಾಯಿ ಸುಲಿಯುವ ಯಂತ್ರ, ತೆಂಗಿನ ಮರ ಹತ್ತುವ ಸಾಧನ, ತೆಂಗಿನಕಾಯಿ ಸುಲಿಯುವ ಸಾಧನ, ಗಾಳಿ ತೂರುವ ಯಂತ್ರ ಹಾಗೂ ಸುಧಾರಿತ ಕಣಜ.

## ನೀರಾವರಿ

ಜಿಲ್ಲೆಯಲ್ಲಿ ಕೃಷ್ಣರಾಜಸಾಗರ ಜಲಾಶಯ ಯೋಜನೆ ಮತ್ತು ಹೇಮಾವತಿ ಜಲಾಶಯ ಯೋಜನೆಗಳಡಿ ೧,೧೦,೫೮೭ ಹೆಕ್ಟೇರ್ ಪ್ರದೇಶಕ್ಕೆ ೧೯೯೭-೯೮ನೇ ಸಾಲಿನಲ್ಲಿ ನೀರಾವರಿ ಒದಗಿಸಲಾಗಿತ್ತು. ಇದು ಜಿಲ್ಲೆಯ ಒಟ್ಟು ಭೌಗೋಳಿಕ ಪ್ರದೇಶದ ಶೇ.೨೨.೨ ಹಾಗೂ ರಾಜ್ಯದ ಒಟ್ಟು ನೀರಾವರಿ ಪ್ರದೇಶದ ಶೇ.೪.೭೬ ರಷ್ಟು ಆಗಿತ್ತು. ಜಿಲ್ಲೆಯಲ್ಲಿ ಹೆಚ್ಚು ನೀರಾವರಿಯಾದ ಪ್ರದೇಶ ಕೃಷ್ಣರಾಜಪೇಟೆ ತಾಲೂಕಿನಲ್ಲಿ ಹಾಗೂ ಕಡಿಮೆ ನೀರಾವರಿಯಾದ ಪ್ರದೇಶ ನಾಗಮಂಗಲ ತಾಲೂಕಿನಲ್ಲಿ ಕಂಡುಬರುತ್ತದೆ. ನೀರಾವರಿ ಮೂಲಗಳಲ್ಲಿ ಒಟ್ಟು ನೀರಾವರಿಯಾದ ಪ್ರದೇಶದ ಶೇ.೮೦.೪೩ ರಷ್ಟು ಪ್ರದೇಶ ಕಾಲುವೆಗಳಿಂದ ಹಾಗೂ ಶೇ.೧೬.೦೦ರಷ್ಟು ಪ್ರದೇಶ ಬಾವಿ ಹಾಗೂ ಕೆರೆಗಳಿಂದ ನೀರಾವರಿ ಸೌಲಭ್ಯ ಪಡೆದಿವೆ. ವಿವಿಧ ನೀರಾವರಿ ಮೂಲಗಳಿಂದ ೧೯೯೭-೯೮ರಲ್ಲಿ ಒದಗಿಸಲ್ಪಟ್ಟ ನೀರಾವರಿ ಸೌಲಭ್ಯದ ತಾಲೂಕುವಾರು ವಿವರಗಳನ್ನು ಕೋಷ್ಟಕ ೪.೧೧ ರಲ್ಲಿ ನೀಡಿದೆ.

**ಕೋಷ್ಟಕ ೪.೧೧ ಜಿಲ್ಲೆಯಲ್ಲಿ ನೀರಾವರಿಯಾದ ಪ್ರದೇಶ –ಹೆಕ್ಟೇರುಗಳಲ್ಲಿ**

| ತಾಲೂಕು | ಕಾಲುವೆಗಳಿಂದ | ಕೆರೆಗಳಿಂದ | ಬಾವಿಗಳಿಂದ | ಕೊಳವೆ ಬಾವಿಗಳಿಂದ | ಇತರೆ ಮೂಲಗಳಿಂದ | ಒಟ್ಟು |
|---|---|---|---|---|---|---|
| ಕೃಷ್ಣರಾಜಪೇಟೆ | ೧೭,೨೦೮ | ೪,೨೦೦ | ೨,೧೮೦ | ೧೩೦ | ೪೨೨ | ೨೪,೧೪೦ |
| ಮದ್ದೂರು | ೧,೭೭೧ | ೬೮೧ | ೧,೧೧೫ | ೧,೦೫೦ | ೧೫೧ | ೨೦,೭೬೮ |
| ಮಳವಳ್ಳಿ | ೧೫,೮೪೦ | ೧,೫೪೭ | ೧,೮೫೦ | ೨೮೦ | ೧೯೬ | ೧೯,೭೧೩ |
| ಮಂಡ್ಯ | ೧೬,೮೪೦ | ೨೮೨ | ೯೨೬ | ೨೭ | ೩೭೧ | ೧೮,೪೪೬ |
| ನಾಗಮಂಗಲ | ೧,೬೦೦ | ೨,೫೧೦ | ೭೪೧ | ೮೦೦ | ೬೯ | ೫,೭೨೦ |
| ಪಾಂಡವಪುರ | ೮,೮೩೩ | ೩೦೦ | ೧,೧೨೬ | ೧೭೩ | ೧೮೮ | ೧೦,೬೨೦ |
| ಶ್ರೀರಂಗಪಟ್ಟಣ | ೧೦,೮೬೪ | ೮೫ | ೧೯೫ | ೨೨ | ೧೪ | ೧೧,೧೮೦ |
| ಒಟ್ಟು | ೮೮,೯೫೬ | ೯,೬೦೫ | ೮,೧೩೩ | ೨,೪೮೨ | ೧,೪೧೧ | ೧,೧೦,೫೮೭ |

ಆಧಾರ : ಜಿಲ್ಲಾ ಅಂಕಿಅಂಶಗಳ ನೋಟ ೧೯೯೭-೯೮, ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಚೇರಿ, ಮಂಡ್ಯ.

## ಕೋಷ್ಟಕ ೪.೧೨ ಬೆಳೆವಾರು ನೀರಾವರಿಯಾದ ಪ್ರದೇಶಗಳ ವಿವರ (ಹೆಕ್ಟೇರುಗಳಲ್ಲಿ)

| ವರ್ಷ | ೧೯೮೦-೮೧ | ೧೯೯೦-೯೧ | ೧೯೯೩-೯೪ |
|---|---|---|---|
| ಭತ್ತ | ೬೫,೧೧೦ | ೬೬,೩೬೭ | ೭೪,೦೬೯ |
| ಜೋಳ | ೧,೦೧೯ | ೧೦೨ | ೬೩೧ |
| ರಾಗಿ | ೨೧,೩೩೮ | ೧೫,೪೬೬ | ೧೨,೮೧೬ |
| ಏಕದಳ ಮತ್ತು ತೃಣಧಾನ್ಯಗಳು | ೮೭,೮೬೭ | ೮೧,೯೧೨ | ೮೭,೫೩೨ |
| ದ್ವಿದಳ ಧಾನ್ಯಗಳು | ೩,೧೮೦ | ೩,೦೫೪ | ೩,೧೮೧ |
| ಕಬ್ಬು | ೨೫,೨೩೦ | ೨೯,೯೬೫ | ೩೨,೨೬೫ |
| ಬಾಳೆ | ೭೮೨ | ೫೨೫ | ೫೦೯ |
| ತೆಂಗು | ೨೮ | ೧,೭೩೦ | ೨,೫೯೦ |
| ನೆಲಗಡಲೆ | ೧,೩೪೮ | ೧,೬೬೭ | ೧,೬೦೨ |
| ಸೂರ್ಯಕಾಂತಿ | ೮೩ | ೭ | ೧೦೪ |
| ಒಟ್ಟು ಎಣ್ಣೆಕಾಳುಗಳು (ತೆಂಗು ಹೊರತುಪಡಿಸಿ) | ೧,೪೫೬ | ೨,೪೦೨ | ೨,೩೨೫ |
| ಹಿಪ್ಪುನೇರಳೆ | ೫,೬೨೦ | ೬,೬೨೭ | ೭,೧೯೬ |
| ಎಲ್ಲಾ ಬೆಳೆಗಳು | ೧,೩೦,೦೩೧ | ೧,೨೮,೪೧೩ | ೧,೩೮,೦೭೬ |

ಆಧಾರ : ಬ್ರೋಚರ್ ಆನ್ ಇರಿಗೇಷನ್ ಸ್ಟಾಟಿಸ್ಟಿಕ್ಸ್ ಇನ್ ಕರ್ನಾಟಕ ೧೯೮೦-೮೧ ರಿಂದ ೧೯೯೩-೯೪ ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ ಬೆಂಗಳೂರು ೧೯೯೫.

## ಕೋಷ್ಟಕ ೪.೧೩ ನೀರಾವರಿ ಮೂಲಗಳ ವಿವರ

| ವಿವರ | ೧೯೮೦-೮೧ | ೧೯೯೦-೯೧ | ೧೯೯೩-೯೪ |
|---|---|---|---|
| ಕೊಳವೆ ಬಾವಿಗಳು | ೦ | ೨೫೦ | ೪೨೦ |
| ಬಾವಿಗಳು | ೬,೯೯೦ | ೮,೪೯೧ | ೯,೭೨೨ |
| ಒಟ್ಟು ಬಾವಿಗಳು | ೬,೯೯೦ | ೮,೭೪೧ | ೧೦,೧೪೨ |
| ಏತ ನೀರಾವರಿ ಯೋಜನೆಗಳು | ೫ | ೧೬೮ | ೧೬೩ |
| ೪೦ ಹೆಕ್ಟೇರ್‌ಗಿಂತ ಹೆಚ್ಚು ಅಚ್ಚುಕಟ್ಟು ಪ್ರದೇಶದ ಕೆರೆಗಳು | ೧೫೮ | ೧೫೮ | ೧೫೮ |
| ೪೦ ಹೆಕ್ಟೇರ್‌ಗಿಂತ ಕಡಿಮೆ ಅಚ್ಚುಕಟ್ಟು ಪ್ರದೇಶದ ಕೆರೆಗಳು | ೪೬೦ | ೪೬೦ | ೪೬೦ |
| ಒಟ್ಟು ಕೆರೆಗಳು | ೬೧೮ | ೬೧೮ | ೬೧೮ |
| ವಿದ್ಯುತ್ ಚಾಲಿತ ನೀರಾವರಿ ಪಂಪುಗಳು | ೮,೫೯೧ | ೧೬,೭೫೭ | ೨೧,೦೬೯ |
| ಡೀಸೆಲ್ ಇಂಜಿನ್ ಹೊಂದಿದ ನೀರಾವರಿ ಪಂಪುಗಳು | ೭೩೮ | ೭೨೮ | ೭೮೨ |
| ಒಟ್ಟು ಪಂಪುಸೆಟ್ಟುಗಳು | ೯,೩೨೯ | ೧೭,೪೮೫ | ೨೧,೮೫೧ |
| **ನೀರಾವರಿಯಾದ ಪ್ರದೇಶ (ಹೆಕ್ಟೇರುಗಳಲ್ಲಿ)** | | | |
| ಕಾಲುವೆಗಳಿಂದ - (ಒಟ್ಟು) | ೧,೦೭,೬೫೪ | ೧,೦೮,೭೦೫ | ೧,೧೬,೪೨೮ |
| ಕಾಲುವೆಗಳಿಂದ (ನಿವ್ವಳ) | ೮೧,೨೭೧ | ೮೨,೭೯೯ | ೮೬,೪೭೧ |
| ಕೆರೆಗಳಿಂದ - (ಒಟ್ಟು) | ೧೦,೮೩೯ | ೮,೫೨೦ | ೧೦,೮೩೧ |
| ಕೆರೆಗಳಿಂದ - (ನಿವ್ವಳ) | ೬,೧೭೯ | ೭,೪೪೮ | ೮,೩೫೩ |
| ಬಾವಿಗಳಿಂದ - (ಒಟ್ಟು) | ೯,೧೭೪ | ೯,೦೬೯ | ೮,೧೦೮ |
| ಬಾವಿಗಳಿಂದ - (ನಿವ್ವಳ) | ೭,೯೬೦ | ೭,೪೩೨ | ೬,೬೩೩ |
| ಎಲ್ಲಾ ಮೂಲಗಳಿಂದ - (ಒಟ್ಟು) | ೧,೩೦,೦೩೧ | ೧,೨೮,೪೧೩ | ೧,೩೮,೪೧೯ |
| ಎಲ್ಲಾ ಮೂಲಗಳಿಂದ - (ನಿವ್ವಳ) | ೯೭,೪೬೭ | ೯೯,೫೬೩ | ೧,೦೩,೯೬೯ |

**ಕೋಷ್ಟಕ ೪.೧೪ ಜಿಲ್ಲೆಯಲ್ಲಿ ತಾಲೂಕುವಾರು ನೀರಾವರಿ ಸೌಲಭ್ಯಗಳ ವಿವರಗಳು ೧೯೯೯–೨೦೦೦**

| ವಿವರ | ಕೃಷ್ಣರಾಜ ಪೇಟೆ | ಮದ್ದೂರು | ಮಳವಳ್ಳಿ | ಮಂಡ್ಯ | ನಾಗ ಮಂಗಲ | ಪಾಂಡವ ಪುರ | ಶ್ರೀರಂಗ ಪಟ್ಟಣ | ಒಟ್ಟು |
|---|---|---|---|---|---|---|---|---|
| ಕೊಳವೆ ಬಾವಿಗಳು | ೧೩೮ | ೧೦೩ | ೧೭೦ | ೨೧ | ೩೩೫ | ೪೨ | ೫೮ | ೮೬೭ |
| ಏತ ನೀರಾವರಿ ಯೋಜನೆಗಳು | ೬ | ೨೧ | ೧೪ | ೯೬ | ೫ | ೨೯ | – | ೧೭೧ |
| **ಕೆರೆಗಳು** | | | | | | | | |
| ೪೦ ಹೆಕ್ಟೇರ್‌ಗಿಂತ ಹೆಚ್ಚು ಅಚ್ಚುಕಟ್ಟು ಪ್ರದೇಶದ | ೧೦ | ೬೧ | ೧೧ | ೩೧ | ೩೮ | ೬ | ೩ | ೧೬೦ |
| ೪೦ ಹೆಕ್ಟೇರ್‌ಗಿಂತ ಕಡಿಮೆ ಅಚ್ಚುಕಟ್ಟು ಪ್ರದೇಶ | ೧೩೨ | ೮೨ | ೩೬ | ೬೪ | ೯೭ | ೪೨ | ೧೬ | ೪೬೯ |
| ಒಟ್ಟು ಕೆರೆಗಳು | ೧೪೨ | ೧೪೩ | ೪೭ | ೯೫ | ೧೩೫ | ೪೮ | ೧೯ | ೬೨೯ |
| **ನೀರಾವರಿ ಪಂಪ್‌ಸೆಟ್ಟುಗಳು** | | | | | | | | |
| ವಿದ್ಯುಚ್ಛಕ್ತಿ | ೩,೭೭೨ | ೪,೬೫೨ | ೫,೨೭೬ | ೩,೯೬೫ | ೩,೦೪೦ | ೨,೭೫೦ | ೯೫೬ | ೨೪,೪೧೧ |
| ಡೀಸೆಲ್ | ೧೧೫ | ೧೯೮ | ೧೬೮ | ೧೪೦ | ೨೨೦ | ೪೮ | ೫೪ | ೯೪೩ |
| ಒಟ್ಟು | ೩,೮೮೭ | ೪,೮೫೦ | ೫,೪೪೪ | ೪,೧೦೫ | ೩,೨೬೦ | ೨,೭೯೮ | ೧,೦೧೦ | ೨೫,೩೫೪ |
| **ನೀರಾವರಿಯಾದ ಕ್ಷೇತ್ರ ಹೆಕ್ಟೇರುಗಳಲ್ಲಿ** | | | | | | | | |
| **ಕಾಲುವೆಗಳಿಂದ** | | | | | | | | |
| ಒಟ್ಟು | ೧೯,೯೪೧ | ೧೮,೯೫೭ | ೧೬,೭೦೯ | ೨೬,೬೧೯ | ೩,೫೭೬ | ೧೦,೧೯೩ | ೧೫,೨೧೭ | ೧,೧೧,೧೫೨ |
| ನಿವ್ವಳ | ೧೪,೭೫೭ | ೧೫,೦೦೧ | ೧೩,೫೬೦ | ೨೧,೩೮೬ | ೨,೪೦೭ | ೮,೨೯೬ | ೧೦,೯೪೨ | ೮೬,೩೪೯ |
| **ಕೆರೆಗಳಿಂದ** | | | | | | | | |
| ಒಟ್ಟು | ೩,೭೧೦ | ೨,೮೩೮ | ೧,೧೭೫ | ೧,೧೦೦ | ೮೧೫ | ೫೨೦ | ೯೨ | ೧೦,೨೫೦ |
| ನಿವ್ವಳ | ೩,೬೭೫ | ೧,೭೬೦ | ೯೯೫ | ೭೦೦ | ೪೯೬ | ೪೬೦ | ೭೨ | ೮,೧೫೮ |
| **ಬಾವಿಗಳಿಂದ** | | | | | | | | |
| ಒಟ್ಟು | ೩,೩೧೫ | ೩,೭೧೦ | ೨,೩೦೦ | ೧,೩೦೦ | ೧,೧೪೦ | ೨,೧೧೦ | ೫೩೪ | ೧೪,೪೦೯ |
| ನಿವ್ವಳ | ೨,೮೪೦ | ೨,೯೧೦ | ೧,೮೨೨ | ೫೮೦ | ೪೨೫ | ೧,೩೮೫ | ೩೨೮ | ೧೦,೨೯೦ |
| **ಕೊಳವೆ ಬಾವಿಗಳಿಂದ** | | | | | | | | |
| ಒಟ್ಟು | ೧೩೦ | ೨,೦೨೩ | ೩೭೦ | ೧೮೫ | ೬೫೦ | ೩೩೫ | ೨೭೫ | ೩,೯೬೮ |
| ನಿವ್ವಳ | ೧೩೦ | ೧,೦೦೦ | ೨೬೦ | ೪೫ | ೪೧೫ | ೩೦೦ | ೧೨೫ | ೨,೨೭೫ |
| **ಏತ ನೀರಾವರಿ ಯೋಜನೆಗಳಿಂದ** | | | | | | | | |
| ಒಟ್ಟು | ೧೨೬ | ೨೪೫ | ೩೯ | ೧೪೨ | – | ೧೨೮ | – | ೬೮೦ |
| ನಿವ್ವಳ | ೧೨೬ | ೧೯೫ | ೩೯ | ೯೦ | – | ೧೨೫ | – | ೫೭೫ |
| **ಇತರೆ ಮೂಲಗಳಿಂದ** | | | | | | | | |
| ಒಟ್ಟು | ೨೮ | ೧೪೬ | ೧೦ | ೧೩೮ | ೫೯ | ೧೪೫ | ೪೨ | ೫೬೮ |
| ನಿವ್ವಳ | ೨೮ | ೧೪೬ | ೧೦ | ೬೦ | ೨೪ | ೭೦ | ೩೭ | ೩೭೫ |
| **ಎಲ್ಲಾ ಮೂಲಗಳಿಂದ** | | | | | | | | |
| ಒಟ್ಟು | ೨೭,೨೫೦ | ೨೭,೯೧೯ | ೨೦,೬೦೩ | ೨೯,೪೮೪ | ೬,೧೮೦ | ೧೩,೪೩೧ | ೧೬,೧೬೦ | ೧,೪೧,೦೨೭ |
| ನಿವ್ವಳ | ೨೧,೫೫೬ | ೨೧,೦೧೨ | ೧೬,೬೮೬ | ೨೨,೮೬೧ | ೩,೭೬೭ | ೧೦,೬೩೬ | ೧೧,೫೦೪ | ೧,೦೮,೦೨೨ |

ಆಧಾರ : ವಾರ್ಷಿಕ ಋತು ಮತ್ತು ಬೆಳೆಗಳ ಅಂಕಿ ಅಂಶಗಳು. ೧೯೯೯–೨೦೦೦ ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ.

ಈ ಜಿಲ್ಲೆಯಲ್ಲಿ ಹಿಂದಿನಿಂದಲೂ ಕಾವೇರಿ, ಹೇಮಾವತಿ, ಶಿಂಷಾ, ಲೋಕಪಾವನಿ, ವೀರವೈಷ್ಣವಿ ಮತ್ತು ಇತರ ಹಳ್ಳ ತೊರೆಗಳ ನೀರನ್ನು ಅಡ್ಡಕಟ್ಟೆ ನಿರ್ಮಿಸಿ ಕಾಲುವೆಗಳ ಮೂಲಕ ಕೃಷಿಗೆ ಬಳಸಲಾಗುತ್ತಿತ್ತು. ಜಿಲ್ಲೆಯಲ್ಲಿದ್ದಂತಹ ಆರು ಅಣೆಕಟ್ಟುಗಳೆಂದರೆ–ಮಂದಗೆರೆ, ಹೇಮಗಿರಿ, ತಗ್ಗಳ್ಳಿ, ಬೊಳೇನಹಳ್ಳಿ, ಉಯ್ಯನಹಳ್ಳಿ ಮತ್ತು ದುಮ್ಮಸಂದ್ರ ಅಣೆಕಟ್ಟುಗಳು.

ಕೃಷ್ಣರಾಜಪೇಟೆ ತಾಲೂಕಿನ ಅಕ್ಕಿಹೆಬ್ಬಾಳು ಹೋಬಳಿಯ ಮಂದಗೆರೆ ಬಳಿ ಹೇಮಾವತಿ ನದಿಗೆ ಅಡ್ಡಲಾಗಿ ೬೬೬ ಅಡಿ ಉದ್ದದ ಅಣೆಕಟ್ಟೆಯನ್ನು ನಿರ್ಮಿಸಲಾಗಿದೆ. ಇದರ ಬಲದಂಡೆ ನಾಲೆ ೩೭ ಮೈಲಿ ಮತ್ತು ಎಡದಂಡೆ ನಾಲೆ ೨೧ ಮೈಲಿ ಉದ್ದವಿದೆ. ಇದೇ ಹೋಬಳಿಯ ಬಂಡಿಹೊಳೆಯ ಬಳಿ ಹೇಮಾವತಿ ನದಿಗೆ ಅಡ್ಡಲಾಗಿ ೧,೩೬೦ ಅಡಿ ಉದ್ದದ ಅಣೆಕಟ್ಟೆಯನ್ನು ನಿರ್ಮಿಸಲಾಗಿದ್ದು, ಇದರ ಎಡದಂಡೆ ನಾಲೆ ೨೧ ಮೈಲಿ ಉದ್ದವಿದೆ.

ಮದ್ದೂರು ತಾಲೂಕಿನ ತಗ್ಗಹಳ್ಳಿಯ ಬಳಿ ಶಿಂಷಾ ನದಿಗೆ ಅಡ್ಡಲಾಗಿ ೮೨೫ ಅಡಿ ಉದ್ದದ ಅಣೆಕಟ್ಟೆಯನ್ನು ನಿರ್ಮಿಸಲಾಗಿದ್ದು, ಇದರ ಎಡದಂಡೆ ನಾಲೆ ೨೩ ಮೈಲಿ ಮತ್ತು ಬಲದಂಡೆ ನಾಲೆ ೧೨ ಮೈಲಿಗಳ ಉದ್ದವಿದೆ.

ಮೇಲುಕೋಟೆ ಹೋಬಳಿ ಬೋಳೇನಹಳ್ಳಿ ಬಳಿ ಲೋಕಪಾವನಿ ನದಿಗೆ ಅಡ್ಡಲಾಗಿ ೧೩೨ ಅಡಿ ಉದ್ದದ ಅಣೆಕಟ್ಟೆಯನ್ನು ಕಟ್ಟಲಾಗಿದೆ. ಇಲ್ಲಿಂದ ಮಾದರಹಳ್ಳಿ ಕೆರೆಗೆ ನೀರನ್ನೊದಗಿಸಲಾಗುತ್ತದೆ. ನಾಗಮಂಗಲ ತಾಲೂಕಿನ ಉಯ್ಯನಹಳ್ಳಿ ಬಳಿ ಲೋಕಪಾವನಿ ನದಿಗೆ ಅಡ್ಡಲಾಗಿ ನಿರ್ಮಿತವಾಗಿರುವ ಉಯ್ಯನಹಳ್ಳಿ ಅಣೆಕಟ್ಟೆಯ ಉದ್ದ ೩೭೦ ಅಡಿಗಳಾಗಿದೆ. ಇದು ಮೂರು ಮೈಲಿ ಉದ್ದದ ಕಾಲುವೆಯನ್ನು ಹೊಂದಿದೆ.

ನಾಗಮಂಗಲ ತಾಲೂಕಿನ ದುಮ್ಮಸಂದ್ರ ಬಳಿ ವೀರವೈಷ್ಣವಿ ನದಿಗೆ ಅಡ್ಡಲಾಗಿ ಕಟ್ಟಲಾಗಿರುವ ೪೦೦ ಅಡಿ ಉದ್ದದ ಅಣೆಕಟ್ಟೆ ನಾಲ್ಕು ಮೈಲಿ ಉದ್ದದ ನಾಲೆಯನ್ನು ಹೊಂದಿದೆ.

ಕೃಷ್ಣರಾಜಸಾಗರ ಯೋಜನೆಗೂ ಮೊದಲು ಕಾವೇರಿ ಮತ್ತು ಅದರ ಉಪನದಿಗಳ ನೀರನ್ನು ಕೃಷಿಗೆ ಬಳಸಿಕೊಳ್ಳಲಾಗುತ್ತಿತ್ತು. ಕೃಷ್ಣರಾಜಸಾಗರ ಅಣೆಕಟ್ಟೆಯ ನಿರ್ಮಾಣದ ಸಮಯದಲ್ಲಿ ಜಿಲ್ಲೆಯಲ್ಲಿದ್ದ ಅಣೆಕಟ್ಟುಗಳ ವಿವರ ಹೀಗಿದ್ದಿತು.

**ಕೋಷ್ಟಕ ೪.೧೫ ಕಾವೇರಿ ನದಿಗೆ ಜಿಲ್ಲೆಯಲ್ಲಿ ಕಟ್ಟಲಾಗಿದ್ದ ಅಣೆಕಟ್ಟುಗಳು ಹಾಗೂ ನಾಲೆಗಳ ವಿವರ**

| ವಿವರ | ನದಿ | | ಅಚ್ಚುಕಟ್ಟು (ಹೆಕ್ಟೇರುಗಳಲ್ಲಿ) |
|---|---|---|---|
| ೧ | ೨ | ೩ | ೪ |
| | **ಕೃಷ್ಣರಾಜಪೇಟೆ ತಾಲೂಕು** | | |
| ಶ್ರೀರಾಮದೇವರು ಅಣೆಕಟ್ಟು | ಹೇಮಾವತಿ | ಎಡದಂಡೆ | ೧,೨೬೨ |
| ಮಂದಗೆರೆ ಅಣೆಕಟ್ಟು | ಹೇಮಾವತಿ | ಎಡದಂಡೆ | ೧,೪೭೭ |
| | | ಬಲದಂಡೆ | ೪,೮೬೦ |
| ಹೇಮಗಿರಿ ಅಣೆಕಟ್ಟು | ಹೇಮಾವತಿ | ಎಡದಂಡೆ | ೯೯೨ |
| ರಾಮನಾಥಪುರ | ಕಾವೇರಿ | ಎಡದಂಡೆ | ೨೨೦ |
| ಕಟ್ಟೆಪುರ | ಕಾವೇರಿ | ಎಡದಂಡೆ | ೧,೦೧೨ |
| | | ಒಟ್ಟು | ೯,೭೬೩ |
| | **ಮದ್ದೂರು ತಾಲೂಕು** | | |
| ಶಿಂಷಾ | ಶಿಂಷಾ | ಎಡ ಮತ್ತು ಬಲದಂಡೆ | ೩,೦೭೮ |

| ೧ | ೨ | ೩ | ೪ |
|---|---|---|---|
| | **ಮಳವಳ್ಳಿ ತಾಲೂಕು** | | |
| ರಾಮಸ್ವಾಮಿ | ಕಾವೇರಿ | ಎಡದಂಡೆ | ೪೮೬ |
| ಮಾಧವಮಂತ್ರಿ | ಕಾವೇರಿ | ಎಡದಂಡೆ | ೨೦೮ |
| | | **ಒಟ್ಟು** | **೬೯೪** |
| | **ಶ್ರೀರಂಗಪಟ್ಟಣ ತಾಲೂಕು** | | |
| ಎಡತಿಟ್ಟು | ಕಾವೇರಿ | ಎಡದಂಡೆ | ೩೬ |
| ಬಂಗಾರದೊಡ್ಡಿ | ಕಾವೇರಿ | ಬಲದಂಡೆ | ೨೬೨ |
| ಮಹಾದೇವಪುರ | ಕಾವೇರಿ | ಬಲದಂಡೆ | ೭೦ |
| ದೇವರಾಯ | ಕಾವೇರಿ | ಬಲದಂಡೆ | ೧,೦೦೮ |
| ವಿರಿಜಾನದಿ | ಕಾವೇರಿ | ಬಲದಂಡೆ | ೪,೫೩೧ |
| ಚಿಕ್ಕದೇವರಾಯ | ಕಾವೇರಿ | ಎಡದಂಡೆ | ೬,೬೩೬ |
| | | **ಒಟ್ಟು** | **೧೨,೫೪೩** |
| | **ಒಟ್ಟು ಮಂಡ್ಯ ಜಿಲ್ಲೆ** | | **೨೬,೦೭೮** |

ಶ್ರೀರಂಗಪಟ್ಟಣ ತಾಲೂಕಿನ ಸೀತಾಪುರ ಗ್ರಾಮದ ಬಳಿ ೭೭೬ ಗಜ ಉದ್ದದ ಮಾಡದಕಟ್ಟೆ ಅಣೆಕಟ್ಟೆಯನ್ನು ನಿರ್ಮಿಸಲಾಗಿದ್ದು, ಇದರಿಂದ ಹೊರಡುವ ೭೨ ಮೈಲಿ ಉದ್ದದ ಚಿಕ್ಕದೇವರಾಯ ನಾಲೆಯು ಮಂಡ್ಯ ಮತ್ತು ಮೈಸೂರು ಜಿಲ್ಲೆಗಳಿಗೆ ನೀರನ್ನು ಒದಗಿಸುತ್ತದೆ.

ಬೆಳಗೊಳದಿಂದ ಒಂದು ಮೈಲಿ ದೂರದಲ್ಲಿ ಇರುವ ಬಲಮುರಿ ಅಣೆಕಟ್ಟೆಯಿಂದ ಹೊರಡುವ ವಿರಿಜಾ ನಾಲೆಯು ೩೮ ಮೈಲಿ ಸಾಗುತ್ತದೆ. ಶ್ರೀರಂಗಪಟ್ಟಣದ ಪಶ್ಚಿಮವಾಹಿನಿಗೆ ಅಡ್ಡಲಾಗಿ ಬಂಗಾರದೊಡ್ಡಿ ಅಣೆಕಟ್ಟೆಯಿದ್ದು, ಇದರಿಂದ ಹೊರಡುವ ಬಂಗಾರದೊಡ್ಡಿ ನಾಲೆಯು ಮೇಲ್ಗಾಲುವೆಯ ಮುಖಾಂತರ ಶ್ರೀರಂಗಪಟ್ಟಣ ದ್ವೀಪ ತಲುಪಿ ಅಲ್ಲಿ ಮೂರು ಕವಲೊಡೆಯುತ್ತದೆ. ಒಂದು ನಾಲೆಯು ಶ್ರೀರಂಗಪಟ್ಟಣ ಕೋಟೆಗೆ ನೆಲಾಂತರ್ಗತ ಕಾಲುವೆಯ ಮುಖಾಂತರ ಸಾಗಿದರೆ, ಎರಡನೆಯ ಕಾಲುವೆಯು ದರಿಯಾ ದೌಲತ್ ತೋಟವನ್ನು ತಲುಪುತ್ತದೆ. ಮೂರನೆಯ ಕವಲು, ದ್ವೀಪದ ಮುಖಾಂತರ ಗುಂಬಜ್ ತಲುಪುತ್ತದೆ.

### ಕೃಷ್ಣರಾಜಸಾಗರ ನೀರಾವರಿ ಯೋಜನೆ

ಕಾವೇರಿ ನದಿಗೆ ಅಡ್ಡಕಟ್ಟೆಯನ್ನು ಕಟ್ಟಿ ನೀರನ್ನು ನೀರಾವರಿಗಾಗಿ ಬಳಸುವ ಪ್ರಯತ್ನಗಳು ಹಿಂದಿನಿಂದಲೂ ನಡೆದಿವೆ. ಶ್ರೀರಂಗಪಟ್ಟಣ ತಾಲೂಕಿನ ರಾಂಪುರದ ೯೦೫ ರ ಶಾಸನದಿಂದ, ಗಂಗ ಅರಸ ಇಮ್ಮಡಿ ರಾಚಮಲ್ಲನ ಆಳ್ವಿಕೆಯ ಅವಧಿಯಲ್ಲಿ, ತಲೆನೆರೆ ಎಂಬ ಸ್ಥಳದಲ್ಲಿ ಕಾವೇರಿ ನದಿಗೆ ಅಣೆಕಟ್ಟೆಯನ್ನು ನಿರ್ಮಿಸಬೇಕೆಂಬ, ಜೈನಮುನಿ ಮತಿಸಾಗರ ಪಂಡಿತದೇವಭಟ್ಟಾರರ ಕೋರಿಕೆಯಂತೆ ಈ ದಾನವನ್ನು ಪೆರ್ಬಾಣ ಹಳ್ಳಿಯ ಕೇಸಿಗನೆಂಬ ಅಧಿಕಾರಿಗೆ ಅದೇ ಉದ್ದೇಶಕ್ಕಾಗಿ ನೀಡಿದ ಅಂಶ ವೇದ್ಯವಾಗುತ್ತದೆ. ಹದಿನಾಲ್ಕನೆಯ ಶತಮಾನದಲ್ಲಿ ನಾಗಮಂಗಲದಿಂದ ಆಳುತ್ತಿದ್ದ ನಾಗಮಂಗಲದ ಪ್ರಭು ತಿಮ್ಮಣ್ಣ ದಂಡನಾಯಕನ ಸೋದರನಾದ ದೇವರಾಜ ಅರಸನು ಕನ್ನಂಬಾಡಿಯ ಬಳಿ ಒಂದು ಕಟ್ಟೆಯನ್ನು ಕಟ್ಟಿಸಿದ್ದನು. ಹರವು, ತೊಂಡನೂರು ಮಾರ್ಗವಾಗಿ ನಾಗಮಂಗಲ ಪ್ರದೇಶಕ್ಕೆ ನೀರೊಯ್ಯುವುದು ಆತನ ಯೋಜನೆಯಾಗಿತ್ತು. ಕಟ್ಟೆಯ ಕೆಲಸದ ಪ್ರಗತಿಯೊಂದಿಗೆ ತೊಂಡನೂರಿನವರೆಗೆ ಕಾಲುವೆಯ ಕೆಲಸವೂ ಪೂರ್ಣಗೊಂಡಿದ್ದಿತು. ಈ ಯೋಜನೆಯ ಅಂಗವಾಗಿಯೇ ಪಾಂಡವಪುರ ತಾಲೂಕಿನ ಸೀತಾಪುರವನ್ನು ತನ್ನ ತಾಯಿಯ ಹೆಸರಿನಲ್ಲಿ ನಿರ್ಮಿಸಿ ಕನ್ನಂಬಾಡಿಯ ತನ್ನ ಯೋಜನೆಯ ವಿವರಗಳನ್ನು ಶಾಸನದಲ್ಲಿ ದಾಖಲಿಸಿದ್ದಾನೆ. ಎರಡನೆಯದಾಗಿ ಕನ್ನಂಬಾಡಿಯ ಬಳಿ ಅಣೆಕಟ್ಟು ಕಟ್ಟಿಸಿ ವ್ಯವಸಾಯಕ್ಕೆ ನೀರೊದಗಿಸಲು ಮೈಸೂರಿನ ಅರಸ ರಣಧೀರ ಕಂಠೀರವ ನರಸರಾಜರ ಪತ್ನಿ ದೊಡ್ಡಮ್ಮ ಎಂಬುವಳು ತನ್ನಲ್ಲಿದ್ದ

ಅಪಾರ ಚಿನ್ನವನ್ನು ಈ ಯೋಜನೆಗೆ ಕಾಣಿಕೆಯಾಗಿ ನೀಡಿದಳೆಂದು ಪ್ರತೀತಿ. ಈಗಲೂ ಶ್ರೀರಂಗಪಟ್ಟಣದ ಒಂದು ನಾಲೆ ಆಕೆಯ ನೆನಪಿಗಾಗಿ ಬಂಗಾರದೊಡ್ಡಿನಾಲೆ ಎಂದು ಕರೆಯಲ್ಪಡುತ್ತಿದೆ. ಮೈಸೂರಿನ ಇನ್ನೊಬ್ಬ ಅರಸ ಚಿಕ್ಕದೇವರಾಜರು ಈ ಸ್ಥಳದಲ್ಲಿ ದೊಡ್ಡ ಅಣೆಕಟ್ಟು ಕಟ್ಟಿಸಿ ವ್ಯವಸಾಯಾಭಿವೃದ್ಧಿ ಮಾಡಿದ ದಾಖಲೆಗಳು ದೊರೆಯುತ್ತವೆ. ಆದರೆ ವಿಪರೀತ ಮಳೆಯಿಂದಾಗಿ ಕಾವೇರಿಯಲ್ಲಿ ಹಿಂದೆಂದೂ ಕಾಣದ ಪ್ರವಾಹ ಬಂದು ಕಟ್ಟೆ ತಾನಾಗಿಯೇ ಒಡೆಯಿತೆಂದು ತಿಳಿದುಬರುತ್ತದೆ. ನೀರಾವರಿಗಾಗಿ ಕಾವೇರಿಯ ನೀರನ್ನು ಬಳಸುವ ರೂಢಿಯನ್ನು ನಂತರದಲ್ಲಿ ಟಿಪ್ಪು ಮತ್ತು ನಾಲ್ವಡಿ ಕೃಷ್ಣರಾಜ ಒಡೆಯರು ಮುಂದುವರಿಸಿದರು. ಕಾವೇರಿಗೆ ಕನ್ನಂಬಾಡಿ ಅಣೆಕಟ್ಟೆ ನಿರ್ಮಿಸುವ ಯೋಜನೆಯನ್ನು ಟಿಪ್ಪು ಹೊಂದಿದ್ದ ಅಂಶವನ್ನು, ಅವನ ಕಾಲಕ್ಕೆ ಸೇರಿದ ಕನ್ನಂಬಾಡಿಯ ಪರ್ಷಿಯನ್ ಶಾಸನ ತಿಳಿಸುತ್ತದೆ.

೧೯೦೨ರಲ್ಲಿ ಮಳವಳ್ಳಿ ತಾಲೂಕಿನ ಶಿವಸಮುದ್ರದಲ್ಲಿ ಜಲವಿದ್ಯುತ್ ಉತ್ಪಾದನಾ ಕೇಂದ್ರವು ಸ್ಥಾಪನೆಗೊಂಡಿತು. ಈ ಕೇಂದ್ರ ಕಾರ್ಯಾರಂಭ ಮಾಡಿದಾಗ ಅದರ ಉತ್ಪಾದನಾ ಸಾಮರ್ಥ್ಯ ೪,೩೦೦ ಕಿ.ವ್ಯಾಟ್‌ಗಳಾಗಿತ್ತು. ಉತ್ಪಾದಿತ ವಿದ್ಯುತ್ ಶಕ್ತಿಯನ್ನು ಆರಂಭದಲ್ಲಿ ಕೋಲಾರದ ಚಿನ್ನದ ಗಣಿಗೆ, ಬೆಂಗಳೂರು ಮತ್ತು ಮೈಸೂರು ನಗರಗಳಿಗೆ ಬಳಸಲಾಗುತ್ತಿತ್ತು. ಕಾವೇರಿ ನದಿಯ ನೀರು ಬೇಸಿಗೆಯಲ್ಲಿ ಕಡಿಮೆಯಾದಾಗ ವಿದ್ಯುತ್ ಉತ್ಪಾದನೆಗೆ ತೊಂದರೆಯಾಗುತ್ತಿತ್ತು. ಅಂತಹ ಸಂದರ್ಭದಲ್ಲಿ ನೀರನ್ನು ಒಂದು ಕಡೆ ಶೇಖರಿಸಿಟ್ಟುಕೊಂಡು ಬೇಸಿಗೆಯಲ್ಲಿ ನಿಗದಿತ ಪ್ರಮಾಣದ ನೀರನ್ನು ಶಿವಸಮುದ್ರಕ್ಕೆ ಸರಬರಾಜು ಮಾಡಿ ವಿದ್ಯುತ್ ಬೇಡಿಕೆಯನ್ನು ಪೂರೈಸಬೇಕಿತ್ತು. ಮುಂಬಯಿ ಸರ್ಕಾರದಲ್ಲಿ ಹಲವಾರು ವರ್ಷ ಕೆಲಸಮಾಡಿ ಹಲವು ಜಲಾಶಯಗಳ ನಿರ್ಮಾಣದಲ್ಲಿ ಪ್ರಮುಖ ಪಾತ್ರ ನಿರ್ವಹಿಸಿ ಅಪಾರ ಅನುಭವ ಹೊಂದಿದ್ದ ಸರ್. ಎಂ.ವಿಶ್ವೇಶ್ವರಯ್ಯನವರು ವಿದ್ಯುತ್ ಉತ್ಪಾದನೆಯ ಜೊತೆಗೆ ನೀರಾವರಿ ಸೌಲಭ್ಯವನ್ನು ವಿಸ್ತರಿಸುವ ಯೋಜನೆಯ ಬಗ್ಗೆ ೧೯೧೧ರ ಮೇ ೧೫ ರಂದು ಸರ್ಕಾರಕ್ಕೆ ಒಂದು ವರದಿಯನ್ನು ಸಲ್ಲಿಸಿದರು. ೧೯೧೧ರಲ್ಲಿ ಅಣೆಕಟ್ಟು ನಿರ್ಮಾಣ ಮಾಡುವ ಸ್ಥಳದ ಬಗೆಗೆ ವಿಶೇಷ ಪರಿಶೀಲನೆ ನಡೆಯಿತು. ಶ್ರೀರಂಗಪಟ್ಟಣಕ್ಕೆ ಸುಮಾರು ೧೪.೫ ಕಿ.ಮೀ. ಹಾಗೂ ಮೈಸೂರಿಗೆ ೧೯ ಕಿ.ಮೀ. ದೂರದ ಕನ್ನಂಬಾಡಿ ಎಂಬ ಗ್ರಾಮದ ಬಳಿ ಕಾವೇರಿ ನದಿಗೆ ಅಡ್ಡಲಾಗಿ ಕಲ್ಲುಗಾರೆಯ ಕಟ್ಟೆಕಟ್ಟಿ ಜಲಾಶಯ ನಿರ್ಮಿಸಲು ನಿಶ್ಚಯಿಸಲಾಯಿತು. ಕೃಷ್ಣರಾಜ ಒಡೆಯರು ಈ ಯೋಜನೆಗೆ ತಮ್ಮ ಒಪ್ಪಿಗೆಯನ್ನು ಸೂಚಿಸಿ ೧೯೧೧ರ ಅಕ್ಟೋಬರ್ ೧೨ರಲ್ಲಿ ಆದೇಶ ಹೊರಡಿಸಿದರು. ಪ್ರಥಮ ಹಂತದಲ್ಲಿ ಈ ಯೋಜನೆಗೆ ೮೦ ಲಕ್ಷ ರೂಪಾಯಿಗಳನ್ನು ನಿಗದಿಪಡಿಸಿ ಅಣೆಕಟ್ಟಿನ ನಿರ್ಮಾಣಕ್ಕೆ ಒಪ್ಪಿಗೆ ನೀಡಲಾಯಿತು. ೯೭ ಅಡಿ ಎತ್ತರದ ಏರಿಯನ್ನು ನಿರ್ಮಾಣ ಮಾಡಿ ೮೦ ಅಡಿ ಆಳದ ನೀರನ್ನು ಶೇಖರಿಸಬೇಕೆಂಬ ಉದ್ದೇಶ ಮೊದಲಿಗೆ ಇದ್ದಿತು. ಮೊದಲ ಹಂತದ ಯೋಜನೆ ೯೧ ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಆರಂಭವಾಯಿತು.

ಜಲಾಶಯದ ತಳಪಾಯವನ್ನು ೧೧೧ ಅಡಿ ಅಗಲವಾಗಿ ತೋಡಲಾಯಿತು. ನದಿಯ ತಳದಲ್ಲಿ ಅಸ್ತಿಭಾರ ಹಾಕುವ ಕಠಿಣ ಕಾರ್ಯವನ್ನು ಯಶಸ್ವಿಯಾಗಿ ಮುಗಿಸಲಾಯಿತು. ದಕ್ಷಿಣ ಭಾಗದಲ್ಲಿ ೬೦ ಅಡಿ, ಉತ್ತರದಲ್ಲಿ ೩೬ ಅಡಿ ಎತ್ತರದ ಗೋಡೆ ನಿರ್ಮಾಣವಾಗಿ ಮಧ್ಯದ ಖಾಲಿ ಸ್ಥಳದಲ್ಲಿ ಸುಮಾರು ೮ ಅಡಿ ನೀರು ನಿಂತಿತು. ಈ ಕಟ್ಟೆಯ ನಿರ್ಮಾಣಕ್ಕೆ ಬಳಸಲಾಗಿರುವ ನಿರ್ದಿಷ್ಟ ಆಕಾರವಿಲ್ಲದ ಕಲ್ಲು ಮತ್ತು ಗ್ರಾನೈಟ್ ಶಿಲೆಗಳು ಕಟ್ಟೆಯ ಆಸುಪಾಸಿನ ಏಳು ಕಿ.ಮೀ ಫಾಸಲೆಯ ಗುಡ್ಡಗಳಲ್ಲಿ ದೊರೆಯುತ್ತಿದ್ದು, ಗುಡ್ಡಗಳ ಮೇಲಿನಿಂದ ಕಲ್ಲನ್ನು ಸಾಗಿಸಲು ಟ್ರಾಲಿಗಳನ್ನೂ ಬಳಸಲಾಯಿತು. ಅಣೆಕಟ್ಟೆಯ ನಿರ್ಮಾಣದ ಅಂತಿಮ ಹಂತದಲ್ಲಿ ಸುಮಾರು ೧೦ ಸಾವಿರ ಮಂದಿ ಕೆಲಸ ಮಾಡಿದರೆಂದು ತಿಳಿದುಬರುತ್ತದೆ.

೧೯೧೫ರಲ್ಲಿ ಅಣೆಕಟ್ಟೆಯ ಎತ್ತರ ೬೫ ಅಡಿಗಳಾಯಿತು. ಸ್ವಯಂಚಾಲಿತ ಬಾಗಿಲುಗಳ ಸಹಾಯದಿಂದ ಅಗತ್ಯಕ್ಕೆ ತಕ್ಕಂತೆ ನೀರು ಹೊರಬಿಡುವ ಯೋಜನೆ ರೂಪಿತವಾಯಿತು. ೧೯೧೫ರ ಜೂನ್ ತಿಂಗಳಲ್ಲಿ ೫೦ ಅಡಿ

ನೀರನ್ನು ಶೇಖರಿಸಲಾಯಿತು. ಈ ಹಂತದವರೆಗೆ ತಗುಲಿದ ವೆಚ್ಚ ೭೧.೪೫ ಲಕ್ಷ ರೂ.ಗಳು. ೧೯೧೬ರ ವೇಳೆಗೆ ಒಟ್ಟು ೯೨.೩೯ ಲಕ್ಷ ರೂ.ಗಳ ವೆಚ್ಚವಾಗಿದ್ದಿತು. ಈ ವೇಳೆಗೆ ದಿವಾನರಾಗಿದ್ದ ವಿಶ್ವೇಶ್ವರಯ್ಯನವರು ಕಾರಣಾಂತರದಿಂದ ತಮ್ಮ ಪದವಿಗೆ ರಾಜಿನಾಮೆ ನೀಡಿದರು. ನಂತರ ದಿವಾನರಾಗಿ ಬಂದ ಕಾಂತರಾಜೇ ಅರಸ್, ಆಲ್ಬಿಯನ್ ಬ್ಯಾನರ್ಜಿ, ಮಿರ್ಜಾ ಇಸ್ಮಾಯಿಲ್ ಮೊದಲಾದವರು ಈ ಕಾರ್ಯದಲ್ಲಿ ಆಸಕ್ತಿವಹಿಸಿದರು. ೧೯೧೯ರ ವೇಳೆಗೆ ಅಣೆಕಟ್ಟೆಯ ಎತ್ತರ ೧೦೭ ಅಡಿ ತಲುಪಿತು. ಈ ಹಂತದವರೆಗೆ ಒಟ್ಟು ೧೫೫ ಲಕ್ಷ ರೂ.ಗಳಿಗೂ ಮಿಗಿಲಾಗಿ ಹಣ ಖರ್ಚಾಯಿತು. ಕಾವೇರಿಯ ಜಲ ವಿವಾದಕ್ಕೆ ಸಂಬಂಧಿಸಿದ ಹಾಗೆ ಗ್ರಿಫಿನ್ ಸಮಿತಿಯಲ್ಲಿ ತೀರ್ಮಾನವಾದ ನಿಯಮ ನಿಬಂಧನೆಗಳನ್ನು ಜಾರಿಗೊಳಿಸಲು ಲೋಕೋಪಯೋಗಿ ಇಲಾಖೆಯ ಒಂದು ಕಚೇರಿಯೂ ಅಲ್ಲಿ ಆರಂಭವಾಯಿತು. ಕಾವೇರಿ ಯೋಜನೆಗೆ ಸಂಬಂಧಿಸಿದಂತೆ ಮುಖ್ಯ ಇಂಜಿನಿಯರ್ ಒಬ್ಬರು ನೇಮಕವಾದರು. ೧೯೨೧ರ ವೇಳೆಗೆ ಪ್ರಥಮ ಹಂತದ ಯೋಜನೆ ಪೂರ್ಣವಾಗಿ ವ್ಯವಸ್ಥಿತ ರೀತಿಯಲ್ಲಿ ಕೃಷಿಗೆ ನೀರನ್ನು ಸರಬರಾಜು ಮಾಡಲಾಯಿತು.

ಜಲಾಶಯದ ಮುಂದಿನ ನಿರ್ಮಾಣಕ್ಕೆ ಸಂಬಂಧಿಸಿದಂತೆ ೧೯೨೨ರಲ್ಲಿ ಒಂದು ವಿಶೇಷ ಸಮಿತಿಯ ನೇಮಕವಾಯಿತು. ಈ ಯೋಜನೆಗೆ ೧೯೨೩ರವರೆಗೆ ತಗುಲಿದ ಒಟ್ಟು ವೆಚ್ಚ ರೂ.೨೧೧ ಲಕ್ಷ ಆಗಿದ್ದು ಮತ್ತೆ ಅಧಿಕವಾಗಿ ೧೪.೬೬ ಲಕ್ಷ ರೂ.ಗಳನ್ನು ಒದಗಿಸಲಾಯಿತು. ಏರಿ ನಿರ್ಮಾಣದ ಜೊತೆಗೆ ಕಾಲುವೆ ನಿರ್ಮಾಣದ ಕಾರ್ಯವೂ ೧೯೨೪ರಲ್ಲಿ ಆರಂಭವಾಯಿತು. ಆ ವೇಳೆಗೆ ೨೨೭.೯ ಲಕ್ಷ ರೂ.ಗಳು ವೆಚ್ಚವಾಗಿದ್ದಿತು. ೧೯೨೬ರಲ್ಲಿ ಮತ್ತೆ ೧೦.೦೫ ಲಕ್ಷ ರೂ.ಗಳನ್ನು ಅಧಿಕವಾಗಿ ಬಿಡುಗಡೆ ಮಾಡಲಾಯಿತು. ಅಣೆಕಟ್ಟಿನ ಉತ್ತರ ಭಾಗದಲ್ಲಿ ಕಾಲುವೆಗಳನ್ನು ತೋಡುವ ಕಾರ್ಯ ಆರಂಭವಾಯಿತು. ೧೯೧೧ ರಲ್ಲಿ ಪ್ರಾರಂಭಗೊಂಡ ಅಣೆಕಟ್ಟು ನಿರ್ಮಾಣದ ಕೆಲಸ ೧೯೩೨ರಲ್ಲಿ ಪೂರ್ಣಗೊಂಡಿತು. ಹಳೆಯ ಮೈಸೂರು ರಾಜ್ಯದಲ್ಲಿನ ಆಗಿನ ಏಕೈಕ ಬೃಹತ್ ನೀರಾವಾರಿ ಯೋಜನೆ ಇದಾಗಿತ್ತು.

ಜಲಾಶಯದಲ್ಲಿ ಒಟ್ಟು ೪೮,೩೩೫ ಮಿಲಿಯನ್ ಘನ ಅಡಿ(ಕ್ಯೂಬಿಕ್ ಫೀಟ್) ನೀರನ್ನು ಶೇಖರಿಸಿಡಬಹುದು. ಜಲಾಶಯದ ಒಟ್ಟು ಜಲಾನಯನ ಭೂಮಿ ೧೦,೬೧೯ ಚ.ಕಿ.ಮೀ. ನದಿಯ ತಳ ಸಮುದ್ರ ಮಟ್ಟದಿಂದ ೨,೩೪೪ ಅಡಿ ಎತ್ತರದಲ್ಲಿದೆ. ಕಟ್ಟೆಯನ್ನು ಗ್ರಾನೈಟ್ ನೈಸ್ ಬಂಡೆಯ ತಳಪಾಯದ ಮೇಲೆ ನಿರ್ಮಿಸಲಾಗಿದೆ. ಕಟ್ಟೆಯ ಎತ್ತರ ಅಸ್ತಿಭಾರದಿಂದ ೧೪೦ ಅಡಿಗಳು. ಅಣೆಕಟ್ಟೆಯ ಮೇಲ್ಭಾಗದಲ್ಲಿ ೧೪.೫ ಅಡಿ ಅಗಲದ ರಸ್ತೆ ಇದೆ. ಕಟ್ಟೆಯು ಮೇಲಿನಿಂದ ಕೆಳಕ್ಕೆ ಇಳಿಜಾರಾಗಿದೆ. ಇದರ ಉದ್ದ ೮,೬೦೦ ಅಡಿಗಳು. ಜಲಾಶಯದ ನೀರು ೫೦ ಚದುರ ಮೈಲಿಯಷ್ಟು ಹರಡಿರುತ್ತದೆ. ಸರೋವರದ ಸರಾಸರಿ ಉದ್ದ ೨೫ ಮೈಲಿಗಳು, ಅಗಲ ಐದು ಮೈಲಿಗಳು. ಅಣೆಕಟ್ಟೆಯ ಉದ್ದಕ್ಕೂ ಬಗೆಬಗೆಯ ಗಾತ್ರದ ೧೭೧ ಕಬ್ಬಿಣದ ಬಾಗಿಲುಗಳನ್ನು ವಿವಿಧ ಎತ್ತರಗಳಲ್ಲಿ ಸ್ಥಾಪಿಸಲಾಗಿದೆ. ಅವುಗಳಲ್ಲಿ ೧೩೬ ಸ್ವಯಂ ಚಾಲಿತ ಬಾಗಿಲುಗಳು. ಅಂದಿನ ದಿನಗಳಲ್ಲಿ ಈ ಯೋಜನೆಗೆ ತಗುಲಿದ ಒಟ್ಟು ವೆಚ್ಚ ೩೨೩.೪೭ ಲಕ್ಷ ರೂ.ಗಳು ೧೯೩೯ರಲ್ಲಿ ೪೮ ಸಾವಿರ ಎಕರೆ ಪ್ರದೇಶಕ್ಕೆ ಈ ಯೋಜನೆಯಿಂದ ನೀರಾವರಿ ಸೌಲಭ್ಯ ಒದಗಿಸಲಾಗಿತ್ತು. ೧೯೪೦ರ ವೇಳೆಗೆ ಸುಮಾರು ೭೦,೨೩೦ ಎಕರೆ ಪ್ರದೇಶವನ್ನು ನೀರಾವರಿಗೆ ಒಳಪಡಿಸಲಾಯಿತು.

ಈ ಜಲಾಶಯದ ನಿರ್ಮಾಣದಿಂದ ೯,೫೨೦ ಎಕರೆ ತರಿ ಭೂಮಿ ಮತ್ತು ೧೩,೯೨೩ ಎಕರೆ ಖುಷ್ಕಿ ಭೂಮಿಯು ಮುಳುಗಡೆಯಾಗಿದ್ದು ೨೫ ಗ್ರಾಮಗಳ ಸುಮಾರು ೧೫,೦೦೦ ಜನರಿಗೆ ಪುನರ್ವಸತಿಯನ್ನು ಕಲ್ಪಿಸಲಾಗಿದೆ.

## ಕಾಲುವೆಗಳು

ಪ್ರಾರಂಭದಲ್ಲಿ ಅಣೆಕಟ್ಟೆಯ ತಳಭಾಗದ ೬೦ ಅಡಿ ಎತ್ತರದಿಂದ ಕಾಲುವೆಯ ಮುಖಾಂತರ ಕೃಷಿಗೆ ನೀರನ್ನು ಒದಗಿಸಲು ಯೋಜಿಸಲಾಗಿತ್ತು. ಜಲಾಶಯದಿಂದ ೨೫ ಮೈಲಿಗಳ ದೂರದಲ್ಲಿ ಇರುವ ಹುಲಿಕೆರೆ ಗುಡ್ಡವನ್ನು ಕಾಲುವೆಯು ಹಾದುಹೋಗಬೇಕಾಗಿತ್ತು. ಇದಕ್ಕಾಗಿ ಹುಲಿಕೆರೆ ಗುಡ್ಡದಲ್ಲಿ ಸುಮಾರು ಒಂದೂವರೆ ಮೈಲಿ ದೂರದ ಸುರಂಗವನ್ನು ಕೊರೆದು ನಾಲೆಯನ್ನು ಸುಮಾರು ೫೦ ರಿಂದ ೭೦ ಕಿ.ಮೀ ದೂರದವರೆಗೂ ಕೊಂಡೊಯ್ಯಲು ಯೋಜಿಸಲಾಗಿತ್ತು.

ಕಾವೇರಿ ಜಲಾಶಯ ಯೋಜನೆಯ ಪ್ರಥಮ ಹಂತದಲ್ಲಿ ಹೊಸ ನಾಲಾ ನಿರ್ಮಾಣ ಕಾರ್ಯ ಕೈಗೊಳ್ಳಲ್ಪಡಲಿಲ್ಲ. ಜಲಾಶಯದಲ್ಲಿ ಸಂಗ್ರಹಗೊಂಡ ನೀರನ್ನು ನಿರಂತರ ವಿದ್ಯುಚ್ಛಕ್ತಿ ಉತ್ಪಾದನೆಗಾಗಿ ಶಿವಸಮುದ್ರ ವಿದ್ಯುತ್ ಉತ್ಪಾದನಾ ಕೇಂದ್ರಕ್ಕೆ ಒದಗಿಸಲಾಯಿತು. ನದಿಯ ಉತ್ತರದಂಡೆಯ ಚಿಕ್ಕದೇವರಾಯಸಾಗರ ನಾಲೆಯನ್ನು ವಿಸ್ತರಿಸಿ ನೀರಾವರಿ ಸೌಲಭ್ಯವನ್ನು ೨೫,೦೦೦ ಎಕರೆಗಳಿಂದ ೩೦,೦೦೦ ಎಕರೆಗಳಿಗೆ ಏರಿಸಲಾಯಿತು. ಎರಡನೇ ಹಂತದಲ್ಲಿ ಉತ್ತರದಂಡೆಯ ನಾಲಾ ಕೆಲಸವನ್ನು ೪೮ ನೇ ಮೈಲಿಯವರೆಗೆ ಪೂರ್ಣಗೊಳಿಸಲಾಯಿತು. ಶಿಂಷಾ ನದಿಗೆ ಸೇರುವ ಬಿಂಡೇನಹಳ್ಳಿ ಹೊಳೆಯಲ್ಲಿ ಈ ಕಾಲುವೆಯು ಕೊನೆಗೊಂಡಿತು. ನಾಲೆಯು ಪ್ರಾರಂಭದಲ್ಲಿ ೧೦ ರಿಂದ ೧೨ ಅಡಿ ಆಳವಾಗಿದ್ದು ಕೊನೆಕೊನೆಗೆ ಐದರಿಂದ ಆರು ಅಡಿ ಆಳವನ್ನು ಹೊಂದಿದೆ. ನಾಲೆಯ ಅಗಲ ೪೩ ರಿಂದ ೮೬ ಅಡಿಗಳಾಗಿದೆ. ಕೃಷ್ಣರಾಜಸಾಗರ ಅಣೆಕಟ್ಟೆಯ ೬೦ ಅಡಿ ಎತ್ತರದಿಂದ ಈ ನಾಲೆಗೆ ನೀರನ್ನು ಬಿಡುತ್ತಿದ್ದು ಈ ನಾಲೆಯು ೨೨,೦೦೦ ಕ್ಯೂಸೆಕ್ ನೀರಿನ ಒತ್ತಡವನ್ನು ತಡೆಯುವ ಸಾಮರ್ಥ್ಯ ಹೊಂದಿದೆ. ಈ ನಾಲೆಯು ಮೊದಲು ೨೬ ಮೈಲಿ ಉದ್ದ ಬಯಲು ಪ್ರದೇಶದಲ್ಲಿ, ನಂತರ ಹುಲಿಕೆರೆ ಸುರಂಗದ ಮೂಲಕ (೯,೨೦೦ ಅಡಿ ಉದ್ದ) ಸಾಗಿ, ಸುಮಾರು ೧,೨೦,೦೦೦ ಎಕರೆ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಒದಗಿಸುತ್ತದೆ. ಈ ನಾಲೆಯ ಕವಲು ನಾಲೆ ಮತ್ತು ಉಪನಾಲೆಗಳ ಒಟ್ಟು ಉದ್ದ ಸುಮಾರು ೧೮೦ ಮೈಲಿಗಳಾಗಿದೆ. ಹುಲಿಕೆರೆ ಸುರಂಗದ ಮೂಲಕ ಸಾಗಿದ ನಂತರ ಈ ನಾಲೆಯು ಮದ್ದೂರು ಮತ್ತು ಕಾವೇರಿ ಕವಲು ನಾಲೆಗಳಾಗಿ ಸಾಗುತ್ತದೆ.

ಕೃಷ್ಣರಾಜಸಾಗರ ನೀರಾವರಿ ಯೋಜನೆಯಡಿ ನೀರಾವರಿ ಸೌಲಭ್ಯ ಪಡೆದ ತಾಲೂಕುವಾರು ಭೂ ಪ್ರದೇಶದ ವಿವರ (ಹೆಕ್ಟೇರುಗಳಲ್ಲಿ) ಮದ್ದೂರು–೨೩,೬೦೦; ಮಳವಳ್ಳಿ–೧೮,೩೮೦; ಮಂಡ್ಯ–೨೫,೦೦೦; ನಾಗಮಂಗಲ–೪೮೬; ಪಾಂಡವಪುರ–೩,೮೬೧ ಮತ್ತು ಶ್ರೀರಂಗಪಟ್ಟಣ–೨,೦೮೨. ಒಟ್ಟು ಮಂಡ್ಯ ಜಿಲ್ಲೆ – ೭೩,೪೦೯.

ಕೃಷ್ಣರಾಜಸಾಗರ ಅಣೆಕಟ್ಟೆಯ ಬಳಿ ನದಿಯ ಎರಡೂ ಬದಿ ವಿಶ್ವವಿಖ್ಯಾತ ಬೃಂದಾವನ ಉದ್ಯಾನವನವನ್ನು ನಿರ್ಮಿಸಲಾಗಿದೆ. ಸಮೀಪದಲ್ಲಿ ತೋಟಗಾರಿಕಾ ಕ್ಷೇತ್ರವೂ ಇದೆ. (ವಿವರಗಳಿಗೆ ಪ್ರೇಕ್ಷಣೀಯ ಸ್ಥಳಗಳು– ಅಧ್ಯಾಯವನ್ನು ನೋಡಿ).

## ಡಿ ದೇವರಾಜ ಅರಸ್ (ಕೆ.ಆರ್.ಎಸ್.ಬಲದಂಡೆ) ಕಾಲುವೆ

ಕೃಷ್ಣರಾಜಸಾಗರದಿಂದ ಬಲದಂಡೆ ಮೇಲ್ಮಟ್ಟದ ನಾಲೆಯನ್ನು ನಿರ್ಮಿಸಿ ಮೈಸೂರು ಮತ್ತು ಮಂಡ್ಯ ಜಿಲ್ಲೆಗಳಲ್ಲಿ ೩೨,೩೭೫ ಹೆಕ್ಟೇರು ಜಮೀನಿಗೆ ನೀರಾವರಿ ಸೌಲಭ್ಯ ಕಲ್ಪಿಸಲು ಯೋಜಿಸಲಾಗಿದೆ. ಈ ನಾಲೆಯ ಉದ್ದ ೧೩೫ ಕಿಲೋಮೀಟರುಗಳು, ಈ ನಾಲೆಯು ಮೈಸೂರು–ಬೆಂಗಳೂರು ರಾಜ್ಯ ಹೆದ್ದಾರಿಯನ್ನು ದಾಟುವ ಅಕ್ವಿಡೆಕ್ಟ್ (ಮೇಲ್ಗಾಲುವೆ) ಕೆಲಸ ಪೂರ್ಣಗೊಂಡಿದ್ದು, ನೀರನ್ನು ನಿಗದಿತ ಪ್ರಮಾಣದಲ್ಲಿ ನಿಯಮಾನುಸಾರ ಬಿಡಲಾಗುತ್ತಿದೆ. ಈ ಯೋಜನೆಯಡಿ ಶ್ರೀರಂಗಪಟ್ಟಣ ತಾಲೂಕಿನ ೩,೦೫೫ ಹೆ. ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲಾಗಿದೆ.

### ಕೃಷ್ಣರಾಜಸಾಗರ ಆಧುನೀಕರಣ

ಕೃಷ್ಣರಾಜಸಾಗರದ ಆಧುನೀಕರಣ ಯೋಜನೆಯಡಿ ವಿಶ್ವೇಶ್ವರಯ್ಯ ನಾಲಾ ಕಮ್ಯಾಂಡಿನಲ್ಲಿ ನೀರಿನ ಕೊರತೆ ಇರುವ ಅಚ್ಚುಕಟ್ಟುಗಳಿಗೆ ನೀರೊದಗಿಸಲು ಹಾಗೂ ಹೆಚ್ಚುವರಿ ನೀರಾವರಿ ಮಾಡಲು ಉದ್ದೇಶಿಸಿರುವ ೨,೧೨೫ ಹೆಕ್ಟೇರು ಜಮೀನಿಗೆ ನೀರೊದಗಿಸಲು ವಿ.ಸಿ.ನಾಲೆಯಲ್ಲಿ ೨,೨೫೦ ಕ್ಯೂಸೆಕ್‌ನಿಂದ ೩,೦೫೦ ಕ್ಯೂಸೆಕ್ ನೀರನ್ನು ಕಾಲುವೆಯಲ್ಲಿ ಬಿಡಲು ಅದರ ಸಾಮರ್ಥ್ಯವನ್ನು ಹೆಚ್ಚಿಸಬೇಕಾಗಿರುವ ಕೆಲಸವನ್ನು ಒಳಗೊಂಡಿದೆ. ವಿಶ್ವೇಶ್ವರಯ್ಯ ನಾಲೆಯ ೩೭ನೇ ಕಿಲೋಮೀಟರುಗಳವರೆಗೆ ಎಂಟು ಅಡ್ಡಮೋರಿ ಕೆಲಸಗಳು ಪೂರ್ಣಗೊಂಡಿದ್ದು ನಾಲೆಯಲ್ಲಿ ಹೆಚ್ಚುವರಿ ನೀರನ್ನು ತೆಗೆದುಕೊಳ್ಳುವ ಸಾಮರ್ಥ್ಯ ಹೊಂದಿರುತ್ತದೆ. ಲಿಂಕ್ ನಾಲೆಯ ಕೆಲಸವು ಬಹುತೇಕ ಮುಗಿದಿದ್ದು ಲಿಂಕ್ ನಾಲೆಯಲ್ಲಿ ನೀರನ್ನು ಹರಿಸಬಹುದಾಗಿದೆ. ಈ ಯೋಜನೆಯಡಿ ಶ್ರೀರಂಗಪಟ್ಟಣ ತಾಲೂಕಿನ ೧,೨೬೬ ಹೆ. ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲಾಗಿದೆ.

### ಹೇಮಾವತಿ ಜಲಾಶಯ ಯೋಜನೆ

ಹಾಸನ ಜಿಲ್ಲೆಯ ಗೊರೂರು ಗ್ರಾಮದ ಬಳಿ ಹೇಮಾವತಿ ನದಿಗೆ ಅಡ್ಡಲಾಗಿ ಹೇಮಾವತಿ ಅಣೆಕಟ್ಟನ್ನು ನಿರ್ಮಿಸಲಾಗಿದೆ. ಈ ಜಲಾಶಯವು ೩೭.೧೦ ಟಿ.ಎಂ.ಸಿ ನೀರು ಸಂಗ್ರಹಣಾ ಸಾಮರ್ಥ್ಯ ಹೊಂದಿದ್ದು, ಒಟ್ಟು ೨,೮೩,೫೯೬ ಹೆಕ್ಟೇರು ಜಮೀನಿಗೆ ಹಾಸನ, ಮಂಡ್ಯ, ತುಮಕೂರು ಮತ್ತು ಮೈಸೂರು ಜಿಲ್ಲೆಗಳಲ್ಲಿ ನೀರಾವರಿಗೆ ಅವಕಾಶ ಕಲ್ಪಿಸುತ್ತದೆ. ಹೇಮಾವತಿ ಎಡದಂಡೆ ನಾಲೆಯ ಕಾಮಗಾರಿಗಳನ್ನು ಹೇಮಾವತಿ ನಾಲಾ ವಲಯ ತುಮಕೂರು ವಿಭಾಗದಡಿ ನಿರ್ವಹಿಸಲಾಗುತ್ತಿದೆ. ಹೇಮಾವತಿ ಎಡದಂಡೆ ನಾಲೆ ಮತ್ತು ಬಲದಂಡೆ ನಾಲೆಗಳ ಅಡಿಯಲ್ಲಿ ಬರುವ ಮಂಡ್ಯ ಜಿಲ್ಲೆಯ ಅಚ್ಚುಕಟ್ಟು ಪ್ರದೇಶದ ತಾಲೂಕುವಾರು ವಿವರಗಳು ಕೆಳಕಂಡಂತಿವೆ. (ಹೆಕ್ಟೇರುಗಳಲ್ಲಿ) ಮಂಡ್ಯ–೧೪,೧೬೫; ಕೃಷ್ಣರಾಜಪೇಟೆ–೧೮,೧೭೯; ಪಾಂಡವಪುರ–೧೯,೦೨೧ ಮತ್ತು ನಾಗಮಂಗಲ–೪೦,೮೭೫ ; ಒಟ್ಟು ಮಂಡ್ಯ ಜಿಲ್ಲೆ – ೯೨,೨೪೦.

### ಕಾವೇರಿ ಜಲವಿವಾದ

ಕೊಡಗು ಜಿಲ್ಲೆಯ ಪಶ್ಚಿಮ ಘಟ್ಟಗಳಲ್ಲಿ ಬ್ರಹ್ಮಗಿರಿ ಪರ್ವತ ಶ್ರೇಣಿಯ ಬ್ರಹ್ಮಗಿರಿಯಲ್ಲಿ ಸಮುದ್ರ ಮಟ್ಟದಿಂದ ೧,೩೪೧ ಮೀಟರುಗಳಷ್ಟು ಎತ್ತರದಲ್ಲಿರುವ 'ತಲಕಾವೇರಿ' ಕಾವೇರಿ ನದಿಯ ಉಗಮ ಸ್ಥಾನವಾಗಿದೆ. ಕಾವೇರಿಯು ಕರ್ನಾಟಕ, ತಮಿಳುನಾಡು, ಕೇರಳ ಮತ್ತು ಪುದುಚೇರಿ ರಾಜ್ಯಗಳ ಮೂಲಕ ಹರಿಯುವ ಒಂದು ಅಂತರರಾಜ್ಯ ನದಿಯಾಗಿದೆ. ಈ ನದಿಯ ಉದ್ದ ೮೦೨ ಕಿಲೋಮೀಟರುಗಳು. ಕರ್ನಾಟಕ ಮತ್ತು ತಮಿಳುನಾಡಿನ ಗಡಿಗೆ ಸೇರುವ ಮುನ್ನ ಕರ್ನಾಟಕದಲ್ಲಿ ಕಾವೇರಿ ನದಿಯು ೩೮೧ ಕಿಲೋಮೀಟರುಗಳಷ್ಟು ದೂರ ಹರಿಯುತ್ತದೆ. ಕರ್ನಾಟಕ ಮತ್ತು ತಮಿಳುನಾಡಿನ ಗಡಿಗುಂಟ ಈ ನದಿಯು ಸುಮಾರು ೬೪ ಕಿಲೋಮೀಟರ್ ದೂರ ಸಾಗುತ್ತದೆ. ಅದು ಕಾವೇರಿ ಪಟ್ಟಣದ ಬಳಿ ಬಂಗಾಳ ಕೊಲ್ಲಿಯನ್ನು ಸೇರುವ ಮುನ್ನ ತಮಿಳುನಾಡಿನಲ್ಲಿ ಸುಮಾರು ೩೫೭ ಕಿಲೋಮೀಟರುಗಳಷ್ಟು ದೂರ ಸಾಗುತ್ತದೆ.

ಕೊಡಗು ಜಿಲ್ಲೆಯ ಭಾಗಮಂಡಲದ ಸಂಗಮದ ಬಳಿ ಕಾವೇರಿಗೆ ಕನ್ನಿಕಾ ನದಿಯು ಬಂದು ಸೇರುತ್ತದೆ. ಕಡಿದಾದ ಇಳಿಜಾರು ಮತ್ತು ಬಂಡೆಗಳ ನಡುವೆ ಕೊಡಗು ಜಿಲ್ಲೆಯಲ್ಲಿ ಕಾವೇರಿ ಬಹು ರಭಸವಾಗಿ ಸುಮಾರು ೮೦ ಕಿಲೋಮೀಟರುಗಳಷ್ಟು ದೂರ ಹರಿಯುತ್ತದೆ. ಈ ನದಿಯ ಉಪನದಿಯಾದ ಹಾರಂಗಿಯು ಮೈಸೂರು–ಕೊಡಗು ಜಿಲ್ಲೆಗಳ ಗಡಿಯಲ್ಲಿ ಕೂಡಿಗೆ ಬಳಿ ಕಾವೇರಿಯನ್ನು ಕೂಡಿಕೊಳ್ಳುತ್ತದೆ. ಕೊಡಗು ಜಿಲ್ಲೆಯಲ್ಲಿ ಕಕ್ಕಬ್ಬೆ, ಕಡಮೂರು ಮತ್ತು ಕುಮ್ಮ ಹೊಳೆಗಳು ಕಾವೇರಿಯನ್ನು ಸೇರುತ್ತವೆ. ಕಾವೇರಿ ನದಿಯ ಉಪನದಿಗಳಾದ ಹೇಮಾವತಿ ಮತ್ತು ಲಕ್ಷ್ಮಣತೀರ್ಥ ನದಿಗಳು ಕ್ರಮವಾಗಿ ಕೃಷ್ಣರಾಜಸಾಗರ ಜಲಾಶಯದ ಎಡ ಮತ್ತು

ಬಲದಂಡೆಗಳಲ್ಲಿ ಜಲಾಶಯವನ್ನು ಸೇರುತ್ತವೆ. ಶ್ರೀರಂಗಪಟ್ಟಣದ ಅನತಿ ದೂರದಲ್ಲಿ ಕಾವೇರಿ ನದಿಯನ್ನು ಲೋಕಪಾವನಿಯು ಬಂದು ಕೂಡುತ್ತದೆ. ಕಬಿನಿಯು ಕೇರಳ ರಾಜ್ಯದಲ್ಲಿ ಉಗಮವಾಗಿ ತಿರುಮಕೂಡಲು ನರಸೀಪುರದ ನಂತರ ಸ್ವಲ್ಪ ದೂರದಲ್ಲಿ ಬಂದು ಕೂಡುತ್ತದೆ. ಶಿವಸಮುದ್ರದ ಎಡದಂಡೆಯ ಕೆಳಗೆ ಶಿಂಷಾ ಉಪನದಿಯು ಕಾವೇರಿಯನ್ನು ಕೂಡಿಕೊಳ್ಳುತ್ತದೆ. ಶಿವಸಮುದ್ರ ದ್ವೀಪದ ಬಳಿ ಕಾವೇರಿ ನದಿಯು ಎರಡು ಕವಲುಗಳಾಗಿ ಧುಮಿಕಿ ಗಗನಚುಕ್ಕಿ ಮತ್ತು ಭರಚುಕ್ಕಿ ಜಲಪಾತಗಳನ್ನು ನಿರ್ಮಿಸುತ್ತದೆ. ಈ ಜಲಪಾತದ ನಂತರ ಕಾವೇರಿಯ ಕವಲುಗಳು ಮತ್ತೆ ಸಂಧಿಸಿ ಹರಿಯುತ್ತವೆ. ಮೇಕೆದಾಟು ಪ್ರದೇಶಕ್ಕೆ ಬರುವ ಮುನ್ನ ಅರ್ಕಾವತಿ ನದಿಯು ಕಾವೇರಿ ನದಿಯನ್ನು ಸೇರುತ್ತದೆ. ನಂತರ ಕಾವೇರಿ ಬಲದಂಡೆಯಲ್ಲಿ ಉಡುತೊರೆ ಹಳ್ಳವು ಬಂದು ಸೇರುತ್ತದೆ.

ತಮಿಳುನಾಡಿಗೆ ಪ್ರವೇಶಿಸಿದ ನಂತರ ಕಾವೇರಿಯು ಸೇಲಂ ಮತ್ತು ಕೊಯಮತ್ತೂರು ಜಿಲ್ಲೆಗಳಲ್ಲಿ ಸಾಗಿ ಮೆಟ್ಟೂರು ಜಲಾಶಯವನ್ನು ಪ್ರವೇಶಿಸುತ್ತದೆ. ಮೆಟ್ಟೂರು ಜಲಾಶಯದಿಂದ ೪೫ ಕಿಲೋಮೀಟರುಗಳ ದೂರದಲ್ಲಿ ಭವಾನಿ ನದಿಯು ಬಲದಂಡೆಯಲ್ಲಿ ಸೇರುತ್ತದೆ. ಈ ನದಿಯು ತಿರುಚಿರಾಪಳ್ಳಿ ಜಿಲ್ಲೆಯನ್ನು ಪ್ರವೇಶಿಸುವ ಮುನ್ನ ನೊಯಿಲ್ ಮತ್ತು ಅಮರಾವತಿ ಉಪನದಿಗಳು ಬಂದು ಬಲದಂಡೆಯಲ್ಲಿ ಕೂಡಿಕೊಳ್ಳುತ್ತವೆ. ತಿರುಚಿರಾಪಳ್ಳಿಯ ನಂತರ ನದಿಯು ಎರಡು ಕವಲುಗಳಾಗಿ ಹರಿಯುತ್ತದೆ. ಉತ್ತರ ಕವಲಿನ ಭಾಗವನ್ನು ಕೊಲೆರೂನ್ ಎಂದೂ ದಕ್ಷಿಣ ಕವಲನ್ನು ಕಾವೇರಿ ಎಂದೂ ಕರೆಯಲಾಗುತ್ತದೆ. ನಂತರ ಎರಡೂ ಕವಲುಗಳು ಮತ್ತೆ ಒಗ್ಗೂಡುತ್ತವೆ. ಗ್ರ್ಯಾಂಡ್ ಅಣೆಕಟ್ಟಿನಿಂದ ಸ್ವಲ್ಪ ದೂರದಲ್ಲಿ ನದಿಯು ಮತ್ತೆ ಕವಲೊಡೆಯುತ್ತದೆ. ಈ ಕವಲುಗಳಲ್ಲಿ ಒಂದು ಕವಲನ್ನು ಕಾವೇರಿ ಎಂದೂ ಮತ್ತೊಂದು ಕವಲನ್ನು ವೆಣ್ಣಾರ್ ಎಂದೂ ಕರೆಯಲಾಗುತ್ತದೆ. ತನ್ನ ದಾರಿಯುದ್ದಕ್ಕೂ ಕಾವೇರಿ ಎಂಬ ಹೆಸರನ್ನುಳಿಸಿಕೊಂಡ ಶಾಖೆಯು ಕಾವೇರಿ ಪಟ್ಟಣದ ಬಳಿ ಬಂಗಾಳಕೊಲ್ಲಿಯನ್ನು ಸೇರುತ್ತದೆ. ಉತ್ತರ ಕವಲಾದ ಕೊಲೆರೂನ್ ನದಿಯು ಚಿದಂಬರಂ ಬಳಿ ಬಂಗಾಲಕೊಲ್ಲಿಯನ್ನು ಸೇರುತ್ತದೆ.

**ಕಾವೇರಿ ಕಣಿವೆ ಪ್ರದೇಶದ ಒಟ್ಟು ನೀರಿನ ಲಭ್ಯತೆ:** ಕೊಲೆರೂನ್ ಕೆಳದಂಡೆ ಅಣೆಕಟ್ಟೆಯವರೆಗೆ ಇರುವ ಕಾವೇರಿ ಕಣಿವೆ ಪ್ರದೇಶಗಳಲ್ಲಿ ಸಂಗ್ರಹವಾಗುವ ಸರಾಸರಿ ನೀರು ೭೯೦ ಟಿ.ಎಂ.ಸಿ ಎಂದು ಅಂದಾಜು ಮಾಡಲಾಗಿದೆ. ಇದರಲ್ಲಿ ಕರ್ನಾಟಕದ ಕಾಣಿಕೆ ಶೇಕಡ ೫೩.೮(೪೨೫ ಟಿ.ಎಂ.ಸಿ), ತಮಿಳುನಾಡಿನ ಕಾಣಿಕೆ ಶೇಕಡ ೩೧.೯(೨೫೨ ಟಿ.ಎಂ.ಸಿ) ಮತ್ತು ಕೇರಳ ರಾಜ್ಯದ ಕಾಣಿಕೆ ಶೇಕಡ ೧೪.೩(೧೧೩ ಟಿ.ಎಂ.ಸಿ.)

ಕಾವೇರಿ ಕಣಿವೆ ಪ್ರದೇಶದ ಪ್ರಮುಖ ಅಂಶಗಳು (೧೯೭೧-೭೨ ರಲ್ಲಿದ್ದಂತೆ)

| ಕ್ರ.ಸಂ. | ವಿವರ | ಕರ್ನಾಟಕ | ಕೇರಳ | ತಮಿಳುನಾಡು | ಒಟ್ಟು |
|---|---|---|---|---|---|
| ೧ | ನೀರು ಹರಿಯುವ ಪ್ರದೇಶ ಸಾವಿರ ಹೆಕ್ಟೇರುಗಳಲ್ಲಿ | ೩,೪೨೭ | ೨೮೭ | ೪,೪೦೨ | ೮,೧೧೬ |
| ೨ | ಶೇಕಡಾವಾರು | ೪೨.೨ | ೩.೫ | ೫೪.೩ | ೧೦೦ |
| ೩ | ಸಾಗುವಳಿ ಪ್ರದೇಶ ಸಾವಿರ ಹೆಕ್ಟೇರುಗಳಲ್ಲಿ | ೨,೪೭೭ | ೧೫೪ | ೨,೮೯೧ | ೫,೫೨೨ |
| ೪ | ಶೇಕಡಾವಾರು | ೪೪.೯ | ೨.೮ | ೫೨.೩ | ೧೦೦ |
| ೫ | ನಿವ್ವಳ ನೀರಾವರಿಯಾದ ಪ್ರದೇಶ ಸಾವಿರ ಹೆಕ್ಟೇರುಗಳಲ್ಲಿ | ೨೭೩ | ೨೨ | ೯೬೭* | ೧,೨೬೨ |
| | * ಪುದುಚೇರಿಯ ನೀರಾವರಿಯಾದ ಪ್ರದೇಶವನ್ನು ಒಳಗೊಂಡಿದೆ | | | | |
| ೬ | ಸಾಗುವಳಿ ಪ್ರದೇಶದಲ್ಲಿ ಶೇಕಡಾವಾರು ನೀರಾವರಿಯಾದ ಪ್ರದೇಶ | ೧೧.೦ | ೧೪.೦ | ೩೩.೫ | |
| ೭ | ಕ್ಷಾಮಪೀಡಿತ ಪ್ರದೇಶ ಸಾವಿರ ಹೆಕ್ಟೇರುಗಳಲ್ಲಿ | ೨,೧೪೪ | ೦ | ೧,೨೭೯ | ೩,೪೨೩ |
| ೮ | ನೀರು ಲಭ್ಯತೆಯ ಕೊಡುಗೆ ಟಿ.ಎಂ.ಸಿ. ಗಳಲ್ಲಿ | ೪೨೫(೫೩.೮) | ೧೧೩(೧೪.೩) | ೨೫೨(೩೧.೯) | |

**ರಾಜ್ಯದ ಕಾವೇರಿ ಕಣಿವೆಯಲ್ಲಿ ನೀರಾವರಿ ಅಭಿವೃದ್ಧಿ:** ಕೃಷ್ಣರಾಜಸಾಗರದ ನಿರ್ಮಾಣದೊಂದಿಗೆ ರಾಜ್ಯದಲ್ಲಿ ನೀರಾವರಿ ಚಟುವಟಿಕೆಗಳು ೧೯೧೧ ರಿಂದ ಪ್ರಾರಂಭವಾದವು. ಅದರ ಶಿಲಾನ್ಯಾಸ ೧೯೧೧ ರಲ್ಲಿ ನೆರವೇರಿದರೂ ಮದ್ರಾಸ್ ಸರ್ಕಾರ ಎತ್ತಿದ ಆಕ್ಷೇಪಣೆಗಳಿಂದಾಗಿ ೧೯೨೪ ರ ವರೆಗೆ ಜಲಾಶಯದ ನಿರ್ಮಾಣ ಕಾರ್ಯ ಸ್ಥಗಿತವಾಗಿತ್ತು. ಹತ್ತೊಂಭತ್ತನೇ ಶತಮಾನದಲ್ಲಿ ಮಾಡಿಕೊಂಡ ಒಪ್ಪಂದಗಳ ಷರತ್ತುಗಳನ್ನು ಪೂರೈಸಬೇಕೆಂದು ಒತ್ತಾಯಿಸುತ್ತಾ ತಮಿಳುನಾಡು ಆಗಾಗ್ಗೆ ಅಡ್ಡಗಾಲು ಹಾಕುತ್ತಿದ್ದುದರಿಂದ ರಾಜ್ಯದಲ್ಲಿ ನೀರಾವರಿ ಕಾರ್ಯಕ್ರಮ ಕುಂಟುತ್ತಾ ಸಾಗಿತು. ಇದರ ಪರಿಣಾಮವಾಗಿ ೧೯೨೪ ರಲ್ಲಿ ರಾಜ್ಯದಲ್ಲಿದ್ದ ೩.೧೫ ಲಕ್ಷ ಎಕರೆಗಳ ನೀರಾವರಿ ಪ್ರದೇಶವು ೧೯೭೨ ರ ವೇಳೆಗೆ ೭.೬ ಲಕ್ಷ ಎಕರೆಗಳಿಗೆ ಮಾತ್ರ ವಿಸ್ತಾರವಾಯಿತು. ಇದಕ್ಕೆ ವ್ಯತಿರಿಕ್ತವಾಗಿ ತಮಿಳುನಾಡು ೧೯೨೪ ರಲ್ಲಿ ೧೪.೫ ಲಕ್ಷ ಎಕರೆ ಇದ್ದ ತನ್ನ ನೀರಾವರಿ ಭೂಮಿಯನ್ನು ೧೯೭೨ ರ ವೇಳೆಗೆ ೨೨ ಲಕ್ಷ ಎಕರೆಗಳಿಗೆ ವಿಸ್ತರಿಸಿತು. ೧೯೭೪ ರಲ್ಲಿ ಭಾರತ ಸರ್ಕಾರದ ಸಹ ಕಾರ್ಯದರ್ಶಿ ಸಿ.ಸಿ.ಪಟೇಲ್ ಅವರ ಮೇಲ್ವಿಚಾರಣೆಯಲ್ಲಿ ನಡೆಸಿದ ಅಧ್ಯಯನದ ಪ್ರಕಾರ ೧೯೭೨ ರ ವೇಳೆಗೆ ತಮಿಳುನಾಡು ೪೮೯ ಟಿ.ಎಂ.ಸಿ ನೀರನ್ನು ಬಳಸಿಕೊಳ್ಳುತ್ತಿದ್ದರೆ ಕರ್ನಾಟಕವು ೧೭೭ ಟಿ.ಎಂ.ಸಿ ನೀರನ್ನು ಮಾತ್ರ ಬಳಸಿಕೊಳ್ಳುತ್ತಿತ್ತು.

ಕರ್ನಾಟಕ ರಾಜ್ಯದಲ್ಲಿ ನಿಧಾನಗತಿಯ ನೀರಾವರಿ ಅಭಿವೃದ್ಧಿಗೆ ಅಂದಿನ ಮೈಸೂರು ಸಂಸ್ಥಾನ ಮತ್ತು ಮದ್ರಾಸ್ ಪ್ರೆಸಿಡೆನ್ಸಿ ಆಡಳಿತಕ್ಕೊಳಪಟ್ಟಿದ್ದ ಮದ್ರಾಸ್ ಇವುಗಳ ನಡುವೆ ಆದ ೧೮೯೨ ಮತ್ತು ೧೯೨೪ ರ ಒಪ್ಪಂದಗಳೇ ನೇರ ಕಾರಣಗಳಾಗಿದ್ದವು. ೧೮೯೨ ರ ಒಪ್ಪಂದವು ಕಾವೇರಿ ಮತ್ತು ಅದರ ಉಪನದಿಗಳನ್ನು ಕರ್ನಾಟಕವು(ಅಂದಿನ ಮೈಸೂರು) ನೀರಾವರಿಗೆ ಒಳಪಡಿಸಿಕೊಳ್ಳುವ ಬಗ್ಗೆ ಅನೇಕ ಕಟ್ಟುಪಾಡುಗಳನ್ನು ಹೇರಿತ್ತು. ಈ ಒಪ್ಪಂದದ ಪ್ರಕಾರ ಅಸ್ತಿತ್ವದಲ್ಲಿರುವ ನೀರಾವರಿ ವ್ಯವಸ್ಥೆಯ ದುರಸ್ತಿಯನ್ನೂ ಸೇರಿದಂತೆ ರಾಜ್ಯದ ಯಾವುದೇ ನೀರಾವರಿ ಯೋಜನೆಯನ್ನು ಎತ್ತಿಕೊಳ್ಳಬೇಕಾದರೂ ಪೂರ್ವಭಾವಿಯಾಗಿ ಅಂದಿನ ಮದ್ರಾಸ್ ಪ್ರಾಂತ್ಯದ ಅನುಮತಿ ಪಡೆಯಬೇಕಿತ್ತು. ಆದರೆ ಮದ್ರಾಸ್ ಪ್ರಾಂತ್ಯಕ್ಕೆ ಮಾತ್ರ ಕಾವೇರಿ ಕಣಿವೆ ಪ್ರದೇಶಕ್ಕೆ ಸಂಬಂಧಿಸಿದಂತೆ ಈ ಬಗೆಯ ಯಾವುದೇ ಕಟ್ಟುಪಾಡುಗಳಿರಲಿಲ್ಲ.

೧೯೨೪ ರ ಒಪ್ಪಂದವು ೧೮೯೨ ರ ಒಪ್ಪಂದದ ಮತ್ತೊಂದು ರೂಪ. ಈ ಒಪ್ಪಂದವು ಅನೇಕ ಷರತ್ತುಗಳನ್ನು ಮೈಸೂರಿನ ಮೇಲೆ ಹೇರಿತು. ಈ ಒಪ್ಪಂದದ ಪ್ರಕಾರ ಕಾವೇರಿ ನದಿಯಲ್ಲಿ ಒಂದು ಕನಿಷ್ಟ ಮಟ್ಟಕ್ಕಿಂತ ಮೇಲ್ಪಟ್ಟು ನೀರಿನ ಪ್ರವಾಹವಿದ್ದರೆ ಮಾತ್ರ ರಾಜ್ಯವು ಕೃಷ್ಣರಾಜಸಾಗರದಲ್ಲಿ ನೀರನ್ನು ಸಂಗ್ರಹಿಸಬಹುದಾಗಿತ್ತು. ಇದರೊಂದಿಗೆ ೩,೦೧,೦೦೦ ಎಕರೆ ಭೂಮಿಗೆ ನೀರೊದಗಿಸುವ ೯೩.೫ ಟಿ.ಎಂ.ಸಿ ಸಾಮರ್ಥ್ಯದ ಮೆಟ್ಟೂರು ಜಲಾಶಯವನ್ನು ನಿರ್ಮಿಸಲು ಮದ್ರಾಸ್‌ಗೆ ಅನುವು ಮಾಡಿಕೊಡುವ, ನದಿ ಮುಖಜ ಭೂಮಿಯಲ್ಲಿ ಎರಡನೇ ಬೆಳೆಗೂ ನೀರನ್ನು ನಿರಂತರವಾಗಿ ಒದಗಿಸುವ ಹಾಗೂ ಕಾವೇರಿ ಮತ್ತು ಅದರ ಉಪನದಿಗಳಿಗೆ ಮದ್ರಾಸ್ ಪ್ರದೇಶದಲ್ಲಿ ಅಣೆಕಟ್ಟು ಕಟ್ಟುವ ಅವಕಾಶಗಳನ್ನು ಈ ಒಪ್ಪಂದ ನೀಡಿತು. ಆದರೆ ಈ ಒಪ್ಪಂದ ಅಂದಿನ ಮೈಸೂರು ರಾಜ್ಯದ ಮೇಲೆ ಅನೇಕ ನಿಬಂಧನೆಗಳನ್ನು ಹೇರಿತು. ೧,೨೫,೦೦೦ ಎಕರೆ ಪ್ರದೇಶಕ್ಕೆ ನೀರೊದಗಿಸುವ ೪೪.೮೩ ಟಿ.ಎಂ.ಸಿ ಸಾಮರ್ಥ್ಯದ ಕೃಷ್ಣರಾಜಸಾಗರ ನಿರ್ಮಾಣಕ್ಕೆ ಅನುವು ಮಾಡಿಕೊಟ್ಟಿತು. ಅಲ್ಲದೆ ಮುಂದೆ ೧,೧೦,೦೦೦ ಎಕರೆ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಬೇಕಾದರೆ ಮತ್ತು ಕಾವೇರಿಯ ಉಪನದಿಗಳಿಗೆ ಮುಂದೆ ಅಣೆಕಟ್ಟು ಕಟ್ಟಬೇಕಾದರೆ ಮದ್ರಾಸ್ ಸರ್ಕಾರದ ಪೂರ್ವಭಾವಿ ಅನುಮತಿ ಕೋರಬೇಕು ಮತ್ತು ಕಟ್ಟುವ ಇತರ ಜಲಾಶಯಗಳ ಸಂಪೂರ್ಣ ಸಾಮರ್ಥ್ಯ ೪೫ ಟಿ.ಎಂ.ಸಿ ಯನ್ನು ಮೀರಬಾರದು ಹಾಗೂ ಈ ಸಂಗ್ರಹಣೆಯನ್ನು ಕಾವೇರಿ ನೀರಿನ ಪ್ರವಾಹ ಒಂದು ನಿರ್ದಿಷ್ಟ ಮಟ್ಟಕ್ಕಿಂತ ಜಾಸ್ತಿ ಇದ್ದರೆ ಮಾತ್ರ ಮಾಡಬೇಕೆಂಬ ಷರತ್ತನ್ನು ಹೇರಿತು. ಈ ಒಪ್ಪಂದದ ನಿಬಂಧನೆಗಳ ಪ್ರಕಾರ ಪ್ರತಿ ತಿಂಗಳಿಗೆ ನಿರ್ದಿಷ್ಟಪಡಿಸಿದ ಮಿತಿಗಿಂತ ನೀರಿನ ಹರಿವು ಹೆಚ್ಚಿದಲ್ಲಿ ಮಾತ್ರ ಕರ್ನಾಟಕವು ನೀರನ್ನು ಸಂಗ್ರಹಿಸಬೇಕಾಗಿತ್ತು.

**ಕರ್ನಾಟಕದ ಮಾಸ್ಟರ್ ಪ್ಲಾನ್ :** ಕರ್ನಾಟಕ ಸರ್ಕಾರವು ೧೯೭೬ ರಲ್ಲಿ ತಯಾರಿಸಿ ಕೇಂದ್ರಕ್ಕೆ ಹಾಗೂ ಸಂಬಂಧಪಟ್ಟ ಕಣಿವೆ ರಾಜ್ಯಗಳಿಗೆ ಕಳುಹಿಸಿಕೊಟ್ಟ ಮಾಸ್ಟರ್ ಪ್ಲಾನ್ ಕಾವೇರಿ ಕಣಿವೆ ಪ್ರದೇಶದ ಒಟ್ಟಾರೆ ಅಗತ್ಯಗಳನ್ನು ಆಧರಿಸಿತ್ತು. ಇದರ ಆಧಾರದ ಮೇಲೆ ಇಡೀ ಕಾವೇರಿ ಕಣಿವೆ ಪ್ರದೇಶದಲ್ಲಿನ ೧೪.೪ ಲಕ್ಷ ಹೆಕ್ಟೇರು ನೀರಾವರಿ ಭೂಮಿಯನ್ನು ೩೧.೨ ಲಕ್ಷ ಹೆಕ್ಟೇರಿಗೆ ವಿಸ್ತರಿಸುವುದಾಗಿತ್ತು. ಮಾಸ್ಟರ್ ಪ್ಲಾನ್ ಆಧಾರದ ಮೇಲೆ ಪ್ರತೀ ರಾಜ್ಯದ ತುಲನಾತ್ಮಕ ವಿವರಗಳು ಕೆಳಕಂಡಂತಿವೆ. (ಪ್ರದೇಶ ಲಕ್ಷ ಹೆಕ್ಟೇರುಗಳಲ್ಲಿ)

| ವಿವರಗಳು | ಕರ್ನಾಟಕ | ಕೇರಳ | ಪುದುಚೇರಿಯ ಕಾರೈಕಲ್ ಸೇರಿದಂತೆ ತಮಿಳುನಾಡು | ಒಟ್ಟು |
|---|---|---|---|---|
| ಕಣಿವೆ ಪ್ರದೇಶದಲ್ಲಿ ಸಾಗುವಳಿ ಪ್ರದೇಶ | ೨೪.೭೭ | ೧.೫೪ | ೨೮.೯೧ | ೫೫.೨೨ |
| ೧೯೭೧ ರಲ್ಲಿ ಆಯಕಟ್ಟು | ೨.೬೮ | ೦.೨೨ | ೮.೯೪ | ೧೧.೮೪ |
| ೧೯೭೧ ರಲ್ಲಿ ನೀರಾವರಿ ಬೆಳೆ ಪ್ರದೇಶ | ೨.೭೬ | ೦.೨೨ | ೧೧.೪೨ | ೧೪.೪೦ |
| ಮಾಸ್ಟರ್ ಪ್ಲಾನ್ ಮೇರೆಗೆ ಅಂತಿಮ ಆಯಕಟ್ಟು | ೯.೮೫ | ೧.೦೧ | ೯.೯೫ | ೨೦.೮೧ |
| ಮಾಸ್ಟರ್ ಪ್ಲಾನ್ ಮೇರೆಗೆ ಅಂತಿಮ ಬೆಳೆಪ್ರದೇಶ | ೧೨.೨೦ | ೧.೮೩ | ೧೭.೨೬ | ೩೧.೨೯ |
| ೧೯೭೧ ರಲ್ಲಿ ಬೆಳೆ ಸಾಗುವಳಿ ಪ್ರದೇಶದಲ್ಲಿ ನೀರಾವರಿ ಪ್ರದೇಶದ ಶೇಕಡಾವಾರು | ೧೧ | ೧೪ | ೩೯ | ೨೬ |
| ಮಾಸ್ಟರ್ ಪ್ಲಾನ್ ಮೇರೆಗೆ ಸಾಗುವಳಿ ಪ್ರದೇಶದಲ್ಲಿ ನೀರಾವರಿ ಬೆಳೆ ಪ್ರದೇಶದ ಶೇಕಡವಾರು | ೪೯ | ೧೧೯ | ೬೦ | ೫೭ |

**ಕಾವೇರಿ ಜಲವಿವಾದ ನ್ಯಾಯ ಪಂಚಾಯ್ತಿಯ ಮುಂದೆ ಕರ್ನಾಟಕದ ಮುಖ್ಯವಾದ :** ೧೯೮೩ರಲ್ಲಿ ತಮಿಳುನಾಡಿನ ರೈತರು ಅಂತರರಾಜ್ಯ ಜಲವಿವಾದ ಕಾಯ್ದೆಯ ೩ನೇ ಪ್ರಕರಣದ ಅಡಿಯಲ್ಲಿ ಸರ್ವೋಚ್ಚ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿ ಕಾವೇರಿ ಜಲವಿವಾದ ಇತ್ಯರ್ಥಕ್ಕೆ ನ್ಯಾಯ ಪಂಚಾಯ್ತಿಯನ್ನು ರಚಿಸುವಂತೆ ಕೋರಿದರು. ಈ ಬಗ್ಗೆ ೪-೫-೧೯೯೦ರಲ್ಲಿ ನೀಡಿದ ಸರ್ವೋಚ್ಚ ನ್ಯಾಯಾಲಯದ ತೀರ್ಪಿನ ಆಧಾರದ ಮೇಲೆ ಭಾರತದ ಸರ್ಕಾರವು ತನ್ನ ೨-೬-೧೯೯೦ರ ಅಧಿಸೂಚನೆಯಲ್ಲಿ ಕಾವೇರಿ ಜಲವಿವಾದ ನ್ಯಾಯ ಪಂಚಾಯ್ತಿಯ ರಚನೆಯ ಬಗ್ಗೆ ಪ್ರಕಟಣೆ ಹೊರಡಿಸಿ, ಆ ನ್ಯಾಯ ಪಂಚಾಯ್ತಿಗೆ ತಮಿಳುನಾಡು ಸರ್ಕಾರ ಸಲ್ಲಿಸಿದ ದಿನಾಂಕ ೬-೭-೧೯೮೬ರ ಪತ್ರ ಸಂಖ್ಯೆ ೧೧೭೫೨೭/ಕೆ೨.೮೨-೧೧೧ರ ಕೋರಿಕೆಯ ಮೇರೆಗೆ ಕಾವೇರಿ ನದಿಯ ನೀರು ಹಂಚಿಕೆ ಹಾಗೂ ಕಾವೇರಿ ಕಣಿವೆಯ ಬಗ್ಗೆ ಉದ್ಭವಿಸಿರುವ ಜಲವಿವಾದವನ್ನು ಇತ್ಯರ್ಥಪಡಿಸುವಂತೆ ಒಪ್ಪಿಸಿತು. ಎಲ್ಲಾ ರಾಜ್ಯಗಳು ತಮ್ಮ ಹೇಳಿಕೆಗಳನ್ನು, ಪ್ರತಿ ಹೇಳಿಕೆಗಳನ್ನು ಹಾಗೂ ಅನ್ಯರಾಜ್ಯಗಳು ನೀಡಿದ ಪ್ರತಿ ಹೇಳಿಕೆಗಳಿಗೆ ಪ್ರತ್ಯುತ್ತರಗಳನ್ನು ನ್ಯಾಯಪಂಚಾಯ್ತಿಗೆ ಸಲ್ಲಿಸಿದವು.

ಕಾವೇರಿ ಕಣಿವೆ ಪ್ರದೇಶಕ್ಕೆ ಕರ್ನಾಟಕವು ನೀಡುವ ನೀರಿನ ಕೊಡುಗೆ (೭೯೦ ಟಿ.ಎಂ.ಸಿ. ಪೈಕಿ ೪೨೫ ಟಿ.ಎಂ.ಸಿ.) ರಾಜ್ಯದ ಬರಪೀಡಿತ ಪ್ರದೇಶಗಳ ವ್ಯಾಪ್ತಿ (ಕಣಿವೆ ಪ್ರದೇಶದ ಶೇ.೨೯.೧೬ ರಷ್ಟು ತಮಿಳುನಾಡಿನಲ್ಲಿರುವುದಕ್ಕೆ ಹೋಲಿಸಿದರೆ ಕರ್ನಾಟಕದಲ್ಲಿ ಶೇ.೬೩.೮೧) ಅಂತರ್ಜಲ ಮತ್ತು ಇತರ ಸಂಪನ್ಮೂಲಗಳು ಲಭ್ಯವಿಲ್ಲದಿರುವುದು ಇವುಗಳನ್ನು ಗಮನದಲ್ಲಿಟ್ಟುಕೊಂಡು ಹಾಗೂ ಒಂದು ಅರೆ ಖುಷ್ಕಿ ಬೆಳೆಗೆ ನೀರು ಒದಗಿಸುವ ಮತ್ತು ಸಾಗುವಳಿ ಪ್ರದೇಶವನ್ನು ಒಂದು ಯುಕ್ತ ಪ್ರಮಾಣಕ್ಕೆ (ಶೇ.೧೧.೦೦ ರಿಂದ ಶೇ.೪೨.೬ಕ್ಕೆ) ವಿಸ್ತರಿಸುವ ದೃಷ್ಟಿಯಿಂದ ಕರ್ನಾಟಕ ರಾಜ್ಯವು ಹಾಲಿ ಇರುವ, ನಿರ್ಮಾಣದ ಹಂತದಲ್ಲಿರುವ ಮತ್ತು ಪ್ರಸ್ತಾವಿತ ಯೋಜನೆಗಳಿಂದ ನೀರಾವರಿ, ಗೃಹೋಪಯೋಗಿ ಮತ್ತು ಕೈಗಾರಿಕಾ ನೀರು ಸರಬರಾಜಿಗಾಗಿ ತನಗೆ ಅಗತ್ಯವಿರುವ ನೀರಿನ ಪ್ರಮಾಣ ೪೬೫ ಟಿ.ಎಂ.ಸಿ. ಎಂದು ಸ್ಪಷ್ಟಪಡಿಸಿತು.

**ರಾಷ್ಟ್ರೀಯ ಜಲನೀತಿ :** ನದಿ ನೀರಿನ ಹಂಚಿಕೆಗೆ ಸಂಬಂಧಿಸಿದಂತೆ ನಿರ್ದಿಷ್ಟ ಮಾರ್ಗಸೂಚಿಗಳು ಇಲ್ಲದ್ದರಿಂದ, ನದಿ ನೀರು ವಿವಾದವನ್ನು ನ್ಯಾಯ ಪಂಚಾಯ್ತಿಗೆ ಒಪ್ಪಿಸುವ ಬಗ್ಗೆ ಕರ್ನಾಟಕ ಆದಿಯಿಂದಲೂ ವಿರೋಧಿಸುತ್ತಾ ಬಂದಿದೆ. ಯಾವುದೇ ಮಾರ್ಗಸೂಚಿಗಳನ್ನು ಇದುವರೆವಿಗೂ ರೂಪಿಸಲಾಗಿಲ್ಲ.

**ಮಧ್ಯಂತರ ಆದೇಶ :** ಕಾವೇರಿ ಜಲ ವಿವಾದ ನ್ಯಾಯ ಪಂಚಾಯ್ತಿ ಮುಂದೆ ವಿಚಾರಣೆ ನಡೆಯುತ್ತಿದ್ದ ಕಾಲದಲ್ಲಿ ತಮಿಳುನಾಡು ಮತ್ತು ಪುದುಚೇರಿಗಳು ನ್ಯಾಯ ಪಂಚಾಯ್ತಿಗೆ ಅರ್ಜಿಗಳನ್ನು ಸಲ್ಲಿಸಿದವು. ತಮಿಳುನಾಡು ತನ್ನ ಅರ್ಜಿಯಲ್ಲಿ ಕರ್ನಾಟಕವು ೩೧.೫.೧೯೭೨ ರಂದು ಇದ್ದಂತೆ ಬಳಸಿದ್ದ ಅಥವಾ ಸಂಗ್ರಹಮಾಡಿದ್ದ ನೀರಿನ ಪ್ರಮಾಣಕ್ಕಿಂತ ಹೆಚ್ಚು ನೀರನ್ನು ಜಲಾಶಯಗಳಲ್ಲಿ ಸಂಗ್ರಹಿಸದಂತೆ ಮತ್ತು ಬಳಸದಂತೆ ಹಾಗೂ ತಮಿಳುನಾಡು ಮತ್ತು ನ್ಯಾಯಪಂಚಾಯ್ತಿಯ ಒಪ್ಪಿಗೆ ಪಡೆಯದೆ ಕರ್ನಾಟಕವು ಯಾವುದೇ ಹೊಸ ಯೋಜನೆಗಳನ್ನು ಕೈಗೆತ್ತಿಕೊಳ್ಳದಂತೆ ಅಥವಾ ನಿರ್ಮಾಣ ಹಂತದಲ್ಲಿರುವ ಯೋಜನೆಗಳ ಕಾರ್ಯ ಮುಂದುವರಿಸದಂತೆ ಕರ್ನಾಟಕಕ್ಕೆ ನಿರ್ದೇಶನ ನೀಡಬೇಕೆಂದು ನ್ಯಾಯ ಪಂಚಾಯ್ತಿಯನ್ನು ಕೋರಿತ್ತು. ಪುದುಚೇರಿಯು ತನ್ನ ಅರ್ಜಿಯಲ್ಲಿ ಸೆಪ್ಟೆಂಬರ್‌ನಿಂದ ಮಾರ್ಚ ವರೆಗಿನ ಅವಧಿಯಲ್ಲಿ ತನ್ನ ವೇಳಾಪಟ್ಟಿಗನುಗುಣವಾಗಿ ನೀರನ್ನು ಬಿಡಲು ಕರ್ನಾಟಕ ಮತ್ತು ತಮಿಳುನಾಡಿಗೆ ಆದೇಶ ನೀಡಬೇಕೆಂದು ಕೋರಿತ್ತು. ವಿವಾದಕ್ಕೆ ಸಂಬಂಧಿಸಿದ ರಾಜ್ಯಗಳ ವಿಚಾರಣೆ ನಡೆಸಿದ ನಂತರ ನ್ಯಾಯಪಂಚಾಯ್ತಿಯು, ಮಧ್ಯಂತರ ಆದೇಶ ನೀಡುವುದು, ಪಂಚಾಯ್ತಿಯ ನಿರ್ದೇಶನ ವ್ಯಾಪ್ತಿಗೆ ಬರದಿರುವುದರಿಂದ ಅರ್ಜಿಗಳನ್ನು ತಳ್ಳಿಹಾಕಿತು. ನ್ಯಾಯಪಂಚಾಯ್ತಿ ನೀಡಿದ ಆದೇಶವನ್ನು ಪ್ರಶ್ನಿಸಿ ತಮಿಳುನಾಡು ಮತ್ತು ಪುದುಚೇರಿ ಸರ್ವೋಚ್ಚ ನ್ಯಾಯಾಲಯದಲ್ಲಿ ೧೯೯೧ ರಲ್ಲಿ ರಿಟ್ ಅರ್ಜಿ ಸಲ್ಲಿಸಿದವು. ಈ ವಿಶೇಷ ರಿಟ್‌ಗಳ ಮೇಲೆ ೨೬.೪.೧೯೯೧ ರಂದು ಸರ್ವೋಚ್ಚ ನ್ಯಾಯಾಲಯ ನೀಡಿದ ತೀರ್ಪನ್ನಾಧರಿಸಿದ ಮೊಕದ್ದಮೆ ಮತ್ತೆ ನ್ಯಾಯ ಪಂಚಾಯ್ತಿಯ ಮುಂದೆ ವಿಚಾರಣೆಗೆ ಬಂದು, ನ್ಯಾಯ ಪಂಚಾಯ್ತಿಯು ೨೫.೬.೧೯೯೧ ರ ತನ್ನ ಆದೇಶದಲ್ಲಿ ಕೆಳಕಂಡ ನಿರ್ದೇಶನಗಳನ್ನು ನೀಡಿತು.

೧) ವರ್ಷದ ಜೂನ್‌ನಿಂದ ಮೇ ತಿಂಗಳವರೆಗೆ ತಮಿಳುನಾಡಿನ ಮೆಟ್ಟೂರು ಜಲಾಶಯದಲ್ಲಿ ೨೦೫ ಟಿ.ಎಂ.ಸಿ ನೀರು ಇರುವಂತೆ, ಕರ್ನಾಟಕವು ತನ್ನ ಜಲಾಶಯಗಳಿಂದ ನೀರು ಬಿಡುಗಡೆ ಮಾಡಬೇಕು.

೨) ನ್ಯಾಯಪಂಚಾಯ್ತಿಯು ಪ್ರತಿ ತಿಂಗಳೂ ಬಿಡಬೇಕಾದ ನೀರಿನ ಪ್ರಮಾಣವನ್ನು ಸೂಚಿಸಿದೆ.

೩) ನೀರನ್ನು ನಾಲ್ಕು ಸಮಾನ ಕಂತುಗಳಲ್ಲಿ ನಾಲ್ಕು ವಾರಗಳಲ್ಲಿ ಬಿಡಬೇಕು.

೪) ಯಾವುದೇ ವಾರದಲ್ಲಿ ನಿರ್ದಿಷ್ಟ ಪ್ರಮಾಣಕ್ಕಿಂತ ಕಡಿಮೆ ನೀರು ಬಿಟ್ಟರೆ ಆ ಕೊರತೆಯನ್ನು ಮುಂದಿನ ವಾರದಲ್ಲಿ ತುಂಬಿಕೊಡಬೇಕು.

೫) ಕರ್ನಾಟಕವು ತನ್ನ ನೀರಾವರಿ ಭೂಮಿಯನ್ನು ೧೧.೨ ಲಕ್ಷ ಹೆಕ್ಟೇರುಗಳಿಗಿಂತ ಹೆಚ್ಚಿಸಬಾರದು.

೬) ತಮಿಳುನಾಡು ಸರ್ಕಾರವು ಪುದುಚೇರಿಗೆ ೬ ಟಿ.ಎಂ.ಸಿ ನೀರನ್ನು ಬಿಡಬೇಕು.

೭) ಈ ಆದೇಶವು ನ್ಯಾಯಪಂಚಾಯ್ತಿ ನೀಡುವ ಅಂತಿಮ ತೀರ್ಪಿನವರೆಗೂ ಜಾರಿಯಲ್ಲಿರುತ್ತದೆ.

**ಮಾಹೆವಾರು ಬಿಡಬೇಕಾದ ನೀರಿನ ಪ್ರಮಾಣ ಈ ರೀತಿಯಿದೆ :** ಜೂನ್–೧೦.೧೬ ಟಿ.ಎಂ.ಸಿ, ಜುಲೈ – ೪೨.೭೬ ಟಿ.ಎಂ.ಸಿ, ಆಗಸ್ಟ್ – ೫೪.೭೨ ಟಿ.ಎಂ.ಸಿ, ಸೆಪ್ಟೆಂಬರ್ –೨೯.೩೬ ಟಿ.ಎಂ.ಸಿ, ಅಕ್ಟೋಬರ್–೩೦.೧೭ ಟಿ.ಎಂ.ಸಿ, ನವೆಂಬರ್–೧೬.೦೫ ಟಿ.ಎಂ.ಸಿ, ಡಿಸೆಂಬರ್– ೧೦.೩೭ ಟಿ.ಎಂ.ಸಿ, ಜನವರಿ– ೨.೫೧ ಟಿ.ಎಂ.ಸಿ, ಫೆಬ್ರವರಿ– ೨.೧೭ ಟಿ.ಎಂ.ಸಿ, ಮಾರ್ಚ್–೨.೪೦ ಟಿ.ಎಂ.ಸಿ, ಏಪ್ರಿಲ್–೨.೩೨ ಟಿ.ಎಂ.ಸಿ, ಮೇ –೨.೦೧ ಟಿ.ಎಂ.ಸಿ, ಒಟ್ಟು – ೨೦೫ ಟಿ.ಎಂ.ಸಿ. ಕರ್ನಾಟಕವು ಹಾಲಿ ಇರುವ ೧೧.೨ ಲಕ್ಷ ಎಕರೆ ನೀರಾವರಿ ಸೌಲಭ್ಯವನ್ನು ಇನ್ನು ಹೆಚ್ಚಿಸಿಕೊಳ್ಳಲಾಗದು.

**ಕರ್ನಾಟಕದ ಪ್ರತಿಕ್ರಿಯೆ :** ದಿನಾಂಕ ೬.೭.೧೯೯೧ ರಂದು ರಾಜ್ಯ ವಿಧಾನ ಮಂಡಲದ ಉಭಯ ಸದನಗಳಲ್ಲಿ ಈ ಆದೇಶದ ಬಗ್ಗೆ ತೆಗೆದುಕೊಳ್ಳಲಾದ ಅವಿರೋಧ ನಿರ್ಣಯ ರಾಜ್ಯದ ಬಹುತೇಕ ಜನರ ಅಭಿಪ್ರಾಯಕ್ಕೆ ಕನ್ನಡಿ ಹಿಡಿದಂತಿತ್ತು. ಸದರಿ ನಿರ್ಣಯವನ್ನು ಈ ಕೆಳಗೆ ಉದ್ಧೃತಿಸಲಾಗಿದೆ.

ಕಾವೇರಿ ಜಲವಿವಾದದ ಬಗ್ಗೆ ನ್ಯಾಯಪಂಚಾಯ್ತಿಯು ೨೫.೬.೧೯೯೧ ರಂದು ಹೊರಡಿಸಿರುವ ಮಧ್ಯಂತರ ಆದೇಶವು ರಾಜ್ಯದ ಜನತೆಯ ಹಿತಾಸಕ್ತಿಗೆ ಮಾರಕವಾಗಿರುವುದರಿಂದಲೂ ನ್ಯಾಯ ಪಂಚಾಯ್ತಿಯ ಅಧಿಕಾರ ವ್ಯಾಪ್ತಿಗೆ ಮೀರಿದ್ದಾದ್ದರಿಂದಲೂ ಹಾಗೂ ವಾಸ್ತವಾಂಶ, ಕಾನೂನು ಅಂಶ, ಪ್ರಾಯೋಗಿಕ ಅಂಶಗಳಿಗೆ ಅನುಗುಣವಾಗಿಲ್ಲದಿರುವುದರಿಂದ ಆ ಆದೇಶವನ್ನು ಸರ್ಕಾರವು ತಿರಸ್ಕರಿಸಬೇಕೆಂದು ಈ ಸದನ ಅವಿರೋಧವಾಗಿ ಒತ್ತಾಯಿಸುತ್ತದೆ.

ಈ ಹಿನ್ನೆಲೆಯಲ್ಲಿ ರಾಷ್ಟ್ರೀಯ ಜಲ ನೀತಿಯೊಂದನ್ನು ರೂಪಿಸುವವರೆಗೂ, ಹಾಗೂ ೧೯೫೬ ರ ಅಂತರರಾಜ್ಯ ಜಲ ಕಾಯ್ದೆಗೆ ಸೂಕ್ತ ತಿದ್ದುಪಡಿ ತರುವವರೆಗೆ ಮತ್ತು ನ್ಯಾಯ ಪಂಚಾಯ್ತಿಗೆ ಸ್ಪಷ್ಟ ಮಾರ್ಗಸೂಚಿಗಳನ್ನು ನೀಡುವವರೆಗೆ ನ್ಯಾಯ ಪಂಚಾಯ್ತಿಯ ಮುಂದಿರುವ ಕಾವೇರಿ ಜಲವಿವಾದಕ್ಕೆ ಸಂಬಂಧಿಸಿದ ಎಲ್ಲಾ ನಡೆವಳಿಗಳನ್ನು ಸ್ಥಗಿತಗೊಳಿಸಬೇಕೆಂದು ಈ ಸದನವು ಅವಿರೋಧವಾಗಿ ಕೇಂದ್ರ ಸರ್ಕಾರವನ್ನು ಒತ್ತಾಯಿಸುತ್ತದೆ.

**೧೯೯೧ರ ಕರ್ನಾಟಕ ಕಾವೇರಿ ಕಣಿವೆ ಪ್ರದೇಶಗಳ ನೀರಾವರಿ ಸಂರಕ್ಷಣೆಯ ಸುಗ್ರೀವಾಜ್ಞೆ :** ಅನೇಕ ಪರಿಸ್ಥಿತಿಗಳ ಒತ್ತಡದಿಂದಾಗಿ ಶಾಸಕಾಂಗದತ್ತ ಅಧಿಕಾರ ಚಲಾಯಿಸಿ ಸುಗ್ರೀವಾಜ್ಞೆ ಜಾರಿಮಾಡಬೇಕಾಗಿ ಬಂದಿತು. ಈ ನದಿ ವಿವಾದಗ್ರಸ್ತ ರಾಜ್ಯಗಳಿಗೆ ದೊರೆಯುವ ನ್ಯಾಯಸಮ್ಮತ ನೀರಿನ ಪಾಲಿನ ಬಗ್ಗೆ ಈವರೆಗೆ ನ್ಯಾಯ ನಿರ್ಣಯವಾಗಿಲ್ಲ ಹಾಗೂ ಈ ಶಾಸಕಾಂಗ ಅಧಿಕಾರವನ್ನು ನಿಯಂತ್ರಿಸಲು ಯಾವುದೇ ಕೇಂದ್ರ ಕಾನೂನು ಅಸ್ತಿತ್ವದಲ್ಲಿ ಇಲ್ಲ. ಇದರ ಜೊತೆಗೆ ತನ್ನ ಪಾಲಿನ ನೀರನ್ನು ಪಡೆಯುವ ಹಕ್ಕು ಕರ್ನಾಟಕ ರಾಜ್ಯಕ್ಕೆ ಇರುವುದರಿಂದ, ಶಾಸಕಾಂಗ ಮತ್ತು ಕಾರ್ಯಾಂಗಗಳ ಮೂಲಕ ಆ ಹಕ್ಕನ್ನು ರಕ್ಷಿಸುವ ಮತ್ತು ಅನುಭವಿಸುವ ಅವಕಾಶ ಸಂವಿಧಾನದ ೧೬೨ನೇ ಅನುಚ್ಛೇದದಲ್ಲಿ ಅಡಕವಾಗಿದೆ. ಈ ದೃಷ್ಟಿಯಿಂದಲ್ಲದೆ ಬೇರೆ ದೃಷ್ಟಿಯಿಂದ ಸುಗ್ರೀವಾಜ್ಞೆ ಹೊರಡಿಸಿದ್ದರೆ ಅದು ಕಾನೂನು ಮತ್ತು ಆಡಳಿತ ಜಟಿಲತೆಗಳ ಅನರ್ಥಕ್ಕೆ ದಾರಿಯಾಗುತ್ತಿತ್ತು.

ಕರ್ನಾಟಕದ ರಾಜ್ಯಪಾಲರು ೧೯೯೧ ನೇ ಜುಲೈ ೨೫ ರಂದು **೧೯೯೧ರ ಕರ್ನಾಟಕ ಕಾವೇರಿ ಕಣಿವೆ ಪ್ರದೇಶ ನೀರಾವರಿ ಸಂರಕ್ಷಣಾ ಸುಗ್ರೀವಾಜ್ಞೆ** ಯೊಂದನ್ನು ಹೊರಡಿಸಿದರು. ಈ ಸುಗ್ರೀವಾಜ್ಞೆಯ ಮುಖ್ಯಗುರಿ ರಾಜ್ಯದ ಕಾವೇರಿ ಮತ್ತು ಅದರ ಉಪನದಿಗಳ ಜಲಾನಯನ ಪ್ರದೇಶಗಳ ನೀರಾವರಿ ಯೋಗ್ಯ ಭೂಮಿಯಲ್ಲಿ ನೀರಾವರಿಯನ್ನು ಸಂರಕ್ಷಿಸುವುದಾಗಿತ್ತು. ಈ ಸುಗ್ರೀವಾಜ್ಞೆಯು, ಕಾವೇರಿ ಜಲಾನಯನ ಪ್ರದೇಶಗಳಲ್ಲಿ ಪೂರ್ಣಗೊಂಡ ಅಥವಾ ನಿರ್ಮಾಣ ಹಂತದಲ್ಲಿರುವ ಯೋಜನೆಗಳಿಂದ ಲಾಭ ಪಡೆದ ೮,೪೯,೭೦೦ ಹೆಕ್ಟೇರು ಭೂಮಿಗೆ ಸಂರಕ್ಷಣೆ ಒದಗಿಸುವುದಾಗಿತ್ತು. ಇದಾದ ನಂತರ ೧೯೯೧ರ ಸೆಪ್ಟೆಂಬರ್-ಅಕ್ಟೋಬರ್ ತಿಂಗಳಲ್ಲಿ ಈ ಸುಗ್ರೀವಾಜ್ಞೆ ಕರ್ನಾಟಕ ಕಾವೇರಿ ಕಣಿವೆ ಪ್ರದೇಶ ನೀರಾವರಿ ಸಂರಕ್ಷಣಾ ಕಾಯ್ದೆ ೧೯೯೧ ಎಂಬ ಕಾಯ್ದೆಯಾಗಿ ಮಾರ್ಪಾಡಾಯಿತು.

**ರಾಷ್ಟ್ರಪತಿಯವರಿಂದ ಸರ್ವೋಚ್ಚ ನ್ಯಾಯಾಲಯಕ್ಕೆ ಉಲ್ಲೇಖ :** ನ್ಯಾಯ ಪಂಚಾಯ್ತಿಯ ಮಧ್ಯಂತರ ಆದೇಶದ ಕೆಲವು ಅಂಶಗಳ ಬಗ್ಗೆ ಭಿನ್ನಾಭಿಪ್ರಾಯಗಳು ವ್ಯಕ್ತಗೊಂಡಿದ್ದರಿಂದ ಹಾಗೂ ಕರ್ನಾಟಕ ಹೊರಡಿಸಿದ ೧೯೯೧ರ ಕರ್ನಾಟಕ ಕಾವೇರಿ ಕಣಿವೆ ಪ್ರದೇಶ ನೀರಾವರಿ ಸಂರಕ್ಷಣಾ ಸುಗ್ರೀವಾಜ್ಞೆ ಮತ್ತು ಅದರ ಉಪಬಂಧಗಳ ಸಂವಿಧಾನ ಬದ್ಧತೆ ಬಗ್ಗೆ ಸಂದೇಹಗಳು ಮೂಡಿದ್ದರಿಂದ ಹಾಗೂ ಈ ಭಿನ್ನಾಭಿಪ್ರಾಯಗಳು ಸಾರ್ವಜನಿಕ ವಿವಾದಗಳಿಗೆ ಮತ್ತು ಅನಪೇಕ್ಷಿತ ಪರಿಣಾಮಗಳಿಗೆ ಕಾರಣವಾಗುವ ಸಾಧ್ಯತೆ ಬಂದಿದ್ದರಿಂದ ರಾಷ್ಟ್ರಪತಿಗಳು ಆ

ಮುಂದಿನ ಅಂಶಗಳ ಬಗ್ಗೆ ಸರ್ವೋಚ್ಚ ನ್ಯಾಯಾಲಯದ ಅಭಿಪ್ರಾಯ ಪಡೆಯಲು ಈ ವಿಷಯವನ್ನು ಪರಿಶೀಲಿಸಿ ವರದಿ ಮಾಡುವಂತೆ ಸರ್ವೋಚ್ಚ ನ್ಯಾಯಾಲಯಕ್ಕೆ ಒಪ್ಪಿಸಿದರು. ಆ ಅಂಶಗಳೆಂದರೆ,

೧. ಕರ್ನಾಟಕವು ಹೊರಡಿಸಿದ ಸುಗ್ರೀವಾಜ್ಞೆ ಹಾಗೂ ಅದರ ಉಪಬಂಧಗಳು ಸಂವಿಧಾನಾತ್ಮಕವಾಗಿವೆಯೇ?

೨. (೧) ನ್ಯಾಯ ಪಂಚಾಯ್ತಿಯು ಹೊರಡಿಸಿದ ಮಧ್ಯಂತರ ಆದೇಶವು ಕಾಯ್ದೆಯ ೫ (೨) ನೇ ಪ್ರಕರಣದ ಅರ್ಥವ್ಯಾಪ್ತಿಯೊಳಗೆ ನ್ಯಾಯ ಪಂಚಾಯ್ತಿಯು ನೀಡುವ ವರದಿಯ ಒಂದು ಭಾಗವಾಗಿರುತ್ತದೆಯೇ; (೨) ಮಧ್ಯಂತರ ಆದೇಶವನ್ನು ಜಾರಿಗೊಳಿಸುವಂತೆ ಮಾಡಲು ಕೇಂದ್ರ ಸರ್ಕಾರ ಅದನ್ನು ರಾಜ್ಯಪತ್ರದಲ್ಲಿ ಹೊರಡಿಸುವ ಅಗತ್ಯವಿದೆಯೇ ;

೩. ಜಲವಿವಾದ ಇತ್ಯರ್ಥಕ್ಕೆ ಕಾಯ್ದೆಯ ಮೇರೆಗೆ ರೂಪಿತವಾದ ಯಾವುದೇ ನ್ಯಾಯ ಪಂಚಾಯ್ತಿಗೆ ಪಕ್ಷಕಾರರಿಗೆ ಯಾವುದೇ ತಾತ್ಕಾಲಿಕ ಪರಿಹಾರವನ್ನು ನೀಡುವ ಅಧಿಕಾರವಿದೆಯೇ ;

೧೯೯೧ರ ಆಗಸ್ಟ್ ಮತ್ತು ಸೆಪ್ಟೆಂಬರ್ ತಿಂಗಳಲ್ಲಿ ಸರ್ವೋಚ್ಚ ನ್ಯಾಯಾಲಯವು ಸಂಬಂಧಿತ ರಾಜ್ಯಗಳ ವಿಚಾರಣೆ ನಡೆಸಿ ೨೨.೧೧.೧೯೯೧ರಂದು ಮೇಲೆ ಕೇಳಿದ ಪ್ರಶ್ನೆಗಳಿಗೆ ಸಂಬಂಧಿಸಿದಂತೆ ಸರ್ವೋಚ್ಚ ನ್ಯಾಯಾಲಯ ಕೆಳಕಂಡಂತೆ ಅಭಿಪ್ರಾಯ ನೀಡಿತು.

೧. ೨೫.೭.೯೧ರಂದು ಕರ್ನಾಟಕದ ರಾಜ್ಯಪಾಲರು ಹೊರಡಿಸಿದ ಕಾವೇರಿ ಕಣಿವೆ ಪ್ರದೇಶ ನೀರಾವರಿಗಳ ಸಂರಕ್ಷಣಾ ಸುಗ್ರೀವಾಜ್ಞೆ ೧೯೯೧ ಶಾಸಕಾಂಗದ ವ್ಯಾಪ್ತಿಗೆ ಬರುವುದಿಲ್ಲವಾದ್ದರಿಂದ ಅದು ಸಂವಿಧಾನದ ತತ್ವಗಳಿಗೆ ವಿರುದ್ಧವಾಗಿದೆ.

೨. (೧) ನ್ಯಾಯ ಪಂಚಾಯ್ತಿಯು ಜೂನ್ ೨೫, ೧೯೯೧ ಹೊರಡಿಸಿದ ಮಧ್ಯಂತರ ಆಜ್ಞೆಯು ೧೯೫೬ರ ಅಂತರರಾಜ್ಯ ಜಲವಿವಾದ ಕಾಯ್ದೆಯ ೫(೨) ಪ್ರಕರಣದ ಅರ್ಥವ್ಯಾಪ್ತಿಯೊಳಗೆ ಆ ನ್ಯಾಯ ಪಂಚಾಯ್ತಿ ವರದಿಯ ಹಾಗೂ ನಿರ್ಣಯದ ಒಂದು ಭಾಗವಾಗಿರುತ್ತದೆ.

(೨) ಆದುದರಿಂದ ಈ ಆದೇಶವನ್ನು ಜಾರಿಗೊಳಿಸುವಂತೆ ಅನುವು ಮಾಡಿಕೊಡಲು ಅದನ್ನು ಕಾಯ್ದೆಯ ೬ನೇ ಪ್ರಕರಣದ ಮೇರೆಗೆ ಭಾರತ ಸರ್ಕಾರದ ರಾಜ್ಯ ಪತ್ರದಲ್ಲಿ ಭಾರತ ಸರ್ಕಾರ ಮುದ್ರಿಸುವ ಅಗತ್ಯವಿದೆ.

೩. ಜಲವಿವಾದ ಇತ್ಯರ್ಥಕ್ಕೆ ರಚಿತವಾದ ಯಾವುದೇ ನ್ಯಾಯ ಪಂಚಾಯ್ತಿಗೆ ಕೇಂದ್ರ ಸರ್ಕಾರ ಪರಿಹಾರಕ್ಕೆ ಆದೇಶ ನೀಡಬೇಕೆಂದು ಕೇಳಿದರೆ ಯಾವುದೇ ಬಗೆಯ ತಾತ್ಕಾಲಿಕ ಪರಿಹಾರ ನೀಡಲು ಅಧಿಕಾರವಿದೆ.

೩. ತಾತ್ಕಾಲಿಕ ಪರಿಹಾರದ ಬಗ್ಗೆ ಕೇಂದ್ರ ಸರ್ಕಾರ ಕೇಳದೇ ಇದ್ದರೆ ನ್ಯಾಯ ಪಂಚಾಯ್ತಿಯು ತಾತ್ಕಾಲಿಕ ಪರಿಹಾರ ನೀಡುವ ಅಧಿಕಾರವಿದೆಯೇ ಎಂಬ ಪ್ರಶ್ನೆ ಪ್ರಸ್ತುತ ಸಂದರ್ಭದಲ್ಲಿ ಉದ್ಭವವಾಗದು. ಆದುದರಿಂದ ಈ ಪ್ರಶ್ನೆಗೆ ಉತ್ತರ ಅಗತ್ಯವಿಲ್ಲ.

**ಅಂತರ ರಾಜ್ಯ ಜಲವಿವಾದ ಕಾಯ್ದೆಯ ೫(೩)ನೇ ಪ್ರಕರಣದ ಮೇರೆಗೆ ಪರಾಮರ್ಶೆಗಾಗಿ ಕೋರಿಕೆ :** ರಾಷ್ಟ್ರಪತಿಯವರ ಕೋರಿಕೆಯ ಮೇರೆಗೆ ನ್ಯಾಯ ಪಂಚಾಯ್ತಿಯ ಹೊರಡಿಸಿದ ಮಧ್ಯಂತರ ಆದೇಶದ ಬಗ್ಗೆ ಸರ್ವೋಚ್ಚ ನ್ಯಾಯಾಲಯ ತನ್ನ ಅಭಿಪ್ರಾಯವನ್ನು ನೀಡಿದ ನಂತರ ೨೫-೬-೧೯೯೧ರ ನ್ಯಾಯ ಪಂಚಾಯ್ತಿಯ ಆದೇಶದ ಬಗ್ಗೆ ಅಂತರರಾಜ್ಯ ಜಲ ವಿವಾದ ಕಾಯ್ದೆ ೫ (೩) ನೇ ಪ್ರಕರಣದ ಮೇರೆಗೆ ಸ್ಪಷ್ಟೀಕರಣ ಕೋರಿ ೨೫-೧೧-೯೧ರಂದು ನ್ಯಾಯಪಂಚಾಯ್ತಿಗೆ ಕರ್ನಾಟಕವು ಅರ್ಜಿ ಸಲ್ಲಿಸಿತು. ಇದು ೭-೧-೯೨ರಂದು ವಿಚಾರಣೆಗೆ ಬಂದಿತು.

**ಮಧ್ಯಂತರ ಆದೇಶದ ಬಗ್ಗೆ ಕರ್ನಾಟಕದ ಕೋರಿರುವ ಪ್ರಮುಖ ಸ್ಪಷ್ಟೀಕರಣಗಳು ಈ ಕೆಳಗಿನಂತಿದ್ದವು :**
೧. ನದಿ ನೀರಿನ ಸರಾಸರಿಯು ಪ್ರಸಕ್ತ ವರ್ಷಕ್ಕೆ ನಿಕಟಪೂರ್ವದ ವರ್ಷಗಳನ್ನು ಆಧರಿತವಾಗಿರಬೇಕೇ ಹೊರತು ಹತ್ತು ವರ್ಷಗಳ ಮೇಲಲ್ಲ. ಹಾಗಾದಾಗ ೨೦೫ ಟಿ.ಎಂ.ಸಿ. ನೀರು ಪ್ರಮಾಣ ಬದಲಾವಣೆಯಾಗಬೇಕಾಗುತ್ತದೆ.
೨. ನದಿ ನೀರಿನ ಹರಿವಿಗೂ ಬಿಡುಗಡೆ ಮಾಡಬೇಕಾದ ನೀರಿಗೂ ಪರಸ್ಪರ ಹೊಂದಾಣಿಕೆ ಏರ್ಪಡಿಸುವ ಅಗತ್ಯವಿದೆ.
೩. ಬಿಡಬೇಕಾದ ನೀರಿನ ಪ್ರಮಾಣವನ್ನು ನಿಖರವಾಗಿ ನಿರ್ಧರಿಸಿದ ಮೇಲೆ ಕರ್ನಾಟಕದ ನೀರಾವರಿ ಅಭಿವೃದ್ಧಿ ಮೇಲೆ ಹೇರುವ ನಿರ್ಬಂಧವನ್ನು ತೆಗೆದು ಹಾಕಬೇಕಾಗುತ್ತದೆ.

**ನ್ಯಾಯ ಪಂಚಾಯ್ತಿಯಿಂದ ಕರ್ನಾಟಕ ಕೋರಿರುವ ಪರಿಹಾರಗಳು ಇಂತಿವೆ :**

ಅ) ಇದುವರೆವಿಗೂ ಲಭ್ಯವಿರುವ ಮಾಹಿತಿಗಳನ್ನು ಆಧರಿಸಿ ಕಾವೇರಿ ಕಣಿವೆ ಪ್ರದೇಶದಲ್ಲಿ ಲಭ್ಯವಿರುವ ನೀರನ್ನು ಸೂಕ್ತವಾಗಿ ಮತ್ತು ನ್ಯಾಯಯುತವಾಗಿ ನಿರ್ಧರಿಸಬೇಕು.

ಆ) ಗೃಹಬಳಕೆ ಮತ್ತು ಕೈಗಾರಿಕಾ ಬಳಕೆಯೂ ಸೇರಿದಂತೆ ಕರ್ನಾಟಕ ರಾಜ್ಯಕ್ಕೆ ಕನಿಷ್ಠ ೪೬೫ ಟಿ.ಎಂ.ಸಿ. ನೀರನ್ನು ಹಂಚಬೇಕು.

ಇ) ೧೮೯೨, ೧೯೨೪ ಮತ್ತು ೧೯೭೪ರ ಆರೋಪಿತ ಒಪ್ಪಂದಗಳನ್ನು ರದ್ದು ಪಡಿಸಿ ಕಾವೇರಿ ಕಣಿವೆಯ ನೀರನ್ನು ಸಮಾನವಾಗಿ ಹಂಚಬೇಕು.

ಈ) ರಾಜ್ಯಗಳ ನಡುವೆ ನೀರನ್ನು ಸಮಾನವಾಗಿ ಹಂಚುವಾಗ ತಮಿಳುನಾಡಿನ ನದಿ ಮುಖಜಭೂಮಿಯಲ್ಲಿ ದೊರೆಯುವ ಅಪಾರ ಅಂತರ್ಜಲ ಹಾಗೂ ಲಭ್ಯವಿರುವ ಇತರ ಜಲಸಂಪನ್ಮೂಲಗಳನ್ನೂ ಪರಿಗಣಿಸಬೇಕು.

ಉ) ನೀರಾವರಿಗಾಗಲಿ ಅಥವಾ ವಿದ್ಯುತ್ ಉತ್ಪಾದನೆಗಾಗಲಿ, ಕಣಿವೆ ಪ್ರದೇಶದಿಂದ ಆಚೆಗೆ ನೀರನ್ನು ಬಿಡಬಾರದೆಂದು ರಾಜ್ಯಗಳಿಗೆ ನಿರ್ದೇಶಿಸಬೇಕು.

ಊ) ಆಯಾ ರಾಜ್ಯಗಳಲ್ಲಿ ಹೊಸಯೋಜನೆಗಳ ಮೂಲಕ ವಿದ್ಯುತ್ ಉತ್ಪಾದಿಸಲು ಅಥವಾ ಯೋಜನೆಯೊಂದು ಒಂದಕ್ಕಿಂತಲೂ ಹೆಚ್ಚು ರಾಜ್ಯಗಳ ಪ್ರದೇಶದಲ್ಲಿದ್ದರೆ ಸಂಬಂಧಪಟ್ಟ ರಾಜ್ಯಗಳ ಪರಸ್ಪರ ಒಪ್ಪಂದದ ಮೂಲಕ ವಿದ್ಯುತ್ ಉತ್ಪಾದಿಸಲು ಈಗ ಇರುವ ಅಥವಾ ಪ್ರಸ್ತಾವಿತ ನೀರಾವರಿ ಯೋಜನೆಗಳಿಗೆ ಧಕ್ಕೆಯಾಗದಂತೆ ಕಾವೇರಿ ಮತ್ತು ಅದರ ಉಪನದಿಗಳ ನೀರನ್ನು ಬಳಸಿಕೊಳ್ಳಲು ರಾಜ್ಯಗಳಿಗೆ ಅವಕಾಶ ನೀಡಬೇಕು.

ಋ) ಯಾವುದೇ ರಾಜ್ಯದ ಯೋಜನೆಯು ಇತರ ರಾಜ್ಯದ ಪ್ರದೇಶದ ಮುಳುಗಡೆಗೆ ಕಾರಣವಾಗದಂತೆ ನಿರ್ದೇಶಿಸಬೇಕು.

ೠ) ಪ್ರತಿ ರಾಜ್ಯಗಳಿಗೆ ನೀರನ್ನು ಹಂಚಿದ ಮೇಲೆ ಕಾವೇರಿ ಕಣಿವೆ ಪ್ರದೇಶದಲ್ಲಿನ ಕರ್ನಾಟಕ ಯೋಜನೆಗಳಿಗೆ ಅನುಮತಿ ನೀಡುವಂತೆ ಹಾಗೂ ಅದಕ್ಕೆ ಸಂಬಂಧಿಸಿದ ಎಲ್ಲಾ ಪರಿಹಾರಗಳನ್ನು ಒದಗಿಸುವಂತೆ ಕೇಂದ್ರ ಸರ್ಕಾರಕ್ಕೆ ಆದೇಶಿಸಬೇಕು.

ಎ) ಕರ್ನಾಟಕದ ಮೊಕದ್ದಮೆಗೆ ಸಂಬಂಧಿಸಿದ ಇನ್ನಿತರೆ ನ್ಯಾಯೋಚಿತ ಪರಿಹಾರಗಳನ್ನು ನೀಡಬೇಕು ಮತ್ತು

ಏ) ಕರ್ನಾಟಕದ ನ್ಯಾಯಾಲಯ ಖರ್ಚುಗಳನ್ನು ಭರಿಸಬೇಕು.

**ರಾಜ್ಯಪತ್ರದಲ್ಲಿ ನ್ಯಾಯ ಪಂಚಾಯ್ತಿ ಆದೇಶ ಪ್ರಕಟಣೆ :** ಅಂತರರಾಜ್ಯ ಜಲವಿವಾದ ಕಾಯ್ದೆಯನ್ವಯ ನ್ಯಾಯ ಪಂಚಾಯ್ತಿಯ ೨೫-೬-೧೯೯೧ರ ಆದೇಶವನ್ನು ರಾಜ್ಯ ಪತ್ರದಲ್ಲಿ ೧೧-೧೨-೧೯೯೧ರಂದು ಬೆಳಗ್ಗೆ ಪ್ರಕಟಿಸಿರುವುದಾಗಿ ಕೇಂದ್ರ ಜಲ ಸಂಪನ್ಮೂಲ ಸಚಿವರು ಲೋಕಸಭೆಗೆ ತಿಳಿಸಿದರು.

ಕೇಂದ್ರ ಸರ್ಕಾರವು ಮಧ್ಯಂತರ ಆದೇಶವನ್ನು ರಾಜ್ಯಪತ್ರದಲ್ಲಿ ಪ್ರಕಟಿಸಿತು. ಮಧ್ಯಂತರ ಆದೇಶವು ಪಾಲಿಸಲಾಗದಂತಹುದೆಂದು ರಾಜ್ಯ ಸರ್ಕಾರವು ನ್ಯಾಯ ಪಂಚಾಯ್ತಿಗೆ ಮನವಿ ಸಲ್ಲಿಸಿದಾಗ ನೀರಿನ ಹರಿವು ಕಡಿಮೆಯಾದಾಗ 'ಪ್ರೋರೇಟಾ' ಹೊಂದಾಣಿಕೆ ಮಾಡಿಕೊಳ್ಳಬಹುದೆಂದು ನ್ಯಾಯ ಪಂಚಾಯ್ತಿಯು ತಿಳಿಸಿತು. ಸರ್ವೋನ್ನತ ನ್ಯಾಯಾಲಯದ ಸೂಚನೆಯ ಮೇರೆಗೆ ನ್ಯಾಯ ಪಂಚಾಯ್ತಿಯ ಮಧ್ಯಂತರ ಆದೇಶ ಜಾರಿಯ ಮೇಲ್ವಿಚಾರಣೆಗೆ ಕೇಂದ್ರ ಸರ್ಕಾರ ೧೯೯೭ ರಲ್ಲಿ ತಜ್ಞರು ಮತ್ತು ಅಧಿಕಾರಿಗಳನ್ನೊಳಗೊಂಡ ಕಾವೇರಿ ಕಣಿವೆ ಪ್ರಾಧಿಕಾರ ರಚಿಸಲು ಮುಂದಾಯಿತು. ಅದರ ಫಲವಾಗಿ ಕಾವೇರಿ ನದಿ ಪ್ರಾಧಿಕಾರದ ರಚನೆಯಾಯಿತು. ಪ್ರಧಾನ ಮಂತ್ರಿಯವರು ಅಧ್ಯಕ್ಷರಾಗಿರುವ ಕಾವೇರಿ ನದಿ ಪ್ರಾಧಿಕಾರದಲ್ಲಿ ಕಾವೇರಿ ಕಣಿವೆಯ ಎಲ್ಲಾ ನಾಲ್ಕು ರಾಜ್ಯಗಳ ಮುಖ್ಯಮಂತ್ರಿಗಳು ಸದಸ್ಯರಾಗಿರುತ್ತಾರೆ. ಪ್ರಾಧಿಕಾರಕ್ಕೆ ನೆರವಾಗಲು ಕೇಂದ್ರ ಜಲಸಂಪನ್ಮೂಲ ಇಲಾಖೆಯ ಕಾರ್ಯದರ್ಶಿಗಳ ಅಧ್ಯಕ್ಷತೆಯ ಉಸ್ತುವಾರಿ ಸಮಿತಿ ಕೆಲಸ ಮಾಡುವ ವ್ಯವಸ್ಥೆ ರೂಪುಗೊಂಡಿತು.

೨೦೦೨-೨೦೦೩ನೇ ಸಾಲಿನ ನೈಋುತ್ಯ ಮಾರುತವು (ಸೌತ್ ವೆಸ್ಟ್ ಮಾನ್‌ಸೂನ್) ಬಹುತೇಕ ವಿಫಲಗೊಂಡು, ಮಳೆರಾಯನ ಪೂರ್ಣ ಅವಕೃಪೆಯಿಂದಾಗಿ, ರಾಜ್ಯದಾದ್ಯಂತ ತೀವ್ರ ಅಭಾವ ಪರಿಸ್ಥಿತಿ ಉದ್ಭವವಾಯಿತು. ಅದರ ಜೊತೆಗೆ, ಕಾವೇರಿ ಜಲಾನಯನ ಪ್ರದೇಶದ ಬಹುತೇಕ ಅಣೆಕಟ್ಟುಗಳಲ್ಲಿ (ಕೆ.ಆರ್.ಎಸ್ ಅಣೆಯೂ ಸೇರಿದಂತೆ)ನೀರಿನ ಸಂಗ್ರಹಣೆ, ಅತ್ಯಂತ ಕೆಳಮಟ್ಟಕ್ಕೆ ಕುಸಿದು ರೈತ ಸಮುದಾಯಕ್ಕೆ ತೀವ್ರ ಆತಂಕವನ್ನು ಉಂಟುಮಾಡಿತು. ಈ ಕಠಿಣ ಪರಿಸ್ಥಿತಿಯ ಜೊತೆಗೆ ಹುಣ್ಣಿನ ಬರೆ ಮೇಲೆ ಎಳೆದಂತೆ, ನೆರೆಯ ತಮಿಳ್ನಾಡು ಸರ್ಕಾರವು ತಮಿಳುನಾಡಿನ ಕಾವೇರಿ ನದಿಯ ಕೆಳ ಬಯಲಿನಲ್ಲಿ ಬೆಳೆದು ನಿಂತಿರುವ ಸಾಂಬಾ ಬೆಳೆಗೆ ಅಗತ್ಯವಿರುವ ನೀರನ್ನು ಪೂರೈಸುವಂತೆ ಕರ್ನಾಟಕ ರಾಜ್ಯ ಸರ್ಕಾರವನ್ನು ಒತ್ತಾಯಿಸಿತು. ಈ ಸಂಬಂಧ ಕಾವೇರಿ ನದಿ ಪ್ರಾಧಿಕಾರ ವಿಳಂಬ ನೀತಿ ಅನುಸರಿಸುತ್ತಿದೆ ಎಂದು ತಕರಾರು ಮಾಡಿ ಸರ್ವೋಚ್ಚ ನ್ಯಾಯಾಲಯವು ಮಧ್ಯ ಪ್ರವೇಶಿಸಿ ನ್ಯಾಯ ದೊರಕಿಸಿಕೊಡುವಂತೆ ಅರ್ಜಿ ಸಲ್ಲಿಸಿತು. ಸರ್ವೋನ್ನತ ನ್ಯಾಯಾಲಯದಲ್ಲಿ ಈ ಬಗ್ಗೆ ವಿಚಾರಣೆ ನಡೆದು ದಿನಾಂಕ ೩-೯-೨೦೦೨ರ ಆದೇಶದಲ್ಲಿ ರಾಜ್ಯವು ತನ್ನ ಜಲಾಶಯಗಳಿಂದ ನೀರು ಬಿಟ್ಟು ಮೆಟ್ಟೂರು ಜಲಾಶಯದಲ್ಲಿ ಪ್ರತಿ ದಿನ ೧.೨೫ ಟಿ.ಎಂ.ಸಿ ನೀರು ಲಭ್ಯವಾಗುವಂತೆ ನೋಡಿಕೊಳ್ಳಬೇಕೆಂದು ಮತ್ತು ಈ ಸಂಬಂಧ ಕಾವೇರಿ ಪ್ರಾಧಿಕಾರ ಕೈಗೊಳ್ಳುವ ತೀರ್ಮಾನವೇ ಅಖೈರಾಗಿದ್ದು, ಅದು ಜಾರಿಗೊಳ್ಳುತ್ತಿದ್ದಂತೆ ತಮ್ಮ ಆದೇಶ ಅಂದರೆ ಸರ್ವೋಚ್ಚ ನ್ಯಾಯಾಲಯದ ಈ ಆದೇಶವು ಸ್ಥಗಿತಗೊಳ್ಳುವುದೆಂದೂ ಸ್ಪಷ್ಟಪಡಿಸಿತು. ಅದರಂತೆ, ಕಾವೇರಿ ಜಲಾನಯನ ಪ್ರದೇಶದ ರೈತರ ವಿರೋಧದ ನಡುವೆಯೂ ನೀರು ಬಿಟ್ಟ ರಾಜ್ಯ ಸರ್ಕಾರವು ಜೊತೆಜೊತೆಯಲ್ಲೇ ಕಾವೇರಿ ನದಿ ಪ್ರಾಧಿಕಾರವನ್ನು ಸಭೆ ಸೇರಿಸುವ ನಿಟ್ಟಿನಲ್ಲೂ ಯತ್ನಿಸಿತು. ತತ್ಪರಿಣಾಮವಾಗಿ ದಿನಾಂಕ ೮-೯-೨೦೦೨ರಂದು ಪ್ರಧಾನಮಂತ್ರಿಗಳ ಅಧ್ಯಕ್ಷತೆಯಲ್ಲಿ ನಡೆದ ಕಾವೇರಿ ನದಿ ಪ್ರಾಧಿಕಾರದ ಸಭೆಯಲ್ಲಿ ರಾಜ್ಯವು ಪ್ರತಿನಿತ್ಯ ೯,೦೦೦ ಕ್ಯೂಸೆಕ್ ನೀರನ್ನು ವಾರದ ಸರಾಸರಿ ಆಧಾರದ ಮೇಲೆ ಸೆಪ್ಟೆಂಬರ್-ಅಕ್ಟೋಬರ್ ತಿಂಗಳುಗಳಲ್ಲಿ ಮೆಟ್ಟೂರು ಜಲಾಶಯಕ್ಕೆ ಲಭಿಸುವಂತೆ, ಪೂರೈಸಬೇಕೆಂದು ತಾತ್ಕಾಲಿಕ ಆದೇಶ ನೀಡಿತು.

ಆದರೆ ಕಾವೇರಿ ಪ್ರಾಧಿಕಾರದ ಈ ಸೂಚನೆಯನ್ನು ರಾಜ್ಯ ಸರ್ಕಾರವು ಜಾರಿಗೆ ತರುವ ಮೊದಲೇ, ಅದನ್ನು ವಿರೋಧಿಸಿ ಕಾವೇರಿ ಜಲಾನಯನ ಪ್ರದೇಶದ ರೈತರು ಚಳವಳಿ ಹೂಡಿ, ತಮಿಳುನಾಡಿಗೆ ನೀರು ಬಿಟ್ಟರೆ, ಅಣೆಕಟ್ಟೆಗೆ ಬಿದ್ದು ಆತ್ಮಾರ್ಪಣೆ ಮಾಡಿಕೊಳ್ಳುವುದಾಗಿ ಘೋಷಿಸಿ, ಕೃಷ್ಣರಾಜಸಾಗರ, ಕಬಿನಿ ಮುಂತಾದ ಅಣೆಕಟ್ಟೆಗಳಿಗೆ ಹೋಗಿ ನಿರಶನ ಹೂಡಿದರು. ತತ್ಪರಿಣಾಮವಾಗಿ ಗಂಭೀರ ಪರಿಸ್ಥಿತಿ ಉದ್ಭವಿಸಿತು. ಕಬಿನಿ

ಜಲಾಶಯದಲ್ಲಿ ನೀರು ಬಿಟ್ಟಿದ್ದನ್ನು ವಿರೋಧಿಸಿ ನೀರಿಗೆ ಧುಮುಕಿದ ನಾಲ್ವರಲ್ಲಿ ಗುರುಸ್ವಾಮಿ ಎಂಬ ರೈತ ಅಸು ನೀಗಿದಾಗ ಪರಿಸ್ಥಿತಿ ಮತ್ತಷ್ಟು ಉಲ್ಬಣಗೊಂಡು, ರಾಜ್ಯ ಸರ್ಕಾರವು ತೀವ್ರ ಬಿಕ್ಕಟ್ಟಿಗೆ ಸಿಲುಕಿ ಕಂಗಾಲಾಗಿದ್ದಾಗ, ನೀರು ಬಿಡುವಲ್ಲಿ ಕರ್ನಾಟಕ ಸರ್ಕಾರವು ಅನಗತ್ಯವಾಗಿ ವಿಳಂಬ ನೀತಿ ಅನುಸರಿಸುವ ಮೂಲಕ, ಸರ್ವೋಚ್ಚ ನ್ಯಾಯಾಲಯದ ಹಾಗೂ ಕಾವೇರಿ ಪ್ರಾಧಿಕಾರದ ಆದೇಶಗಳನ್ನು ಕಡೆಗಣಿಸುತ್ತಿದೆ ಎಂದು ಆರೋಪಿಸಿ, ಕರ್ನಾಟಕ ಸರ್ಕಾರದ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವಂತೆ ಕೋರಿ ತಮಿಳುನಾಡು ಸರ್ಕಾರವು ನ್ಯಾಯಾಲಯ ನಿಂದನಾ ಅರ್ಜಿಯನ್ನು ಸಲ್ಲಿಸಿತು. ತತ್ಪರಿಣಾಮವಾಗಿ ಕೇಂದ್ರ ಹಾಗೂ ರಾಜ್ಯ ಎರಡೂ ಸರ್ಕಾರಗಳ ವಾದವನ್ನು ಆಲಿಸಿದ ನ್ಯಾಯಾಲಯವು, ಎರಡೂ ರಾಜ್ಯಗಳ ಕಾವೇರಿ ಜಲಾನಯನ ಪ್ರದೇಶದ ಅಣೆಕಟ್ಟೆಗಳಿಗೆ ಭೇಟಿ ನೀಡಿ, ಸಮೀಕ್ಷೆ ನಡೆಸಿ, ಜಲಾಶಯಗಳಲ್ಲಿರುವ ನೀರಿನ ಮಟ್ಟದ ಬಗ್ಗೆ ತುರ್ತು ವರದಿ ಸಲ್ಲಿಸಲು ಸೂಚಿಸಿತು. ಅದರಂತೆ ನಾಲ್ಕೂ ರಾಜ್ಯದ (ಕರ್ನಾಟಕ, ತಮಿಳುನಾಡು, ಕೇರಳ ಹಾಗೂ ಪುದುಚೇರಿ) ಪ್ರತಿನಿಧಿಗಳನ್ನೊಳಗೊಂಡ ಕಾವೇರಿ ಉಸ್ತುವಾರಿ ಸಮಿತಿಯೂ ಎರಡೂ ರಾಜ್ಯಗಳಿಗೆ ಭೇಟಿ ನೀಡಿ ತನ್ನ ವರದಿಯನ್ನು ಸಲ್ಲಿಸಿತು. ಈ ನಡುವೆ ತಮಿಳುನಾಡು ಸರ್ಕಾರವು ಕರ್ನಾಟಕ ಸರ್ಕಾರದ ವಿರುದ್ಧ ಇನ್ನೊಂದು ನ್ಯಾಯಾಲಯ ನಿಂದನಾ ಅರ್ಜಿಯನ್ನು ಸಲ್ಲಿಸಿತು. ಉಸ್ತುವಾರಿ ಸಮಿತಿಯ ವರದಿಯನ್ನು ಪರಿಶೀಲಿಸಿದ ನ್ಯಾಯಾಲಯವು, ರಾಜ್ಯ ಸರ್ಕಾರದ ವಿರುದ್ಧ ತಮಿಳುನಾಡು ಸರ್ಕಾರ ಸಲ್ಲಿಸಿದ ನ್ಯಾಯಾಲಯ ನಿಂದನಾ ಅರ್ಜಿಯ ಪರಿಶೀಲನೆಯನ್ನು ಬದಿಗಿಟ್ಟು ಸರ್ವೋಚ್ಚ ನ್ಯಾಯಾಲಯ ಹಾಗೂ ಕಾವೇರಿ ಪ್ರಾಧಿಕಾರಿಗಳ ಅದೇಶವನ್ನು ಜಾರಿಗೊಳಿಸುವಲ್ಲಿ ವಿಫಲವಾಗಿರುವುದಕ್ಕಾಗಿ ವಿಷಾದ ವ್ಯಕ್ತಪಡಿಸಿ ಕರ್ನಾಟಕ ಸರ್ಕಾರಕ್ಕೆ ತಮಿಳುನಾಡಿಗೆ ನೀರು ಬಿಡುವಂತೆ ಸೂಚಿಸಿತು. ದಿನಾಂಕ ೨೮-೧೦-೨೦೦೨ರ ತನ್ನ ಆದೇಶದಲ್ಲಿ ನಿರ್ದೇಶನ ನೀಡಿದ ಸರ್ವೋನ್ನತ ನ್ಯಾಯಾಲಯವು, ನವೆಂಬರ್ ಒಂದರಿಂದ ಆರರವರೆಗೆ ಪ್ರತಿನಿತ್ಯ ೯,೦೦೦ ಕ್ಯೂಸೆಕ್ ಮತ್ತು ಏಳರಿಂದ ಹದಿನೈದರವರೆಗೆ ೬,೦೦೦ ಕ್ಯೂಸೆಕ್ ನೀರನ್ನು ತಮಿಳುನಾಡಿಗೆ ಬಿಡಲು ಆದೇಶಿಸಿತು. ಅಲ್ಲದೆ ನಂತರ ಕಾವೇರಿ ಪ್ರಾಧಿಕಾರದ ಆದೇಶದಂತೆ ನೀರನ್ನು ನಿಗದಿತ ಪ್ರಮಾಣದಲ್ಲಿ ಬಿಡಬೇಕೆಂದೂ ತಿಳಿಸಿತು. ಕಾವೇರಿ ನದಿ ಪ್ರಾಧಿಕಾರದ ಸಭೆಯನ್ನು ಶೀಘ್ರ ಕರೆದು ಸಮಸ್ಯೆಯನ್ನು ಬಗೆಹರಿಸಿಕೊಳ್ಳಬೇಕೆಂದು ಸೂಚಿಸಿತು. ಅಲ್ಲದೆ ಮುಂದಿನ ದಿನಗಳಲ್ಲಿ ಕರ್ನಾಟಕ ಸರ್ಕಾರವು ಈ ನಿಟ್ಟಿನಲ್ಲಿ ಅನುಸರಿಸುವ ಕ್ರಮವನ್ನು ಸೂಕ್ಷ್ಮವಾಗಿ ಗಮನಿಸಿದ ನಂತರ ರಾಜ್ಯ ಸರ್ಕಾರದ ವಿರುದ್ಧ ಇರುವ ನ್ಯಾಯಾಲಯ ನಿಂದನಾ ಅರ್ಜಿಯನ್ನು ಪರಿಶೀಲಿಸುವುದಾಗಿ ತಿಳಿಸಿತು. ತತ್ಪರಿಣಾಮವಾಗಿ ಕಾವೇರಿ ಜಲಾನಯನ ಪ್ರದೇಶದ ರೈತರ ಪ್ರಬಲ ವಿರೋಧ ಉಗ್ರ ಹೋರಾಟಗಳ ನಡುವೆಯೂ ಸರ್ವೋಚ್ಚ ನ್ಯಾಯಾಲಯದ ಆದೇಶದಂತೆ ತಮಿಳುನಾಡಿಗೆ ಕೃಷ್ಣರಾಜಸಾಗರದಿಂದ ಸಕಾರವು ನಿಗಧಿತ ಪ್ರಮಾಣದಲ್ಲಿ ನೀರನ್ನು ಹರಿಸಬೇಕಾಯಿತು.

ಕಾವೇರಿ ವಿವಾದಕ್ಕೆ ಸಂಬಂದಿಸಿದಂತೆ ನ್ಯಾಯಮಂಡಲಿಯು ತನ್ನ ಅಂತಿಮ ತೀರ್ಪನ್ನು ನೀಡಬೇಕಾಗಿದೆ.

## ತೋಟಗಾರಿಕೆ

ಜಿಲ್ಲೆಯಲ್ಲಿ ತೆಂಗಿನ ಬೆಳೆಯನ್ನು ಒಟ್ಟು ತೋಟಗಾರಿಕೆ ಬೆಳೆಗಳ ಶೇ.೫೨.೮೫ ರಷ್ಟು ಹಾಗೂ ಮಾವಿನ ಬೆಳೆಯನ್ನು ಶೇ.೭.೬೫ ರಷ್ಟು ಪ್ರದೇಶದಲ್ಲಿ ಬೆಳೆಯಲಾಗುತ್ತಿದೆ. ನಾಗಮಂಗಲ, ಕೃಷ್ಣರಾಜಪೇಟೆ, ಮದ್ದೂರು ಮತ್ತು ಮಂಡ್ಯ ತಾಲೂಕುಗಳು, ಒಟ್ಟು ತೆಂಗಿನ ಬೆಳೆಯ ವಿಸ್ತೀರ್ಣದ ಶೇ.೭೨ ರಷ್ಟು ಪ್ರದೇಶವನ್ನು ಹೊಂದಿವೆ. ತರಕಾರಿ ಬೆಳೆಗಳನ್ನು ಪ್ರಮುಖವಾಗಿ ನಾಗಮಂಗಲ, ಪಾಂಡವಪುರ, ಕೃಷ್ಣರಾಜಪೇಟೆ ಮತ್ತು ಮಳವಳ್ಳಿ ತಾಲೂಕುಗಳಲ್ಲಿ ಬೆಳೆಯಲಾಗುತ್ತದೆ. ವಾಣಿಜ್ಯ ಪುಷ್ಪ ಬೆಳೆಗಳಲ್ಲಿ ಸೇವಂತಿಗೆ, ಕನಕಾಂಬರ ಹಾಗೂ ಮಲ್ಲಿಗೆ ಹೂ ಬೆಳೆಗಳು ಪ್ರಮುಖವಾಗಿದ್ದು ಅವುಗಳ ಬೇಸಾಯವು ಕೃಷ್ಣರಾಜಪೇಟೆ, ಮಳವಳ್ಳಿ ಹಾಗೂ ಪಾಂಡವಪುರ ತಾಲೂಕುಗಳಲ್ಲಿ ಕೇಂದ್ರೀಕೃತವಾಗಿದೆ. ಒಟ್ಟು ತೋಟಗಾರಿಕೆ ಬೆಳೆಗಳ ಉತ್ಪನ್ನದಲ್ಲಿ ಟೊಮ್ಯಾಟೋ ಬೆಳೆಯ ಪಾಲು ಶೇ.೧೨.೦೭ ರಷ್ಟಾದರೆ ಬಾಳೆ ಶೇ.೧೧.೬೧, ಕುಂಬಳ ಜಾತಿ ತರಕಾರಿ ಶೇ.೯.೨೨ ಹಾಗೂ ಮಾವು ಶೇ.೯.೧೯

ರಷ್ಟು ಪಾಲನ್ನು ಪಡೆದಿವೆ. ಜಿಲ್ಲೆಯಲ್ಲಿರುವ ತೋಟಗಾರಿಕಾ ಕ್ಷೇತ್ರಗಳ ತಾಲೂಕುವಾರು ಪಟ್ಟಿಯನ್ನು ಮುಂದೆ ನೀಡಿದೆ.

| ಕ್ಷೇತ್ರ ವಿವರ | ಪ್ರಾರಂಭಿಸಿದ ವರ್ಷ | ವಿಸ್ತೀರ್ಣ (ಹೆಕ್ಟೇರುಗಳಲ್ಲಿ) |
|---|---|---|
| **ಅ. ಮಂಡ್ಯ ತಾಲೂಕು** | | |
| ೧. ಮಂಡ್ಯ ತೋಟಗಾರಿಕೆ ಕ್ಷೇತ್ರ | ೧೯೫೬–೫೭ | ೫.೬೦ |
| ೨. ಶಿವಳ್ಳಿ ತೋಟಗಾರಿಕೆ ಕ್ಷೇತ್ರ, ಮಂಡ್ಯ | – | ೪೪.೫೦ |
| ೩. ಪುರ ತೋಟಗಾರಿಕೆ ಕ್ಷೇತ್ರ ಮಂಡ್ಯ | ೧೯೮೨–೮೩ | ೫.೩೦ |
| **ಆ. ಮದ್ದೂರು ತಾಲೂಕು** | | |
| ೧. ಮದ್ದೂರು ತೋಟಗಾರಿಕೆ ಕ್ಷೇತ್ರ | ೧೯೪೨–೪೩ | ೧೭.೮೦ |
| ೨. ನವಿಲೆ ತೋಟಗಾರಿಕೆ ಕ್ಷೇತ್ರ | – | ೪.೦೦ |
| ೩. ಚಿಕ್ಕಅಂಕನಹಳ್ಳಿ ತೋಟಗಾರಿಕೆ ಕ್ಷೇತ್ರ | – | ೧೫.೪೦ |
| **ಇ. ಪಾಂಡವಪುರ ತಾಲೂಕು** | | |
| ೧. ಹಳೇಬೀಡು ತೋಟಗಾರಿಕಾ ಕ್ಷೇತ್ರ | ೧೯೬೫ | ೧೭.೮ |
| **ಈ. ಕೃಷ್ಣರಾಜಪೇಟೆ ತಾಲೂಕು** | | |
| ೧. ಶೀಳನೆರೆ ತೋಟಗಾರಿಕಾ ಕ್ಷೇತ್ರ | – | ೪೦.೦೧ |
| ೨.ಮುರುಕನಹಳ್ಳಿ ತೋಟಗಾರಿಕಾ ಕ್ಷೇತ್ರ | – | ೧೭.೮ |
| ೩. ನಾಯಕನಹಳ್ಳಿ ತೋಟಗಾರಿಕಾ ಕ್ಷೇತ್ರ | – | ೭೬.೯ |
| **ಉ. ನಾಗಮಂಗಲ ತಾಲೂಕು** | | |
| ೧. ಜವರನಹಳ್ಳಿ ತೋಟಗಾರಿಕಾ ಕ್ಷೇತ್ರ | ೧೯೬೨ | ೨೨.೩ |
| ೨. ಮಲ್ಲಸಂದ್ರ ಕಾವಲ್ ತೋಟಗಾರಿಕಾ ಕ್ಷೇತ್ರ | ೧೯೬೭ | ೩೫೯.೨ |
| ೩. ನಾಗಮಂಗಲ ಸಸ್ಯಾಗಾರ | – | ೦.೪ |
| **ಊ ಮಳವಳ್ಳಿ ತಾಲೂಕು** | | |
| ೧. ಮಳವಳ್ಳಿ ಸಸ್ಯಾಗಾರ | ೧೯೬೭–೬೮ | ೧.೩ |
| ೨. ಹಿಟ್ಟಿನಹಳ್ಳಿ ಕೊಪ್ಪಲು ಸಸ್ಯಾಗಾರ | ೧೯೯೪–೯೫ | ೧.೪ |
| ೩. ಪೂರಿಗಾಲಿ ತೋಟಗಾರಿಕೆ ಕ್ಷೇತ್ರ | ೧೯೮೬–೮೭ | ೭೩.೭ |

### ಕೋಷ್ಟಕ ೪.೧೬ ಜಿಲ್ಲೆಯ ತೋಟಗಾರಿಕಾ ಬೆಳೆಗಳ ವಿಸ್ತೀರ್ಣ ಹಾಗೂ ಉತ್ಪನ್ನಗಳ ವಿವರ

| | | ೧೯೯೪–೯೫ | ೧೯೯೫–೯೬ | ೧೯೯೬–೯೭ (ಅಂದಾಜು) | ೧೯೯೯–೨೦೦೦ |
|---|---|---|---|---|---|
| ಹಣ್ಣು | ವಿಸ್ತೀರ್ಣ (ಹೆಕ್ಟೇರ್‌ಗಳಲ್ಲಿ) | ೫,೬೪೭ | ೬,೪೯೬ | ೬,೭೨೦ | ೧೨,೦೦೫ |
| | ಉತ್ಪನ್ನ (ಟನ್ನುಗಳಲ್ಲಿ) | ೯೯,೯೬೬ | ೧,೨೦,೦೧೭ | ೧,೧೮,೯೧೫ | ೮೧,೬೬೭ |
| ತರಕಾರಿ | ವಿಸ್ತೀರ್ಣ (ಹೆಕ್ಟೇರ್‌ಗಳಲ್ಲಿ) | ೭,೩೯೨ | ೮,೩೬೯ | ೭,೮೬೬ | ೧೧,೧೦೫ |
| | ಉತ್ಪನ್ನ (ಟನ್ನುಗಳಲ್ಲಿ) | ೧,೬೩,೫೬೫ | ೧,೮೬,೧೮೨ | ೧,೭೭,೮೫೮ | ೧,೦೭,೧೫೩ |
| ತೋಟದ/ಸಾಂಬಾರು ಬೆಳೆ | ವಿಸ್ತೀರ್ಣ (ಹೆಕ್ಟೇರ್‌ಗಳಲ್ಲಿ) | ೨೩,೯೭೫ | ೨೫,೩೯೧ | ೨೬,೭೪೮ | ೩೪,೧೫೨ |
| | ಉತ್ಪನ್ನ* | ೧೫,೦೮೯ | ೧೭,೯೦೮ | ೨೦,೦೦೩ | ೩೧,೭೦೬ |
| ವಾಣಿಜ್ಯ ಪುಷ್ಪಗಳು | ವಿಸ್ತೀರ್ಣ | ೫೪೯ | ೮೯೦ | ೧,೦೫೪ | |
| | ೧,೧೧೭ | | | | |
| | ಉತ್ಪನ್ನ | ೨,೯೩೧ | ೫,೫೦೧ | ೬,೯೬೮ | ೧೦,೬೩೯ |
| ಒಟ್ಟು | ವಿಸ್ತೀರ್ಣ ಹೆಕ್ಟೇರ್‌ಗಳಲ್ಲಿ | ೩೭,೫೬೩ | ೪೧,೧೪೬ | ೪೨,೩೮೮ | |
| | ಉತ್ಪನ್ನ | ೨,೮೧,೫೫೧ | ೩೨,೯೬೦ | ೩,೨೩,೭೪೪ | |

* ತೆಂಗು, ಜಾಯಿಕಾಯಿ, ವಿಳ್ಯೆದೆಲೆ ಉತ್ಪಾದನೆ ಹೊರತುಪಡಿಸಿ ಉತ್ಪನ್ನವು ಟನ್‌ಗಳಲ್ಲಿ ಸೂಚಿತವಾಗಿವೆ.

ಆಧಾರ : ಕರ್ನಾಟಕ ರಾಜ್ಯದ ತೋಟಗಾರಿಕೆ ಬೆಳೆಗಳ ಅಂಕಿಅಂಶಗಳ ನೋಟ ೧೯೯೪–೯೫ ರಿಂದ ೧೯೯೬–೯೭

**ಕೋಷ್ಟಕ ೪.೧೭ ಜಿಲ್ಲೆಯ ತೋಟಗಾರಿಕೆ ಬೆಳೆಗಳ ವಿಸ್ತೀರ್ಣ (ಹೆಕ್ಟೇರುಗಳಲ್ಲಿ) ಮತ್ತು ಉತ್ಪನ್ನದ (ಟನ್ನುಗಳಲ್ಲಿ) ವಿವರಗಳು**

| | ೧೯೯೮–೯೯ | | ೧೯೯೯–೨೦೦೦ | |
|---|---|---|---|---|
| | ವಿಸ್ತೀರ್ಣ | ಉತ್ಪನ್ನ | ವಿಸ್ತೀರ್ಣ | ಉತ್ಪನ್ನ |
| ೧ | ೨ | ೩ | ೪ | ೫ |
| | | **ಹಣ್ಣಿನ ಬೆಳೆಗಳು** | | |
| ೧) ಮಾವು | ೪,೧೭೨ | ೪,೧೩೩ | ೫,೧೩೫ | ೨೦,೪೭೬ |
| ೨) ಬಾಳೆ | ೧,೧೭೭ | ೨೩,೪೫೬ | ೪,೩೨೬ | ೨೭,೧೭೭ |
| ೩) ಸೀಬೆ | ೪೧೮ | ೧,೮೯೨ | ೩೬೧ | ೩,೫೨೯ |
| ೪) ಸಪೋಟ | ೬೪೫ | ೬,೫೨೭ | ೮೦೧ | ೪,೬೬೪ |
| ೫) ನಿಂಬೆ | ೨೪೦ | ೩,೩೫೪ | – | – |
| ೬) ದಾಳಿಂಬೆ | ೧೭೪ | ೧,೪೫೨ | ೧೧೫ | ೮೧೩ |
| ೭) ಹಲಸು | ೫೫೭ | ೯,೧೪೦ | ೬೬೧ | ೯,೮೭೪ |
| ೮) ಪರಂಗಿ | ೨೬೯ | ೧೩,೪೫೦ | ೨೨೮ | ೫,೬೯೭ |
| ೯) ಬೋರೆ | ೬೦ | ೩೦೦ | ೭೧ | ೨,೯೪೮ |
| ೧೦) ಸೀತಾಫಲ | ೩೭ | ೭೨ | ೨೦ | ೧೬೩ |
| ೧೧) ಅಂಜೂರ | ೨೫ | ೧೦೦ | ೬ | ೯ |
| ೧೨) ಪನ್ನೇರಳೆ | ೨೮ | ೪೨ | ೯ | ೬ |
| ೧೩) ಕಲ್ಲಂಗಡಿ | – | – | ೨೨೦ | ೫,೭೬೦ |
| ೧೪) ಇತರೆ | ೬೪೩ | ೩,೨೦೫ | ೫೨ | ೫೫೧ |
| **ಒಟ್ಟು** | **೮,೪೪೫** | **೬೭,೧೨೩** | **೧೨,೦೦೫** | **೮೧,೬೬೭** |
| | | **ತರಕಾರಿ ಬೆಳೆಗಳು** | | |
| ೧) ಆಲೂಗಡ್ಡೆ | ೩೬ | ೨೮೮ | ೮೬ | ೮೧೬ |
| ೨) ಟೊಮ್ಯಾಟೊ | ೧,೬೧೫ | ೩೪,೦೧೧ | ೩,೦೧೬ | ೩೩,೬೦೯ |
| ೩) ಬದನೆ | ೯೪೫ | ೨೨,೦೨೫ | ೧,೪೪೧ | ೧೩,೪೫೦ |
| ೪) ಹುರಳಿಕಾಯಿ | ೫೮೩ | ೫,೮೩೦ | ೧,೧೦೨ | ೫,೮೭೪ |
| ೫) ಈರುಳ್ಳಿ | ೮೧೮ | ೧೨,೨೭೦ | ೭೯೫ | ೬,೮೪೫ |
| ೬) ಮರಗೆಣಸು | ೨೯೧ | ೨,೬೮೦ | ೧೧೦ | ೨,೫೪೫ |
| ೭) ಎಲೆಕೋಸು | ೭೪೬ | ೧೧,೧೯೦ | ೩೯೩ | ೪,೧೮೩ |
| ೮) ಬೆಂಡೆಕಾಯಿ | ೬೦೯ | – | ೭೭೭ | ೯,೯೭೯ |
| ೯) ಮೂಲಂಗಿ | ೫೦೬ | ೫,೦೬೦ | ೫೪೨ | ೪,೧೬೫ |
| ೧೦) ಬೀಟ್‌ರೂಟ್ | ೧೬ | ೧೬೦ | ೧೦ | ೮೩ |
| ೧೧) ಕೆಂಪು ಮೂಲಂಗಿ | ೨೯ | ೨೯೦ | ೨೦ | ೨೫೨ |
| ೧೨) ದಪ್ಪ ಮೆಣಸಿನಕಾಯಿ | ೨೮೦ | ೨,೯೫೦ | ೪೩೩ | ೬,೨೦೩ |
| ೧೩) ಕುಂಬಳ ಜಾತಿ | ೮೭೯ | ೧೭,೫೮೦ | ೧,೪೬೮ | ೧೩,೫೪೩ |
| ೧೪) ಇತರೆ | ೧,೧೮೫ | ೧೭,೭೭೫ | ೯೧೨ | ೫,೧೫೬ |
| **ಒಟ್ಟು** | **೮,೫೩೮** | **೧,೩೨,೧೦೯** | **೧೧,೧೦೫** | **೧,೦೭,೧೫೩** |

| ೧ | ೨ | ೩ | ೪ | ೫ |
|---|---|---|---|---|
| | | **ಸಾಂಬಾರು ಬೆಳೆಗಳು** | | |
| ೧) ಮೆಣಸು | ೨೬ | ೨೬ | ೭೬ | ೪೫೮ |
| ೨) ಹುಣಿಸೆ | ೭೬೭ | ೯,೧೯೨ | ೮೯೩ | ೩,೯೪೩ |
| ೩) ಶುಂಠಿ | ೫೩ | ೫೮೦ | ೧೫೦ | ೧,೧೨೨ |
| ೪) ಅರಿಶಿನ | ೧೭೩ | ೩,೪೭೩ | ೩೯೪ | ೪,೭೩೭ |
| ೫) ಬೆಳ್ಳುಳ್ಳಿ | ೧೬೫ | ೯೬೭ | ೩೬೮ | ೧,೮೯೧ |
| ೬) ಮೆಣಸಿನಕಾಯಿ | ೧,೨೩೭ | ೧೨,೩೮೦ | ೧,೦೮೮ | ೧೧,೦೫೫ |
| ೭) ದನಿಯಾ | ೧೫೨ | ೭೧ | ೧೮೫ | ೧,೫೮೫ |
| ೮) ಇತರೆ | ೭೦೪ | ೧,೦೫೬ | ೨೬ | ೯೧ |
| **ಒಟ್ಟು** | **೩,೨೭೭** | **೨೭,೭೪೫** | **೩,೧೮೦** | **೨೪,೫೮೨** |
| | | **ತೋಟದ ಬೆಳೆಗಳು** | | |
| ೧) ತೆಂಗು | ೨೬,೧೭೨ | ೨,೨೩೯ | ೨೯,೫೦೮ | ೪,೮೪೭ |
| ೨) ಅಡಿಕೆ | ೭೬೪ | ೭೬೪ | ೧,೦೨೮ | ೧,೬೮೯ |
| ೩) ವಿಳ್ಯೆದೆಲೆ | ೧೯೭ | ೧,೬೭೫ | ೫೬ | ೫೦೯ |
| ೪) ಕೋಕೋ | ೫೭ | – | ೮೬ | ೪೦ |
| ೫) ತಾಳೆ | ೨೬೩ | – | ೨೨೭ | ೨೬ |
| ೬) ಗೋಡಂಬಿ | ೯೯ | ೫೩ | ೬೭ | ೧೩ |
| **ಒಟ್ಟು** | **೨೭,೫೫೨** | **೮೧೭** | **೩೦,೯೭೨** | **೧,೭೬೮** |
| | | **ವಾಣಿಜ್ಯ ಪುಷ್ಪ ಬೆಳೆಗಳು** | | |
| ೧) ಗುಲಾಬಿ | ೧೭ | ೩೪ | ೧೬ | ೧೨೫ |
| ೨) ಮಲ್ಲಿಗೆ | ೧೫೨ | ೧೫೨ | ೧೫೭ | ೯೮೬ |
| ೩) ಸೇವಂತಿಗೆ | ೪೮೫ | ೪,೮೪೬ | ೨೪೧ | ೧,೮೦೪ |
| ೪) ಸುಗಂಧರಾಜ | ೪೦ | ೩ | ೬ | ೧೫೫ |
| ೫) ಆಸ್ಟರ್ | ೧೭ | ೧೬೯ | ೪೭ | ೪೬೦ |
| ೬) ಕನಕಾಂಬರ | ೧೭೩ | ೬೯೨ | ೧೮೧ | ೪೪೧ |
| ೭) ಚೆಂಡುಹೂ | ೮೪ | ೬೬೮ | ೫೧೭ | ೬,೮೯೦ |
| ೮) ಸಂಪಿಗೆ | ೧೧ | ೩ | ೩ | ೪೩ |
| ೯) ಇತರೆ | ೧೩೬ | ೨೭೨ | ೯ | ೩೦ |
| **ಒಟ್ಟು** | **೧,೧೧೫** | **೬,೮೩೯** | **೧,೧೭೭** | **೧೦,೬೩೯** |

ಆಧಾರ : ತೋಟಗಾರಿಕಾ ಇಲಾಖೆ, ಬೆಂಗಳೂರು.

ಸೂಚನೆ : ೧. ತೆಂಗು ಮತ್ತು ವಿಳ್ಯೆದೆಲೆ ಬೆಳೆಗಳ ವಿಸ್ತೀರ್ಣದಲ್ಲಿ ಒಟ್ಟು ತೋಟಗಾರಿಕೆ ಬೆಳೆಗಳ ವಿಸ್ತೀರ್ಣದಲ್ಲಿ ಸೇರಿಸಲಾಗಿದೆ. ೨. ತೆಂಗು (ಉತ್ಪನ್ನ ಲಕ್ಷ ಕಾಯಿಗಳಲ್ಲಿ) ಮತ್ತು ವಿಳ್ಯೆದೆಲೆ (ಉತ್ಪನ್ನ ಲಕ್ಷ ಎಲೆಗಳಲ್ಲಿ) ಬೆಳೆಗಳ ಉತ್ಪನ್ನವನ್ನು ಒಟ್ಟು ತೋಟಗಾರಿಕೆ ಬೆಳೆಗಳ ಉತ್ಪನ್ನದಲ್ಲಿ ಸೇರಿಸಿರುವುದಿಲ್ಲ.

## ಮೀನುಗಾರಿಕೆ

ಜಿಲ್ಲೆಯಲ್ಲಿ ಮೀನುಗಾರಿಕೆಗೆ ಸೂಕ್ತವಾದ ಜಲಸಂಪನ್ಮೂಲಗಳಿವೆ. ಸುಮಾರು ೭೫.೨ ಕಿ.ಮೀ. ದೂರ ಹರಿಯುವ ಕಾವೇರಿ, ೮೩.೨ ಕಿ.ಮೀ.ಹರಿಯುವ ಶಿಂಷಾ, ೮೯.೨ ಕಿ.ಮೀ. ಹರಿಯುವ ಲೋಕಪಾವನಿ, ೮೫.೨ ಕಿ.ಮೀ. ಹರಿಯುವ ಹೇಮಾವತಿ ಮತ್ತು ೩೨ ಕಿ.ಮೀ. ಹರಿಯುವ ವೀರವೈಷ್ಣವಿ ನದಿ, ಹೀಗೆ ಒಟ್ಟು ೨೮೯ ಕಿ.ಮೀ.ಉದ್ದದ ನದಿ ಜಲಸಂಪನ್ಮೂಲವನ್ನು ಜಿಲ್ಲೆಯು ಹೊಂದಿದೆ. ಮಳವಳ್ಳಿ ತಾಲೂಕಿನಲ್ಲಿ ೯೫ ಹೆಕ್ಟೇರು

ಜಲವಿಸ್ತೀರ್ಣದ ನೆಟ್ಕಲ್ ಜಲಾಶಯ, ೩೨೦ ಹೆಕ್ಟೇರು ಜಲವಿಸ್ತೀರ್ಣದ ಶಿವಸಮುದ್ರ ಜಲಾಶಯ, ೮೦ ಹೆಕ್ಟೇರು ಜಲವಿಸ್ತೀರ್ಣವುಳ್ಳ ಭೀಮಾ ಜಲಾಶಯ ಮತ್ತು ಶ್ರೀರಂಗಪಟ್ಟಣ ತಾಲೂಕಿನಲ್ಲಿರುವ ೧೨,೯೨೪ ಹೆಕ್ಟೇರು ಜಲವಿಸ್ತೀರ್ಣದ ಕೃಷ್ಣರಾಜಸಾಗರ ಜಲಾಶಯವು ಮೀನುಗಾರಿಕೆಗೆ ಉಪಯುಕ್ತವಾಗಿವೆ. ಮೀನುಗಾರಿಕೆಗೆ ಲಭ್ಯವಿರುವ ಕೆರೆಗಳ ವಿವರಗಳನ್ನು ಕೋಷ್ಟಕ ೪.೧೮ರಲ್ಲಿ ನೀಡಿದೆ.

**ಕೋಷ್ಟಕ ೪.೧೮ ಜಿಲ್ಲೆಯಲ್ಲಿ ಮೀನುಗಾರಿಕೆಗೆ ಲಭ್ಯವಿರುವ ಕೆರೆಗಳ ವಿವರ ೧೯೯೯**

| ತಾಲೂಕು | ದೊಡ್ಡಕೆರೆಗಳು | | | | ಸಣ್ಣಕೆರೆಗಳು (< ೧೦ ಹೆಕ್ಟೇರ್) | | ಒಟ್ಟು | |
|---|---|---|---|---|---|---|---|---|
| | ಜಿಲ್ಲಾ ಪಂಚಾಯತ್ ೧೦ಹೆಕ್ಟೇರ್‌ಗಿಂತ ಹೆಚ್ಚು ಮತ್ತು ೨೫ ಹೆಕ್ಟೇರ್‌ಗಳಿಗಿಂತ ಕಮ್ಮಿ | | ಇಲಾಖೆಯ ಕೆರೆಗಳು (> ೨೫ ಹೆಕ್ಟೇರ್) | | | | | |
| | ಸಂಖ್ಯೆ | ಜಲವಿಸ್ತೀರ್ಣ | ಸಂಖ್ಯೆ | ಜಲವಿಸ್ತೀರ್ಣ | ಸಂಖ್ಯೆ | ಜಲವಿಸ್ತೀರ್ಣ ಹೆಕ್ಟೇರ್ ಗಳಲ್ಲಿ | ಸಂಖ್ಯೆ | ಜಲವಿಸ್ತೀರ್ಣ ಹೆಕ್ಟೇರ್ ಗಳಲ್ಲಿ |
| ಮಂಡ್ಯ | ೩೦ | ೪೮೯ | ೩೪ | ೨,೩೦೩ | ೮೩ | ೧೮೫ | ೧೪೭ | ೨,೯೯೭ |
| ಮಳವಳ್ಳಿ | ೨೬ | ೩೯೮ | ೨೭ | ೧,೮೯೦ | ೬೯ | ೧೨೫ | ೧೨೨ | ೨,೪೧೩ |
| ಮದ್ದೂರು | ೨೯ | ೪೭೪ | ೪೩ | ೨,೮೦೫ | ೭೮ | ೧೫೫ | ೧೫೦ | ೩,೪೩೪ |
| ಶ್ರೀರಂಗಪಟ್ಟಣ | ೭ | ೮೨ | ೩ | ೨೧೮ | ೩೩ | ೬೪ | ೪೩ | ೩೬೪ |
| ನಾಗಮಂಗಲ | ೫೨ | ೭೦೩ | ೩೦ | ೨,೫೭೬ | ೭೭ | ೩೧೯ | ೧೫೯ | ೩,೫೯೮ |
| ಕೃಷ್ಣರಾಜಪೇಟೆ | ೩೧ | ೪೬೧ | ೨೦ | ೧,೧೪೪ | ೯೦ | ೩೩೦ | ೧೪೧ | ೧,೯೩೫ |
| ಪಾಂಡವಪುರ | ೨ | ೨೮ | ೯ | ೭೧೧ | ೭೩ | ೧೭೨ | ೮೪ | ೯೧೧ |
| **ಒಟ್ಟು** | **೧೭೭** | **೨,೬೩೫** | **೧೬೬** | **೧೧,೬೪೭** | **೫೦೩** | **೧೩೫೦** | **೮೪೬** | **೧೫,೬೫೨** |

ಜಿಲ್ಲೆಯಲ್ಲಿ ಭಾರತೀಯ ಗೆಂಡೆ ಮೀನು ಹಾಗೂ ಇತರೆ ಗೆಂಡೆ ಮೀನುಗಳನ್ನು ಸಾಕಲಾಗುತ್ತಿದೆ. ಭಾರತೀಯ ಗೆಂಡೆ ಮೀನುಗಳಲ್ಲಿ ೧.ಕಾಟ್ಲಾ ಮೀನು(ಕಾಟ್ಲಾ ಕಾಟ್ಲಾ), ೨. ರೋಹು ಮೀನು(ಲೇಬಿಯೋ ರೋಹಿತ್), ೩. ಮೃಗಾಲ್ ಮೀನು(ಸಿರೈನಸ್ ಮೃಗಾಲ್, ಹಾಗೂ ೪. ಹುಲ್ಲುಗೆಂಡೆ(ಟೇನೋಫೆರಿಂಗೊಡಾನ್ ಇಡೆಲ್ಲಾ), ಇತರೆ ಗೆಂಡೆ ಮೀನುಗಳಲ್ಲಿ ಸಾಮಾನ್ಯ ಗೆಂಡೆ(ಸಿಪ್ರಿನಸ್ ಕಾರ್ಪಿಯಾ) ತಳಿಗಳನ್ನು ಸಾಕಲಾಗುತ್ತಿದೆ.

ಜಿಲ್ಲೆಯಲ್ಲಿ ಸಕ್ರಿಯವಾಗಿ ಮೀನುಗಾರಿಕೆಯಲ್ಲಿ ತೊಡಗಿರುವವರ ಸಂಖ್ಯೆ ೭,೧೮೮ ಆಗಿದ್ದು, ಇವರುಗಳ ಪೈಕಿ ೯೮ ಜನ ಮಹಿಳೆಯರೂ ಸೇರಿರುತ್ತಾರೆ. ತಾಲೂಕುವಾರು ಒಟ್ಟು ಮೀನುಗಾರರ ವಿವರಗಳನ್ನು ಮುಂದಿನ ಕೋಷ್ಟಕ ೪.೧೯ ರಲ್ಲಿ ನೀಡಿದೆ.

**ಕೋಷ್ಟಕ ೪.೧೯ ಜಿಲ್ಲೆಯ ತಾಲೂಕವಾರು ಮೀನುಗಾರರ ಸಂಖ್ಯೆ**

| ತಾಲೂಕು | ಮೀನುಗಾರರ ಸಂಖ್ಯೆ | | |
|---|---|---|---|
| | ಪುರುಷರು | ಮಹಿಳೆಯರು | ಒಟ್ಟು |
| ಮಂಡ್ಯ | ೬,೩೮೮ | ೬,೧೩೭ | ೧೨,೫೨೫ |
| ಮದ್ದೂರು | ೭,೮೭೨ | ೭,೫೬೩ | ೧೫,೪೩೫ |
| ಮಳವಳ್ಳಿ | ೮,೭೮೦ | ೮,೪೩೪ | ೧೭,೨೧೪ |
| ನಾಗಮಂಗಲ | ೭,೪೭೪ | ೭,೧೮೦ | ೧೪,೬೫೪ |
| ಪಾಂಡವಪುರ | ೫,೮೭೧ | ೫,೪೪೪ | ೧೧,೩೧೫ |
| ಕೃಷ್ಣರಾಜಪೇಟೆ | ೫,೧೫೩ | ೪,೯೫೧ | ೧೦,೧೦೪ |
| ಶ್ರೀರಂಗಪಟ್ಟಣ | ೮,೧೨೭ | ೭,೮೦೮ | ೧೫,೯೩೫ |
| **ಒಟ್ಟು** | **೪೯,೬೬೫** | **೪೭,೫೧೭** | **೯೭,೧೮೨** |

ಕೇಂದ್ರ ಸರ್ಕಾರದ ಸಾಮೂಹಿಕ ಅಪಘಾತ ವಿಮಾ ಯೋಜನೆಯಡಿ ಮೀನು ಹಿಡಿಯುವಾಗ ಅಪಘಾತಕ್ಕೆ ಈಡಾದವರಿಗೆ ವಿಮಾ ಕಂತಿನ ಹಣವಾದ ತಲಾ ರೂ.೧೨ ಅನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ತಲಾ ಶೇಕಡ ೫೦:೫೦ ರ ಪ್ರಮಾಣದಲ್ಲಿ ಪ್ರತೀ ವರ್ಷ ದೆಹಲಿಯಲ್ಲಿರುವ ಮೀನುಗಾರಿಕೆ ಸಹಕಾರಿ ಸಂಘಗಳ ರಾಷ್ಟ್ರೀಯ ಮಂಡಳಿಗೆ ಪಾವತಿ ಮಾಡುತ್ತಿವೆ. ಈ ಯೋಜನೆಯಡಿ ಮರಣ ಹೊಂದಿದ ಮೀನುಗಾರನ ಕುಟುಂಬದವರಿಗೆ ಮತ್ತು ಖಾಯಂ ಆಗಿ ಅಂಗವಿಕಲರಾದವರಿಗೆ ರೂ ೩೫,೦೦೦ ಗಳನ್ನು ಭಾಗಶ: ಅಂಗವಿಕಲರಾದವರಿಗೆ ರೂ. ೧೭,೫೦೦ಗಳ ಪರಿಹಾರವನ್ನು ಕೊಡಲಾಗುವುದು. ಕೇಂದ್ರ ಸರ್ಕಾರದ ಮೀನುಗಾರರ ಕ್ಷೇಮಾಭಿವೃದ್ಧಿ ನಿಧಿಯಡಿ ನಿರ್ವಸತಿ ಮೀನುಗಾರರಿಗೆ ಉಚಿತವಾಗಿ ವಸತಿ ಸೌಲಭ್ಯ ಕಲ್ಪಿಸುವ ವ್ಯವಸ್ಥೆ ಜಾರಿಯಲ್ಲಿದೆ. ವಸತಿ ಸೌಲಭ್ಯದಡಿ ಕುಡಿಯುವ ನೀರಿನ ವ್ಯವಸ್ಥೆ ಮತ್ತು ಸಮುದಾಯ ಭವನವನ್ನು ನಿರ್ಮಿಸಲಾಗುತ್ತಿದೆ. ಪ್ರತಿ ಫಲಾನುಭವಿಗೆ ರೂ.೩೦,೦೦೦ ರಿಂದ ರೂ. ೩೫,೦೦೦ ಮೀರದಂತೆ ಶೇ.೧೦೦ರಷ್ಟು ನೆರವಿನೊಂದಿಗೆ ಮನೆಯನ್ನು ನಿರ್ಮಾಣ ಮಾಡಿಕೊಡಲಾಗುವುದು. ಜನವರಿ ೨೦೦೦ದವರೆಗೆ ಜಿಲ್ಲೆಯಲ್ಲಿ ೩೪೦ ಮನೆಗಳು ಮತ್ಸ್ಯ ಆಶ್ರಯ ಯೋಜನೆಯಡಿ ಮಂಜೂರಾತಿ ನೀಡಿದ್ದು ೩೧೮ ಮನೆಗಳ ನಿರ್ಮಾಣ ಪೂರ್ಣಗೊಂಡಿದೆ. ಜಿಲ್ಲೆಯಲ್ಲಿ (೨೦೦೦-೨೦೦೧ ನೇ ಸಾಲಿನವರೆಗೆ) ಮಂಜೂರಾದ ಮನೆಗಳ ತಾಲೂಕುವಾರು ವಿವರಗಳನ್ನು ಕೋಷ್ಟಕ ೪.೨೦ರಲ್ಲಿ ನೀಡಿದೆ.

**ಕೋಷ್ಟಕ ೪.೨೦ ಮೀನುಗಾರರಿಗೆ ಮಂಜೂರಾದ ಮನೆಗಳು**

| ತಾಲೂಕು | ಕೇಂದ್ರ ಪುರಸ್ಕೃತ ಯೋಜನೆಯಡಿ ಮಂಜೂರಾದ ಮನೆಗಳು | ಹುಡ್ಕೋ ನೆರವಿನ ಮತ್ಸ್ಯ ಆಶ್ರಯ ಯೋಜನೆಯಡಿ ಮಂಜೂರಾದ ಮನೆಗಳು | ಒಟ್ಟು |
|---|---|---|---|
| ಶ್ರೀರಂಗಪಟ್ಟಣ | ೧೫೦ | ೬೫ | ೨೧೫ |
| ಮದ್ದೂರು | ೧೦೦ | ೧೦೦ | ೨೦೦ |
| ಮಂಡ್ಯ | ೨೦ | ೫೦ | ೭೦ |
| ನಾಗಮಂಗಲ | - | ೨೫ | ೨೫ |
| ಮಳವಳ್ಳಿ | ೨೦ | ೩೦ | ೫೦ |
| ಕೃಷ್ಣರಾಜಪೇಟೆ | - | ೧೦ | ೧೦ |
| ಪಾಂಡವಪುರ | ೫೦ | - | ೫೦ |
| **ಒಟ್ಟು** | **೩೪೦** | **೨೮೦** | **೬೨೦** |

ಜಿಲ್ಲೆಯಲ್ಲಿ ಉತ್ಪಾದಿಸಲಾದ ಮೀನಿನ ಪ್ರಮಾಣ ಕೆಳಕಂಡಂತಿದೆ.

**ಕೋಷ್ಟಕ ೪.೨೧ ಜಿಲ್ಲೆಯ ಮೀನು ಉತ್ಪಾದನೆಯ (ಮೆಟ್ರಿಕ್ ಟನ್ನುಗಳಲ್ಲಿ) ತಾಲೂಕುವಾರು ವಿವರ**

| ತಾಲೂಕು | ೧೯೯೫-೯೬ | ೧೯೯೬-೯೭ | ೧೯೯೭-೯೮ | ೧೯೯೮-೯೯ |
|---|---|---|---|---|
| ಮಂಡ್ಯ | ೨೫೨ | ೨೪೯ | ೭೨೫ | ೧,೧೧೯ |
| ಮದ್ದೂರು | ೪೮೧ | ೪೭೫ | ೮೩೩ | ೮೪೮ |
| ಮಳವಳ್ಳಿ | ೮೯೯ | ೮೫೦ | ೧,೨೧೫ | ೧,೩೭೧ |
| ಕೃಷ್ಣರಾಜಪೇಟೆ | ೨೬೮ | ೨೬೮ | ೬೫೪ | ೧,೩೩೬ |
| ನಾಗಮಂಗಲ | ೧,೧೬೦ | ೧,೧೬೦ | ೧,೬೭೫ | ೨,೨೩೪ |
| ಪಾಂಡವಪುರ | ೪೭೬ | ೪೭೬ | ೧,೮೩೫ | ೧,೧೭೯ |
| ಶ್ರೀರಂಗಪಟ್ಟಣ (ಕೃಷ್ಣರಾಜಸಾಗರ ಮೀನು ಉತ್ಪನ್ನವೂ ಸೇರದಂತೆ) | ೨,೨೬೨ | ೨,೧೫೩ | ೩,೪೮೦ | ೧,೮೨೫ |
| **ಒಟ್ಟು** | **೫,೭೯೮** | **೫,೬೩೧** | **೧೦,೪೧೭** | **೯,೯೧೨** |

**ಮೀನುಮರಿ ಉತ್ಪಾದನೆ :** ಜಿಲ್ಲೆಯ ಮಂಡ್ಯ ತಾಲೂಕಿನಲ್ಲಿರುವ ಬೂದನೂರು ಮೀನು ಉತ್ಪಾದನಾ ಕೇಂದ್ರವು ಮೀನು ಕೃಷಿಕರ ಅಭಿವೃದ್ಧಿ ಸಂಸ್ಥೆಯಡಿ ಕಾರ್ಯನಿರ್ವಹಿಸುತ್ತಿದೆ. ಈ ಉತ್ಪಾದನಾ ಕೇಂದ್ರದ ಒಟ್ಟು ವಿಸ್ತೀರ್ಣ ೧೧.೬ ಹೆಕ್ಟೇರುಗಳಿದ್ದು ಒಟ್ಟು ನೀರಿನ ವಿಸ್ತೀರ್ಣ ೦.೯೮ ಹೆ.ಗಳಾಗಿವೆ. ನಾಲ್ಕು ತಳಿ ಮೀನು ದಾಸ್ತಾನು ಕೊಳಗಳು, ೧೮ ಮೀನುಮರಿ ಪಾಲನಾ ಕೊಳಗಳು ಎರಡು ಮಣ್ಣಿನ ಕೊಳಗಳು ಹಾಗೂ ಒಂದು ವಸತಿ ಕೇಂದ್ರವಿದೆ. ಮಂಡ್ಯ ತಾಲೂಕಿನ ಗೋಪಾಲಪುರದ ಶ್ರೀ ವಿಶ್ವೇಶ್ವರಯ್ಯ ಮೀನು ಉತ್ಪಾದನಾ ಕೇಂದ್ರದಲ್ಲಿ ೧೧ ಸಿಮೆಂಟ್ ಕೊಳಗಳು ಹಾಗೂ ೩೨ ಮಣ್ಣಿನ ಕೊಳಗಳಿವೆ. ಜಿಲ್ಲೆಯ ತಾಲೂಕುವಾರು ಮೀನುಮರಿ ಪಾಲನಾ ಕೇಂದ್ರಗಳ ವಿವರಗಳನ್ನು ಕೋಷ್ಟಕ ೪.೨೨ರಲ್ಲಿ ನೀಡಿದೆ.

**ಕೋಷ್ಟಕ ೪.೨೨ ಮೀನುಮರಿ ಪಾಲನಾ ಕೇಂದ್ರಗಳ ವಿವರ**

| ತಾಲೂಕು | ಪಾಲನಾ ಕೇಂದ್ರ | ವಿಸ್ತೀರ್ಣ | ಕೊಳಗಳ ಸಂಖ್ಯೆ |
|---|---|---|---|
| ಮಳವಳ್ಳಿ | ಮಳವಳ್ಳಿ | ೦.೪೦ | ೪ |
| ಮದ್ದೂರು | ಮದ್ದೂರು | ೦.೧೦ | ೧ |
| ಪಾಂಡವಪುರ | ಪಾಂಡವಪುರ | ೦.೧೦ | ೪ |
| ನಾಗಮಂಗಲ | ನಾಗಮಂಗಲ | ೦.೧೪ | ೭ |
| ಕೃಷ್ಣರಾಜಪೇಟೆ | ಹೇಮಗಿರಿ | ೦.೪೦ | ೬ |
| ಶ್ರೀರಂಗಪಟ್ಟಣ | ಕೃಷ್ಣರಾಜಸಾಗರ | ೧.೩೦ | ೧೪ |

ಕೃಷ್ಣರಾಜಸಾಗರದ ಮತ್ಸ್ಯಾಲಯದ ಕಟ್ಟಡದ ಕೆಲಸ ಪೂರ್ಣಗೊಂಡಿದ್ದು,ಒಳಾಂಗಣ ಅಲಂಕಾರಿಕ ಕೆಲಸ ಪೂರ್ಣವಾಗಬೇಕಿದೆ.

**ಮೀನು ಕೃಷಿಕರ ಅಭಿವೃದ್ಧಿ ಸಂಸ್ಥೆ.:** ಮೀನು ಕೃಷಿಕರ ಅಭಿವೃದ್ಧಿ ಸಂಸ್ಥೆಯನ್ನು ಮಂಡ್ಯದಲ್ಲಿ ೧೯೮೫-೮೬ರಲ್ಲಿ ಸ್ಥಾಪಿಸಲಾಗಿದ್ದು, ರಾಜ್ಯ ಹಾಗೂ ಕೇಂದ್ರ ಸರ್ಕಾರಗಳ ಅನುದಾನದಿಂದ ಸಂಸ್ಥೆಯ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಸಂಸ್ಥೆಯ ಕಾರ್ಯಚಟುವಟಿಕೆಗಳನ್ನು ಯಶಸ್ವಿಯಾಗಿ ನಡೆಸಿಕೊಂಡು ಹೋಗಲು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ಆಡಳಿತ ಮಂಡಳಿಯನ್ನು ಸರ್ಕಾರವು ರಚಿಸಿದೆ. ಜಿಲ್ಲೆಯ ಗ್ರಾಮೀಣ ಪ್ರದೇಶದ ನಿರುದ್ಯೋಗಿ ಯುವಕರಿಗೆ ಮೀನುಗಾರಿಕೆಯಲ್ಲಿ ತರಬೇತಿ ನೀಡಿ, ಮೀನು ಕೃಷಿಗೆ ಸೂಕ್ತವಾದ ಸಣ್ಣಕೆರೆಗಳನ್ನು ದೀರ್ಘಾವಧಿಗೆ ಗುತ್ತಿಗೆಗೆ ನೀಡಿ ಮೀನು ಪಾಲನೆಗೆ ಒಳಪಡಿಸಿ, ಸ್ವಯಂ ಉದ್ಯೋಗ ಅವಕಾಶ ಕಲ್ಪಿಸಿಕೊಟ್ಟು ಆರ್ಥಿಕಾಭಿವೃದ್ಧಿಪಡಿಸುವುದರ ಜೊತೆಗೆ ಜಿಲ್ಲೆಯಲ್ಲಿರುವ ಎಲ್ಲಾ ಜಲಸಂಪನ್ಮೂಲಗಳನ್ನು ಸದುಪಯೋಗಪಡಿಸಿಕೊಂಡು ಹೆಚ್ಚು ಮೀನು ಉತ್ಪಾದನೆ ಮಾಡುವುದು ಈ ಸಂಸ್ಥೆಯ ಉದ್ದೇಶವಾಗಿದೆ. ಸಂಸ್ಥೆಯ ಕಾರ್ಯಕ್ರಮಗಳ ಪ್ರಗತಿ ವರದಿಯನ್ನು ಕೋಷ್ಟಕ ೪.೨೩ರಲ್ಲಿ ನೀಡಿದೆ.

**ಕೋಷ್ಟಕ ೪.೨೩ ಮೀನು ಕೃಷಿಕರ ಅಭಿವೃದ್ಧಿ ಸಂಸ್ಥೆಯ ಪ್ರಗತಿ**

| ವಿವರ | ಘಟಕ | ೧೯೯೫-೯೬ | ೧೯೯೭-೯೮ | ೧೯೯೯-೨೦೦೦ |
|---|---|---|---|---|
| ತರಬೇತಿ | ಸಂಖ್ಯೆ | ೧೧೬ | ೯೧ | ೭೨ |
| ಗುತ್ತಿಗೆಗೆ ನೀಡಲಾದ ಕೆರೆಗಳು | ಸಂಖ್ಯೆ | ೬೩ | ೫೨ | ೫೦ |
| ಮೀನು ಕೃಷಿಗೆ ಒಳಪಡಿಸಿದ ಕೆರೆಗಳು | ಸಂಖ್ಯೆ | ೮೬ | ೮೪ | ೭೮ |
| ಮೀನು ಕೆರೆಗಳ ಜಲ ವಿಸ್ತೀರ್ಣ | ಹೆಕ್ಟೇರುಗಳಲ್ಲಿ | ೨೩೭ | ೧೮೯ | ೧೭೨ |
| ಮೀನು ಮರಿ ಉತ್ಪಾದನೆ | ಲಕ್ಷಗಳಲ್ಲಿ | ೧೮ | ೫ | ೧೧ |
| ಮೀನು ಮರಿ ದಾಸ್ತಾನು | ಲಕ್ಷಗಳಲ್ಲಿ | ೯.೫ | ೯.೬ | ೮.೮ |
| ಮೀನು ಉತ್ಪಾದನೆ | ಮೆಟ್ರಿಕ್ ಟನ್‌ಗಳಲ್ಲಿ | ೨೯೫ | ೨೬೫ | ೨೧೦ |
| ಸರಾಸರಿ ಮೀನು ಉತ್ಪಾದನೆ | ಕೆ.ಜಿ./ಹೆಕ್ಟೇರಿಗೆ | ೧,೪೧೦ | ೧,೪೫೦ | ೧,೩೨೦ |
| ಸಹಾಯಧನ ಬಿಡುಗಡೆ | ಲಕ್ಷ ರೂಗಳಿಗೆ | ೪೨.೩ | ೫೩.೫ | ೩೨.೫ |

ಮೀನು ಮಾರಾಟ ಮಾಡಲು ಮದ್ದೂರಿನಲ್ಲಿ ಮೀನು ಮಾರುಕಟ್ಟೆಯನ್ನು ಸ್ಥಾಪಿಸಲಾಗಿದೆ. ವಿವಿಧ ತಾಲೂಕುಗಳಲ್ಲಿ ಇಲಾಖಾವತಿಯಿಂದ ಖಾಸಗಿಯವರಿಗೆ ೧೩ ಮೀನು ಮಾರಾಟ ಮಳಿಗೆಗಳಿಗೆ ಪರವಾನಗಿ ನೀಡಲಾಗಿದೆ. ಜಿಲ್ಲೆಯಲ್ಲಿ ಮೀನುಗಾರಿಕೆ ಇಲಾಖೆಯು ಕೆಲವು ಬಾಬಿನಡಿಯಲ್ಲಿ ಪಡೆದ ಆದಾಯದ ವಿವರಗಳು ಕೆಳಕಂಡಂತಿವೆ.

**ಕೋಷ್ಟಕ ೪.೨೪ ಮೀನುಗಾರಿಕೆಯಿಂದ ಪಡೆದ ಆದಾಯ**

ಆದಾಯ (ಸಾವಿರ ರೂ.ಗಳಲ್ಲಿ)

| ಶೀರ್ಷಿಕೆ | ೧೯೯೫-೯೬ | ೧೯೯೬-೯೭ | ೧೯೯೭-೯೮ | ೧೯೯೮-೯೯ | ೧೯೯೯-೨೦೦೦ |
|---|---|---|---|---|---|
| ಬಾಡಿಗೆ | ೩೮೮.೮ | ೪೬೩.೪ | ೯೭೧.೬ | ೧೩೯೪.೮ | ೧೨೬೦.೪ |
| ಪರವಾನಗಿ ಶುಲ್ಕ | ೭.೫ | ೨.೯ | ೭.೯ | ೩.೯ | ೦.೫ |
| ಜಲಾಶಯ ಮೀನುಗಾರಿಕೆ ಅಭಿವೃದ್ಧಿ | | | | | |
| ಘಟಕಗಳಿಂದ ಬಂದ ಆದಾಯ | ೨೨೧.೧ | ೨೨೪.೬ | ೧೦೮.೭ | ೪೧೦.೫ | ೧೩೪.೮ |
| ಮೀನುಮರಿ ಮಾರಾಟ | ೩೨೨.೯ | ೩೧೩೬.೫ | ೮೫೪.೫ | ೯೧೬.೫ | ೭೬೫.೯ |

## ಪಶುಸಂಗೋಪನೆ ಮತ್ತು ಪಶುವೈದ್ಯ ಸೇವೆಗಳು

ಪಶುಸಂಪತ್ತನ್ನು ರೈತನ ಬೆನ್ನೆಲುಬು ಎಂದು ಪರಿಗಣಿಸಲಾಗಿದೆ. ರೈತರಿಗೆ ಆರ್ಥಿಕವಾಗಿ ಹಾಗೂ ವ್ಯವಸಾಯದ ವಿವಿಧ ಕೆಲಸಗಳಿಗೆ ಜಾನುವಾರುಗಳು ಅತ್ಯಾವಶ್ಯಕ. ಹಾಲಿಗಾಗಿ ಹಸು ಮತ್ತು ಎಮ್ಮೆಗಳು; ಮೊಟ್ಟೆ ಮತ್ತು ಮಾಂಸಕ್ಕಾಗಿ ಕೋಳಿ; ಉಣ್ಣೆ ಮತ್ತು ಮಾಂಸಕ್ಕಾಗಿ ಕುರಿ; ಮೇಕೆ, ಹಂದಿ ಮತ್ತು ಮೊಲ ಮುಂತಾದ ಪ್ರಾಣಿಗಳನ್ನು ಸಾಕಲಾಗುತ್ತದೆ. ಪಶುಸಂಗೋಪನೆಯು ವ್ಯವಸಾಯದ ಜೊತೆಯಲ್ಲಿಯೇ ಅವ್ಯಾಹತವಾಗಿ ಸಾಗುತ್ತಾ ಬಂದಿದೆ. ಮಂಡ್ಯ ಜಿಲ್ಲೆಯಲ್ಲಿ ೧೯೯೭ರ ತಾತ್ಕಾಲಿಕ ಜಾನುವಾರು ಗಣತಿ ಅಂಕಿಅಂಶಗಳ ಪ್ರಕಾರ ೨,೭೦,೮೨೭ ದೇಶೀ, ೨೨,೯೩ ವಿದೇಶಿ ಹಾಗೂ ೪೭,೮೩೦ ಮಿಶ್ರ ದನ ಹಾಗೂ ೨,೧೨,೯೭೯ ಎಮ್ಮೆಗಳೂ ಇವೆ. ಜಿಲ್ಲೆಯಲ್ಲಿ ಹಳ್ಳಿಕಾರ್ ತಳಿ ಪ್ರಸಿದ್ಧವಾಗಿದೆ. ಹಳ್ಳಿಕಾರ್ ತಳಿ ದನವು ವ್ಯವಸಾಯಕ್ಕೆ ಯೋಗ್ಯವಾದ ತಳಿಯಾಗಿದೆ. ಈ ತಳಿ ಮಂಡ್ಯ ಜಿಲ್ಲೆಯಲ್ಲಲ್ಲದೇ ನೆರೆಯ ಹಾಸನ, ತುಮಕೂರು, ಬೆಂಗಳೂರು ಹಾಗೂ ಮೈಸೂರು ಜಿಲ್ಲೆಗಳಲ್ಲೂ ಹರಡಿದೆ. ಎತ್ತರವಾಗಿ ಹಾಗೂ ಸಧೃಢವಾಗಿ ಬೆಳೆಯುವ ಈ ಎತ್ತರದ ತಳಿ, ನೇರವಾದ ನೀಳವಾಗಿರುವ ಕೊಂಬುಗಳು, ಕಂದು ಅಥವಾ ಮೈಲ(ಬೂದಿ) ಬಣ್ಣದವಾಗಿದ್ದು, ಕತ್ತಿನ ಕೆಳಭಾಗ ಹಾಗೂ ಕಣ್ಣಿನ ಸುತ್ತ ಅಲ್ಲಲ್ಲಿ ಹರಡಿರುವ ಬಿಳಿಯ ಮಚ್ಚೆಗಳು, ಪ್ರಧಾನವಾದ ಗೋಪುರ, ಉದ್ದವಾದ ಹಾಗೂ ದೃಢವಾದ ಶರೀರ, ಬಲಯುತವಾದ ತೊಡೆಗಳು, ಹಿಂಗಾಲಿನ ಸುಮಾರು ಮುಕ್ಕಾಲು ಭಾಗದವರೆಗೂ ಬೆಳೆದಿರುವ ಬಾಲ ಈ ತಳಿಯ ಪ್ರಮುಖ ಲಕ್ಷಣಗಳಾಗಿವೆ. ಅಲ್ಲದೆ ಇದರ ಚುರುಕಾದ ಕಣ್ಣು ಮತ್ತು ನಿಟ್ಟಿನಿಂದ ಕೂಡಿದ ಲಕ್ಷಣಗಳು ಗಮನಾರ್ಹವಾಗಿವೆ. ಇವು ಬಹಳ ತಡವಾಗಿ ಬೆದೆಗೆ ಬರುತ್ತವೆ. ಕರುಗಳನ್ನು ಹಾಕುವ ಅಂತರವೂ ಹೆಚ್ಚು. ಹಾಗೆಯೇ ಈ ಹಸುಗಳು ಕಡಿಮೆ ಹಾಲು ಕೊಡುತ್ತಿದ್ದರೂ ವ್ಯವಸಾಯಕ್ಕೆ ಯೋಗ್ಯವಾದ ಕರುಗಳನ್ನು ಒದಗಿಸುವ ದೃಷ್ಟಿಯಿಂದ ಸಾಕಣೆ ಮಾಡುವುದು ಅವಶ್ಯಕವಾಗಿದೆ.

ಜಿಲ್ಲೆಯಲ್ಲಿ ವ್ಯವಸಾಯಕ್ಕೆ ಯೋಗ್ಯವಾದ ಹಳ್ಳಿಕಾರ್ ತಳಿಯನ್ನು ಅಭಿವೃದ್ಧಿಪಡಿಸುವುದರ ಜೊತೆಗೆ ಸ್ಥಳೀಯ ಹಸುಗಳನ್ನು ಮಿಶ್ರ ತಳಿಗಳನ್ನಾಗಿ ಪರಿವರ್ತಿಸಿ ಹೆಚ್ಚು ಹಾಲನ್ನು ಉತ್ಪಾದಿಸುವ ತಳಿಗಳನ್ನು ಅಭಿವೃದ್ಧಿಪಡಿಸಬೇಕಾಗಿದೆ. ಜಿಲ್ಲೆಯಲ್ಲಿ ವ್ಯವಸಾಯಕ್ಕೆ ಎತ್ತುಗಳೇ ಆಧಾರವಾಗಿರುವುದರಿಂದ ವ್ಯವಸಾಯಕ್ಕೆ ಯೋಗ್ಯವಾದ ಹಳ್ಳಿಕಾರ್ ತಳಿಯನ್ನು ಸಂರಕ್ಷಿಸಿ, ಶುದ್ಧ ಹಳ್ಳಿಕಾರ್ ತಳಿಯ ಕರುಗಳನ್ನು ಪಡೆಯಲಾಗುತ್ತಿದ್ದು, ಗಂಡು ಕರುಗಳು ವ್ಯವಸಾಯಕ್ಕೆ

ಉಪಯೋಗವಾಗುತ್ತವೆ. ಹೆಣ್ಣು ಕರುಗಳು ಬೆಳೆದ ನಂತರ ಸಂತಾನ ಅಭಿವೃದ್ಧಿಗೆ ಅನುಕೂಲವಾಗುತ್ತವೆ. ಹಳ್ಳಿಕಾರ್ ಬೀಜದ ಹೋರಿಗಳ ಕೊರತೆ ಈಗ ಕಂಡುಬರುತ್ತಿದೆ. ಹಳ್ಳಿಗಳಲ್ಲಿ ಹಿಂದೆ ಸಾಕಷ್ಟು ಸಂಖ್ಯೆಗಳಲ್ಲಿ ಬೀಜದ ಹೋರಿಗಳನ್ನು ಸಾಕುತ್ತಿದ್ದರು. ಆದರೆ ಈಗ ಹಿಂದಿನ ಹಾಗೆ ಸಾಕುವವರ ಸಂಖ್ಯೆ ಕಡಿಮೆಯಾಗುತ್ತಿದೆ. ಜಾನುವಾರು ಜಾತ್ರೆಗಳಲ್ಲಿಯೂ ಉತ್ತಮ ರೀತಿಯ ಹಳ್ಳಿಕಾರ್ ಬೀಜದ ಹೋರಿಗಳು ಈಗ ಕಾಣಸಿಗುತ್ತಿಲ್ಲ. ಈ ತಳಿ ನಶಿಸಿಹೋಗದಂತೆ ಸಂರಕ್ಷಿಸಬೇಕಾದದ್ದು ಅತ್ಯಂತ ಅವಶ್ಯಕವಾಗಿದೆ.

ಹಳ್ಳಿಕಾರ್ ತಳಿ ಮತ್ತು ಸ್ಥಳೀಯ ತಳಿಗಳಲ್ಲಿ ಹಾಲಿನ ಉತ್ಪಾದನೆ ಕಡಿಮೆ. ಹೆಚ್ಚು ಹಾಲು ಉತ್ಪಾದನೆ ಮತ್ತು ಆರ್ಥಿಕ ಅಭಿವೃದ್ಧಿಗಾಗಿ ಮಿಶ್ರ ತಳಿಗಳನ್ನು ಹೆಚ್ಚು ಅಭಿವೃದ್ಧಿ ಪಡಿಸಬೇಕು. ರೈತರು ತಮ್ಮಲ್ಲಿರುವ ಸ್ಥಳೀಯ ಹಸುಗಳಿಗೆ (ದೇಶೀಯ) ವಿದೇಶಿ ಹೋರಿಗಳ ವೀರ್ಯದಿಂದ ಕೃತಕ ಗರ್ಭಧಾರಣೆ ಮಾಡಿಸಿದಲ್ಲಿ ಹುಟ್ಟುವ ಕರುಗಳು ಮಿಶ್ರತಳಿ ಕರುಗಳಾಗುತ್ತವೆ. ಹೆಣ್ಣು ಕರುಗಳನ್ನು ಚೆನ್ನಾಗಿ ಪೋಷಣೆ ಮಾಡಿದ್ದಲ್ಲಿ ಉತ್ತಮ ಹಾಲುಕೊಡುವ ಹಸುಗಳಾಗುತ್ತವೆ. ಗಂಡು ಕರುಗಳನ್ನು ಚೆನ್ನಾಗಿ ಸಾಕಿದಲ್ಲಿ ನಿಧಾನವಾದರೂ, ವ್ಯವಸಾಯಕ್ಕೆ ಉಪಯೋಗಕರವಾದ ತಳಿಯು ದೊರಕಿದಂತಾಗುತ್ತದೆ. ಈ ಮಿಶ್ರತಳಿ ಉತ್ಪಾದನಾ ಪದ್ಧತಿಯಿಂದ ಕಡಿಮೆ ದರ್ಜೆಯ ದೇಶೀಯ ಅಥವಾ ಸ್ಥಳೀಯ ಹಸುಗಳ ಸಂತಾನವನ್ನು ಹಂತಹಂತವಾಗಿ ಉತ್ತಮಪಡಿಸಿಕೊಳ್ಳಬಹುದು ಮತ್ತು ಅವುಗಳಿಂದ ಹೆಚ್ಚು ಹಾಲು ಉತ್ಪಾದನೆ ಪಡೆಯಬಹುದು. ಇದಕ್ಕೆ ಪೂರಕವಾದ ಕಾರ್ಯಕ್ರಮಗಳು ಜಿಲ್ಲೆಯಲ್ಲಿ ಜಾರಿಯಲ್ಲಿದ್ದು, ಹೆಚ್ಚು ಮಿಶ್ರತಳಿ ಹಸುಗಳನ್ನು ಅಭಿವೃದ್ದಿಪಡಿಸಲು ಕ್ರಮಕೈಗೊಳ್ಳಲಾಗಿದೆ. ಪಶುಪಾಲನಾ ಇಲಾಖೆ ಮತ್ತು ಮಂಡ್ಯ ಸಹಕಾರ ಹಾಲು ಉತ್ಪಾದಕರ ಸಹಕಾರ ಸಂಘಗಳಲ್ಲಿ ಕೃತಕ ಗರ್ಭಧಾರಣಾ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಸ್ಥಳೀಯ ಹಸುಗಳು ಬೆದೆಗೆ ಬಂದಾಗ ಜರ್ಸಿ ಅಥವಾ ಹೆಚ್.ಎಫ್ ವಿದೇಶಿ ಹೋರಿಗಳ ವೀರ್ಯವನ್ನು ಈ ಹಸುಗಳಿಗೆ ಕೃತಕ ಗರ್ಭಧಾರಣೆ ಮಾಡಲಾಗುವುದು.

ರಾಜ್ಯದಲ್ಲಿರುವ ಐದು ವೀರ್ಯಕೇಂದ್ರಗಳಲ್ಲಿ ಅಭಿವೃದ್ಧಿ ಪಡಿಸಲಾಗುತ್ತಿರುವ ಹೋರಿಗಳಿಂದ ಪ್ರತೀ ವರ್ಷ ೩೫ ಲಕ್ಷ ಘನೀಕೃತ ವೀರ್ಯ ನಳಿಕೆಗಳನ್ನು ಉತ್ಪಾದಿಸಲಾಗುತ್ತಿದೆ. ಜಿಲ್ಲೆಯಲ್ಲಿರುವ ವಿವಿಧ ರೀತಿಯ ಪಶುವೈದ್ಯಕೀಯ ಸಂಸ್ಥೆಗಳಲ್ಲಿ ಕೃತಕ ಗರ್ಭಧಾರಣಾ ಕಾರ್ಯಕ್ರಮವನ್ನು ನಡೆಸಲಾಗುತ್ತಿದೆ. ಭಾರ ಎಳೆಯುವ ಸಾಮರ್ಥ್ಯವುಳ್ಳ ತಳಿಗಳಾದ ಹಳ್ಳಿಕಾರ್, ಅಮೃತ ಮಹಲ್, ಖಿಲ್ಲಾರಿ ಮತ್ತು ಡಿಯೋನಿಗಳ ವೀರ್ಯವನ್ನು ವ್ಯವಸಾಯ ಯೋಗ್ಯ ತಳಿಗಳ ಅಭಿವೃದ್ದಿಗಾಗಿ ಬೆಳೆಸಲು ಉಪಯೋಗಿಸಲಾಗುತ್ತಿದೆ. ಮಿಶ್ರತಳಿಗಳ ಮೂಲಕ ಹಾಲಿನ ಉತ್ಪಾದನೆಯನ್ನು ಹೆಚ್ಚಿಸುವ ಸಲುವಾಗಿ ವಿಶಿಷ್ಟ ಗುಣಸಾರದ ತಳಿಗಳಾದ ಹೆಚ್ ಎಫ್ ಮತ್ತು ಜೆರ್ಸಿ ತಳಿಗಳ ವೀರ್ಯವನ್ನು ಉಪಯೋಗಿಸಲಾಗುತ್ತಿದೆ. ಈ ವೀರ್ಯವನ್ನು ಮುರ್ರಾ ಮತ್ತು ಸುರ್ತಿ ತಳಿಗಳಿಗೆ ಸೇರಿದ ಎಮ್ಮೆಗಳಲ್ಲಿನ ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚಿಸುವ ಸಲುವಾಗಿಯೂ ಬಳಸಲಾಗುತ್ತಿದೆ.

ರಾಜ್ಯ ಪಶುಪಾಲನಾ ಇಲಾಖೆಯಡಿ ಹನ್ನೊಂದು ಜಾನುವಾರು ಕ್ಷೇತ್ರಗಳು ಜಿಲ್ಲೆಯಲ್ಲಿ ಕಾರ್ಯ ನಿರ್ವಹಿಸುತ್ತಿವೆ. ಕೆಲವು ಕ್ಷೇತ್ರಗಳಲ್ಲಿ ಉತ್ತಮ ಗುಣಮಟ್ಟದ ಜರ್ಮಪ್ಲಾಸ್ಮಾ ಉತ್ಪಾದನೆ, ಮೇವಿನ ಬೆಳೆಗಳ ಬೀಜ ಉತ್ಪಾದನೆ ಹಾಗೂ ರೈತರಿಗೆ ತರಬೇತಿ ನೀಡಲಾಗುತ್ತಿದೆ. ಈ ಕ್ಷೇತ್ರಗಳಲ್ಲಿ ಸುಧಾರಿತ ಹೈನುಗಾರಿಕೆಯ ಬಗ್ಗೆ ರೈತರಿಗೆ ಮತ್ತು ಫಲಾನುಭವಿಗಳಿಗೆ ತರಬೇತಿ ನೀಡುವುದು, ಸುಧಾರಿತ ಮೇವಿನ ಬೆಳೆಗಳ ಬೀಜಗಳನ್ನು ಮತ್ತು ಮೇವಿನ ಬೇರುಗಳನ್ನು ಒದಗಿಸುವುದು, ಘನೀಕೃತ ವೀರ್ಯ ಉತ್ಪಾದನೆ ಮತ್ತು ಪಶುವೈದ್ಯಕೀಯ ಸಂಸ್ಥೆಗಳಿಗೆ ವೀರ್ಯವನ್ನು ಒದಗಿಸುವುದು, ಮೊಲ ಸಾಕಾಣಿಕೆಯ ಮಹತ್ವದ ಬಗ್ಗೆ ಅಧ್ಯಯನ ನಡೆಸುವುದು. ತಳಿ ಅಭಿವೃದ್ಧಿಗಾಗಿ ಸುರ್ತಿ ಕೋಣ ಹಾಗೂ ದನಕರುಗಳನ್ನು ರೂಢಿಸುವುದೇ ಮುಂತಾದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

**ಕುರಿ ಅಭಿವೃದ್ಧಿ:** ಜಿಲ್ಲೆಯಲ್ಲಿ ೩,೫೫,೦೦೭ ದೇಶಿ ಹಾಗೂ ೧೨,೩೭೯ ಮಿಶ್ರತಳಿ ಕುರಿಗಳಿವೆ. ಜಿಲ್ಲೆಯ ಮಳವಳ್ಳಿ, ಮದ್ದೂರು, ಮಂಡ್ಯ ತಾಲೂಕುಗಳಲ್ಲಿ ಬಂಡೂರು ಕುರಿ ತಳಿಯೇ ಹೆಚ್ಚಿನ ಸಂಖ್ಯೆಯಲ್ಲಿದ್ದರೆ ಉಳಿದ ತಾಲೂಕುಗಳಲ್ಲಿ ಬಂಡೂರು ಮತ್ತು ಇತರೇ ತಳಿಯ ಕುರಿಗಳಿವೆ. ಇತ್ತೀಚಿಗೆ ಗೋಮಾಳಗಳು ಕಡಿಮೆ ಆಗುತ್ತಿರುವುದರಿಂದಲೂ ಕುರಿ ಸಂತಾನ ಅಭಿವೃದ್ದಿಗಿಂತ ಕುರಿಯ ಮಾಂಸದ ಬೇಡಿಕೆ ಹೆಚ್ಚಾಗಿರುವುದರಿಂದಲೂ ಕುರಿಗಳ ಸಂಖ್ಯೆ ಗಣನೀಯವಾಗಿ ಇಳಿಮುಖವಾಗುತ್ತಿದ್ದು, ಮಾಂಸ ಮತ್ತು ಉಣ್ಣೆಗೆ ಹೆಚ್ಚು ಬೇಡಿಕೆಯಿರುವುದರಿಂದ ಕುರಿ ಉತ್ಪಾದನೆಗೆ ಹೆಚ್ಚು ಗಮನ ಕೊಡಬೇಕಾಗಿದೆ. ಕುರಿಯ ಗೊಬ್ಬರವೂ ಶ್ರೇಷ್ಠವಾಗಿರುವುದರಿಂದ ರೈತರು ಕುರಿ ಸಾಕಾಣಿಕೆ ಬಿಡದೆ ಹೆಚ್ಚಿನ ಸಂಖ್ಯೆಯಲ್ಲಿ ಕುರಿಗಳನ್ನು ಸಾಕಬೇಕಿದೆ. 'ಕುರಿಯಿದ್ದವನು ಕುಬೇರ' ಎಂಬ ನಾಣ್ ನುಡಿಯಿದೆ. ಅದರಂತೆ ಕುರಿ ಸಾಕಿದಲ್ಲಿ ಹೆಚ್ಚು ಆದಾಯ ಬರುವುದರಿಂದ ಕುರಿ ಸಾಕಾಣಿಕೆ ವೃದ್ಧಿಗೊಳ್ಳಬೇಕು. ಬೇಸಿಗೆಯಲ್ಲಿ ವಲಸೆ ಕುರಿಗಳು ಮಂಡ್ಯ ಜಿಲ್ಲೆಗೆ ಬರುವುದು ಹೆಚ್ಚು. ನೀರಾವರಿ ಪ್ರದೇಶಕ್ಕೆ ವಲಸೆ ಬಂದು ಗದ್ದೆಗಳಲ್ಲಿ ಬೀಡು ಬಿಡುತ್ತವೆ. ಇದರಿದಾಗಿ ಕುರಿಗಳಿಗೆ ಗದ್ದೆಗಳಲ್ಲಿರುವ ಚಿಗುರು ಮೇವಾಗುತ್ತದೆ. ಮತ್ತು ಗದ್ದೆಗಳಿಗೆ ಗೊಬ್ಬರವಾಗುತ್ತದೆ. ಮಿಗಿಲಾಗಿ ಕುರಿ ಮಾಲಿಕರಿಗೆ ಹೆಚ್ಚಿನ ಆದಾಯ ಲಭಿಸುತ್ತದೆ.

ಮಾಂಸದ ಬೇಡಿಕೆ ಏರಿರುವುದರಿಂದ ಹಾಗೂ ಅದಕ್ಕೆ ಅನುಗುಣವಾಗಿ ಉತ್ಪಾದನೆ ಇಲ್ಲದಿರುವುದರಿಂದ, ಮಾಂಸದ ಅಧಿಕ ಉತ್ಪಾದನೆಗಾಗಿ ಹೆಚ್ಚು ಕುರಿಗಳನ್ನು ಸಾಕಬೇಕಾಗಿದೆ. ಗೋಮಾಳದ ಸಂಖ್ಯೆ ಕಡಿಮೆಯಾಗುತ್ತಿದ್ದರೂ, ವ್ಯವಸಾಯ ಜಮೀನಿನಲ್ಲಿಯೇ ಸುಧಾರಿತ ಹುಲ್ಲು ಬೆಳೆದು ಕುರಿಗಳನ್ನು ಸಾಕಬಹುದು. ಇದಕ್ಕಾಗಿ ಮಿಶ್ರ ತಳಿಯ ಬೀಜದ ಟಗರುಗಳನ್ನು ಜಿಲ್ಲೆಯಲ್ಲಿ ಒದಗಿಸಲಾಗುತ್ತಿದೆ. ಮೇಕೆಗಳಿಗೆ ಗಿಡ ಮರಗಳ ಎಲೆಯೇ ಮುಖ್ಯ ಆಹಾರ. ಮೇಕೆಗಳಿದ್ದಲ್ಲಿ ಗಿಡಮರಗಳು ನಾಶ ಎಂಬ ಪ್ರತೀತಿಯಿದೆ. ಹಾಗಾಗಿ ಮೇಕೆ ಸಾಕಾಣಿಕೆಗೆ ಹೆಚ್ಚು ಪ್ರೋತ್ಸಾಹ ಸಿಗುತ್ತಿಲ್ಲ. ಕಾಡಿರುವ ಪ್ರದೇಶಗಳಲ್ಲಿ ಮೇಕೆಗಳ ಸಂಖ್ಯೆ ಹೆಚ್ಚಿರುತ್ತದೆ. ಮಾಂಸಕ್ಕೆ ಮೇಕೆಗಳ ಅವಶ್ಯಕತೆ ಇರುವುದರಿಂದ ಮೇಕೆಗಳ ಸಂತಾನವೂ ಹೆಚ್ಚಬೇಕು. ಅಲ್ಲದೆ ಮೇಕೆಗಳಿಗೆ ರೋಗ ನಿರೋಧಕ ಶಕ್ತಿ ಹೆಚ್ಚಿದ್ದು, ಎಂತಹ ವಾತಾವರಣದಲ್ಲಿಯೂ ಬದುಕಬಲ್ಲವಾದ್ದರಿಂದ ಅವುಗಳ ಸಾಕಾಣಿಕೆ ಸುಲಭ.

**ಹಂದಿ ಸಾಕಾಣಿಕೆ :** ಆರ್ಥಿಕ ಅಭಿವೃದ್ಧಿಗೆ ಹಂದಿ ಸಾಕಾಣಿಕೆಯೂ ಒಂದು ಉದ್ಯೋಗವಾಗಿದೆ. ಇತ್ತೀಚಿಗೆ ವೈಜ್ಞಾನಿಕ ರೀತಿಯಲ್ಲಿ ಹಂದಿ ಸಾಕಾಣಿಕೆಯನ್ನು ಕೈಗೊಳ್ಳಲು ಹೆಚ್ಚಿನ ಸಂಖ್ಯೆಯಲ್ಲಿ ರೈತರು ಮತ್ತು ವಿದ್ಯಾವಂತ ನಿರುದ್ಯೋಗಿಗಳೂ ಮುಂದೆ ಬರುತ್ತಿದ್ದಾರೆ. ವಿದೇಶಿ ಹಂದಿ ತಳಿಗಳನ್ನು ಸಾಕುವುದರಿಂದ ಹೆಚ್ಚು ಉತ್ಪಾದನೆಗೆ ಅವಕಾಶವಿದೆ. ಹಂದಿಗಳಿಂದ ಮೆದುಳು ರೋಗ ಹರಡುತ್ತದೆಯೆಂಬ ಪ್ರತೀತಿ ಇರುವುದರಿಂದ ಅದರ ಸಾಕಾಣಿಕೆಗೆ ಹೆಚ್ಚಿನ ಪ್ರೋತ್ಸಾಹ ಸಿಗುತ್ತಿಲ್ಲ. ನಗರ ಪ್ರದೇಶಗಳಲ್ಲಿ ಇದರ ಸಾಗಾಣಿಕೆಗೆ ನಿಷೇಧ ಹೇರಿರುವುದರಿಂದ ಜಿಲ್ಲೆಯಲ್ಲಿ ಹಂದಿ ಸಾಕಾಣಿಕೆ ಆಶಾದಾಯಕವಾಗಿಲ್ಲ.

**ಮೊಲ ಸಾಕಾಣಿಕೆ :** ಮಾಂಸ ಮತ್ತು ಉಣ್ಣೆಗಾಗಿ ಮೊಲ ಸಾಕಾಣಿಕೆಯನ್ನು ಈಗ ಕೈಗೆತ್ತಿಕೊಳ್ಳಲಾಗುತ್ತಿದೆ. ಮೊಲದ ಮರಿಗಳನ್ನು ಉತ್ಪಾದಿಸಿ ರೈತರಿಗೆ ವಿತರಿಸುವ ಕಾರ್ಯಕ್ರಮವನ್ನು ಜಿಲ್ಲಾ ಪರಿಷತ್ತಿನಿಂದ ಹಮ್ಮಿಕೊಂಡು ಮಳವಳ್ಳಿಯಲ್ಲಿ ಮೊಲಸಾಕಾಣಿಕೆ ಕೇಂದ್ರವನ್ನು ಪ್ರಾರಂಭಿಸಲಾಗಿದೆ. ನ್ಯೂಜಿಲೆಂಡ್‌ವೈಟ್, ಕ್ಯಾಲಿಫೋರ್ನಿಯಾವೈಟ್, ಗ್ರೇಜಂಟ್ ಮತ್ತು ಚಿಂಚಿಲ್ಲಾ ತಳಿಗಳನ್ನು ಸಾಕಲಾಗುತ್ತಿದೆ,

**ಕೋಳಿ ಸಾಕಾಣಿಕೆ :** ಮಾಂಸಕ್ಕಾಗಿ ಸಾಕುವ ಪ್ರಾಣಿಗಳಲ್ಲಿ ಕುರಿ ಮತ್ತು ಮೇಕೆಗಳನ್ನು ಬಿಟ್ಟರೆ ಕೋಳಿಗಳು ಮುಖ್ಯವಾಗಿವೆ. ಕುಕ್ಕುಟ ಅಭಿವೃದ್ಧಿಯ ಕಾರ್ಯಚಟುವಟಿಕೆಗಳಲ್ಲಿ ೧. ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಸಹಯೋಗದಿಂದ ಪಡೆದ ಗಿರಿರಾಜ ಮಾತೃಕೋಳಿಗಳನ್ನು ವೈಜ್ಞಾನಿಕ ರೀತಿಯ ಸಾಕಾಣಿಕೆ ಮತ್ತು ಸಂವರ್ಧನೆ ೨. ಕೋಳಿಮರಿಗಳನ್ನು ಉತ್ಪಾದಿಸಿ ಅವುಗಳನ್ನು ರೈತರಿಗೆ ಮತ್ತು ಇಲಾಖೆಯ ಸಾಕಾಣೆ ಕ್ಷೇತ್ರಗಳಿಗೆ ಸರಬರಾಜು

ಮಾಡುವುದು. ೩. ಗಿರಿರಾಜ ಮರಿಗಳನ್ನು ಎಂಟು ವಾರಗಳವರೆಗೆ ಸಾಕಿ ವಿವಿಧ ಆರ್ಥಿಕ-ಸಾಮಾಜಿಕ ಯೋಜನೆಗಳಡಿ ಸಾಕಲು ಫಲಾನುಭವಿಗಳಿಗೆ ನೀಡುವುದು. ೪. ಆಸಕ್ತ ರೈತರಿಗೆ ಆಧುನಿಕ ಮೊಟ್ಟೆ ಕೋಳಿ ಸಾಕಾಣಿಕೆ ಮತ್ತು ಮಾಂಸದ ಕೋಳಿಗಳ ಸಾಕಾಣಿಕೆಯ ಬಗ್ಗೆ ತರಬೇತಿ ನೀಡುವುದು ಹಾಗೂ ೫. ಖಾಸಗಿ ಮತ್ತು ಸರ್ಕಾರಿ ಸ್ವಾಮ್ಯದಲ್ಲಿ ಉತ್ಪಾದಿಸಲಾಗುತ್ತಿರುವ ಜಾನುವಾರು ಮತ್ತು ಕುಕ್ಕುಟ ಆಹಾರದ ಗುಣಮಟ್ಟವನ್ನು ಕಾಪಾಡಿಕೊಂಡು ಹೋಗಲು ನಿಗಾ ಇಡುವುದು ಮುಖ್ಯವಾಗಿವೆ.

ಜಿಲ್ಲೆಯ ಮಳವಳ್ಳಿಯಲ್ಲಿ ಪ್ರಾದೇಶಿಕ ಕೋಳಿ ಸಾಕಾಣಿಕೆ ಕೇಂದ್ರವಿದ್ದು ಮೊಟ್ಟೆ ಕೋಳಿ ತಳಿಯ ಮರಿಗಳನ್ನು ಫಲಾನುಭವಿಗಳಿಗೆ ವಿತರಿಸಲಾಗುತ್ತದೆ. ಜಿಲ್ಲೆಯಲ್ಲಿ ಮೊಟ್ಟೆ ಉತ್ಪಾದನಾ ಕೋಳಿಗಳ ೬೨ ಘಟಕಗಳಿವೆ. ಅಲ್ಲದೆ ೧೮೪ ಮಾಂಸ ಉತ್ಪಾದನಾ ಘಟಕಗಳಿವೆ. ಖಾಸಗಿ ಮರಿ ಉತ್ಪಾದನಾ ಸಂಸ್ಥೆಗಳಿಂದ ಮಾಂಸ ಉತ್ಪಾದನಾ ಮರಿಗಳನ್ನು ತಂದು ಎಂಟು ವಾರಗಳವರೆಗೆ ಸಾಕಿ ಆನಂತರ ಮಾಂಸಕ್ಕಾಗಿ ಮಾರಾಟ ಮಾಡಲಾಗುತ್ತದೆ. ಗಿರಿರಾಜ ಎಂಬ ಕೋಳಿ ಸ್ಥಳೀಯ ಕೋಳಿ ತಳಿಗಿಂತಲೂ ಉತ್ತಮವಿದ್ದು, ಅದಕ್ಕಿಂತ ಹೆಚ್ಚು ಮೊಟ್ಟೆ ಮತ್ತು ಮಾಂಸವನ್ನು ನೀಡುತ್ತದೆ. ಇದು ವರ್ಷಕ್ಕೆ ೧೪೦ ರಿಂದ ೧೫೦ ಮೊಟ್ಟೆಗಳನ್ನು ಕೊಡುತ್ತಿದ್ದು, ಸರಾಸರಿ ೪.೫ ಕಿ.ಗ್ರಾಂ. ತೂಗುತ್ತದೆ. ಈ ತಳಿಗಳಿಗೆ ಇತ್ತೀಚಿಗೆ ಬೇಡಿಕೆ ಹೆಚ್ಚುತ್ತಿದ್ದು, ಪ್ರಾದೇಶಿಕ ಕೋಳಿ ಸಾಕಾಣಿಕೆ ಕೇಂದ್ರದಿಂದ ಮರಿಗಳನ್ನು ವಿತರಿಸಲಾಗುತ್ತಿದೆ.

**ಸಮಗ್ರ ಮಾದರಿ ಸಮೀಕ್ಷೆ:** ಜಿಲ್ಲೆಯಲ್ಲಿ ಪ್ರಮುಖ ಜಾನುವಾರು ಉತ್ಪನ್ನಗಳಾದ ಹಾಲು, ಮೊಟ್ಟೆ, ಉಣ್ಣೆ ಮತ್ತು ಮಾಂಸದ ಉತ್ಪಾದನೆಯನ್ನು ಅಂದಾಜು ಮಾಡುವುದು ಸಮಗ್ರ ಮಾದರಿ ಸಮೀಕ್ಷೆಯ ಉದ್ದೇಶವಾಗಿದೆ. ಸಾರ್ವಜನಿಕ ಪೌಷ್ಟಿಕತೆಯನ್ನು ಪೂರೈಸುವಲ್ಲಿ ಜಾನುವಾರು ಉತ್ಪನ್ನಗಳು ಪ್ರಮುಖ ಪಾತ್ರ ವಹಿಸುತ್ತವೆ. ಅಲ್ಲದೇ ಯೋಜನೆಯ ಕಾರ್ಯಕ್ರಮಗಳನ್ನು ರೂಪಿಸುವಲ್ಲಿ ಬಹುಮುಖ್ಯ ಪಾತ್ರ ವಹಿಸಿ ಆರ್ಥಿಕ ಮಟ್ಟದ ಸ್ಥಿತಿಗತಿಗಳನ್ನು ತಿಳಿಸುವ ಸೂಚಿಗಳೆಂದೂ ಪರಿಗಣಿಸಲಾಗಿದೆ. ಜಾನುವಾರು ಉತ್ಪನ್ನಗಳ ಏರಿಳಿತವನ್ನು ಅಧ್ಯಯನ ಮಾಡುವ ಸಲುವಾಗಿ ಸಮೀಕ್ಷಾ ಕಾರ್ಯಕ್ರಮವನ್ನು ಮೂರು ಋತುಗಳಲ್ಲಿ ಕೈಗೊಳ್ಳಲಾಗುತ್ತದೆ. ೧೯೯೮-೯೯ನೇ ಸಾಲಿನಲ್ಲಿ ಕೈಗೊಂಡ ಸಮೀಕ್ಷೆಯ ಫಲಿತಾಂಶ ಕೆಳಕಂಡಂತಿದೆ.

೧. ಹಾಲು ಉತ್ಪಾದನೆ- ಹಸುಗಳಿಂದ ೧೨೫ ಸಾವಿರ ಟನ್ನುಗಳು, ಎಮ್ಮೆಗಳಿಂದ ೯೮ ಸಾವಿರ ಟನ್ನುಗಳು.

೨. ದೇಶಿಯ ಮೊಟ್ಟೆ ಉತ್ಪಾದನೆ ೪೫೦ ಲಕ್ಷ, ಉತ್ತಮಗೊಳಿಸಿದ ಮೊಟ್ಟೆ ಉತ್ಪಾದನೆ ೧೬೬ ಲಕ್ಷ.

೩. ಮಾಂಸ ಉತ್ಪಾದನೆ- ದನಗಳಿಂದ ೪೫೩ ಟನ್ನುಗಳು, ಎಮ್ಮೆಗಳಿಂದ ೬೫೦ ಟನ್ನುಗಳು, ಮೇಕೆಗಳಿಂದ ೧,೮೫೯ ಟನ್ನುಗಳು, ಕುರಿಗಳಿಂದ ೧,೪೦೧ ಟನ್ನುಗಳು, ಹಂದಿಗಳಿಂದ ೩೦೯ ಟನ್ನುಗಳು.

ಹಾಲು ಮತ್ತು ಹಾಲಿನ ಉತ್ಪನ್ನಗಳ ಮೇಲೆ ನಿಯಂತ್ರಣ ತರಲು ದೇಶದಾದ್ಯಂತ ಅನ್ವಯವಾಗುವಂತೆ ಹಾಲು ಮತ್ತು ಹಾಲು ಉತ್ಪನ್ನಗಳ ಕುರಿತ ೧೯೯೨ರ ಆದೇಶವನ್ನು ಅನುಷ್ಠಾನಕ್ಕೆ ತರಲಾಗಿದೆ. ಅದರನ್ವಯ ಪ್ರತೀದಿನ ೧೦ ಸಾವಿರ ಲೀಟರ್ ಹಾಲು ಅಥವಾ ವಾರ್ಷಿಕ ೫೦೦ ಮೆಟ್ರಿಕ್ ಟನ್ನುಗಳಷ್ಟು ಹಾಲಿನ ಉತ್ಪಾದನೆಗಿಂತ ಅಧಿಕ ಕಾರ್ಯ ಚಟುವಟಿಕೆಯಲ್ಲಿ ತೊಡಗಿರುವ ಯಾವುದೇ ಘಟಕ ಅಥವಾ ವ್ಯಕ್ತಿಗಳು ರಾಜ್ಯ ಅಥವಾ ಕೇಂದ್ರ ನೋಂದಣಿ ಅಧಿಕಾರಿಗಳಿಂದ ಕಡ್ಡಾಯವಾಗಿ ನೋಂದಣಿ ದೃಢೀಕರಣ ಪತ್ರವನ್ನು ಪಡೆಯಬೇಕೆಂದು ನಿಗದಿಪಡಿಸಲಾಗಿದೆ.

**ಪಶು ವೈದ್ಯಕೀಯ ಸೇವೆಗಳು :** ಜಿಲ್ಲೆಯಲ್ಲಿ ೧೯೪ ಪಶುವೈದ್ಯಕೀಯ ಸಂಸ್ಥೆಗಳ ಮೂಲಕ ಜಾನುವಾರುಗಳ ಆರೋಗ್ಯ ಸಂರಕ್ಷಣಾ ಕಾರ್ಯವನ್ನು ನಿರ್ವಹಿಸಲಾಗುತ್ತಿದ್ದು, ಅವುಗಳಲ್ಲಿ ೨೧ ಪಶುವೈದ್ಯಕೀಯ ಆಸ್ಪತ್ರೆಗಳು, ೬೪ ಪಶು ಚಿಕಿತ್ಸಾಲಯಗಳು ಮತ್ತು ೮೮ ಪ್ರಾಥಮಿಕ ಪಶುವೈದ್ಯ ಕೇಂದ್ರಗಳೂ ಸೇರಿವೆ. ಈ ಎಲ್ಲಾ ಸಂಸ್ಥೆಗಳು

ರಾಷ್ಟ್ರೀಯ ಕೃಷಿ ಆಯೋಗದ ಶಿಫಾರಸ್ಸು ಮಾಡಿರುವಂತೆ ಇದ್ದು, ಅವುಗಳ ಜೊತೆಗೆ ಏಳು ಸಂಚಾರಿ ಪಶುಚಿಕಿತ್ಸಾಲಯಗಳು ಮತ್ತು ನಾಲ್ಕು ಕೃತಕ ಗರ್ಭಧಾರಣಾ ಕೇಂದ್ರಗಳು ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿವೆ.

ಸಾಂಕ್ರಾಮಿಕ ಮತ್ತು ಸೋಂಕು ರೋಗಗಳಾದ, ಕಾಲು-ಬಾಯಿ ಜ್ವರ, ಗಳಲೇ ರೋಗ, ಚಪ್ಪೆರೋಗ, ಗಂಟಲುಬೇನೆ, ಕುರಿ ಸಿಡಿಬು, ಮುಂತಾದ ರೋಗಗಳ ವಿರುದ್ಧ ಕ್ರಮಬದ್ಧವಾಗಿ ಪದೇ ಪದೇ ರೋಗಗಳು ಕಾಣಿಸಿಕೊಳ್ಳುವ ಪ್ರದೇಶಗಳಲ್ಲಿ ಜಾನುವಾರುಗಳಿಗೆ ಲಸಿಕೆಗಳನ್ನು ನೀಡುವುದರ ಮೂಲಕ ನಿಯಂತ್ರಣಗೊಳಿಸಲಾಗುತ್ತಿದೆ. ಈ ರೋಗಗಳ ತಡೆ ಮತ್ತು ನಿಯಂತ್ರಣಕ್ಕೆ ಬೇಕಾದ ಚುಚ್ಚು ಮದ್ದುಗಳನ್ನು ಹೆಬ್ಬಾಳದ ಪಶು ಆರೋಗ್ಯ ಹಾಗೂ ಜೈವಿಕ ಸಂಸ್ಥೆಯಿಂದ ಪಡೆಯಲಾಗುತ್ತದೆ. ದನಗಳಿಗೆ ಬರುವ ದೊಡ್ಡರೋಗ ಕಾಯಿಲೆಯ ಮೇಲೆ ಜಿಲ್ಲೆಯಲ್ಲಿ ಸಂಪೂರ್ಣ ಹತೋಟಿಯನ್ನು ಸಾಧಿಸಲಾಗಿದೆ.

ಜಿಲ್ಲೆಯಲ್ಲಿ (೧೯೯೭-೯೮ ರ ಸಾಲಿನಲ್ಲಿ) ಪಶುವೈದ್ಯ ಸೇವಾ ಸಂಸ್ಥೆಗಳಲ್ಲಿ ಚಿಕಿತ್ಸೆ ನೀಡಿದ ಜಾನುವಾರುಗಳ ಸಂಖ್ಯೆ ಈ ರೀತಿಯಿದೆ. ೩,೧೬,೫೮೭ ಹಸುಗಳು, ೧,೭೪,೩೫೨ ಎಮ್ಮೆಗಳು, ೨,೨೬,೦೦೧ ಕುರಿಗಳು, ೮೭,೮೧೯ ಮೇಕೆಗಳು, ೭,೩೨೧ ಹಂದಿಗಳು, ೭,೩೭೫ ನಾಯಿಗಳು, ೬,೭೭೮ ಕುಕ್ಕುಟಗಳು, ಇತರೇ ಜಾನುವಾರುಗಳು ೮,೭೫೨, ಹೀಗೆ ಒಟ್ಟು ಜಾನುವಾರುಗಳು ೭,೭೪,೯೭೫. ಜಿಲ್ಲೆಯಲ್ಲಿ ೨೦೦೦-೨೦೦೧ನೇ ಸಾಲಿನಲ್ಲಿ ಪಶುವೈದ್ಯ ಆಸ್ಪತ್ರೆ ಮತ್ತು ಪಶುವೈದ್ಯ ಚಿಕಿತ್ಸಾಲಯಗಳಲ್ಲಿ ಚಿಕಿತ್ಸೆ ನೀಡಿದ ಪ್ರಾಣಿಗಳ ಸಂಖ್ಯೆ ಈ ರೀತಿಯಿದೆ. ೧) ಹಸುಗಳು- ೨೭,೮೧೯ ೨) ಎಮ್ಮೆಗಳು- ೩,೯೯೪ ೩) ಕುರಿಗಳು-೪೮,೫೧೪ ೪) ಮೇಕೆಗಳು-೧,೦೫,೯೭೫ ೫) ಹಂದಿಗಳು- ೭,೨೩೪ ೬) ನಾಯಿಗಳು- ೧೬,೩೯೨ ೭) ಕುಕ್ಕುಟಗಳು-೮,೦೪೭ ೮) ಇತರೆ ಪ್ರಾಣಿಗಳು- ೪,೮೮೫ ಮತ್ತು ವಿವಿಧ ರೋಗಗಳಿಗಾಗಿ ನೀಡಿದ ಲಸಿಕೆಗಳ ವಿವರ ಕೆಳಕಂಡಂತಿದೆ. ೧) ಕಾಲುಬಾಯಿಜ್ವರ-೧,೩೯,೭೯೮ ೨) ನಾಯಿಹುಚ್ಚು-೭ ೩) ಕುರಿ ಮತ್ತು ಮೇಕೆ ಮೈಲಿ- ೧೬,೦೪೬ ೪) ಕೊಕ್ಕರೆ ರೋಗ-೫,೬೪,೩೬೦ ೫) ಕೋಳಿ ಮೈಲಿ- ೭೬೨ ೬) ಗಳಲೆ ರೋಗ- ೧೯,೯೭೬ ೭) ಚಪ್ಪೆ ರೋಗ- ೧೨,೪೦೬ ಮತ್ತು ೮)ಕರುಳುಬೇನೆ- ೪೭,೮೬೭. ಕೃತಕ ಗರ್ಭಧಾರಣೆ ಮಾಡಿದ ಜಾನುವಾರುಗಳ ಸಂಖ್ಯೆ ಈ ರೀತಿಯಿದೆ. ೧) ಹಸುಗಳು-೮೫,೦೬೯ ಮತ್ತು ೨) ಎಮ್ಮೆಗಳು-೨೫,೮೩೫.

**ಕೋಷ್ಟಕ ೪.೨೫ ಜಿಲ್ಲೆಯಲ್ಲಿ ಗಣತಿವಾರು ೧೯೫೧ ರಿಂದ ೧೯೯೭ರವರೆಗೆ ಜಾನುವಾರುಗಳ ವಿವರ (ಅಂಕಿಗಳು ಸಾವಿರಗಳಲ್ಲಿ)**

| ವಿವರ | ೧೯೫೧ | ೧೯೫೬ | ೧೯೬೧ | ೧೯೬೬ | ೧೯೭೨ | ೧೯೭೭ | ೧೯೮೩ | ೧೯೯೦ | ೧೯೯೭ |
|---|---|---|---|---|---|---|---|---|---|
| ದನ | ೩೯೯.೯ | ೩೧೭.೬ | ೩೪೯.೧ | ೩೭೯.೮ | ೩೫೫.೬ | ೩೬೨.೪ | ೪೧೧.೧ | ೩೫೭.೦ | ೩೪೨.೬ |
| ಎಮ್ಮೆ | ೧೧೪.೨ | ೧೧೬.೫ | ೧೫೬.೩ | ೧೫೬.೫ | ೧೫೫.೮ | ೧೬೭.೬ | ೧೯೬.೭ | ೨೨೨.೭ | ೧೯೧.೯ |
| ಕುರಿ | ೩೭೨.೪ | ೩೪೨.೦ | ೪೨೧.೫ | ೩೯೬.೪ | ೩೭೨.೫ | ೩೭೨.೧ | ೩೩೩.೪ | ೩೪೦.೯ | ೩೬೩.೦ |
| ಮೇಕೆ | ೧೬೭.೧ | ೧೩೧.೩ | ೧೪೪.೧ | ೧೩೮.೯ | ೧೫೦.೮ | ೧೪೬.೧ | ೨೧೧.೬ | ೧೮೩.೪ | ೨೩೩.೩ |
| ಹಂದಿ | ೩.೫ | ೫.೨ | ೫.೮ | ೫.೯ | ೬.೪ | ೭.೧ | ೮.೧ | ೯.೧ | ೧೧.೫ |
| ಇತರೆ ಪ್ರಾಣಿಗಳು | ೬.೭ | ೪.೩ | ೪.೨ | ೫.೪ | ೨.೨ | ೨.೯ | ೪೬.೪ | ೫೯.೭ | ೫೪.೬ |
| ಒಟ್ಟು ಜಾನುವಾರುಗಳು | ೧೦೦೬.೬ | ೯೧೬೭.೯ | ೧೦೮೧.೧ | ೧೦೮೨.೯ | ೧೦೪೩.೪ | ೧೦೫೮.೧ | ೧೨೦೭.೪ | ೧೧೭೨.೮ | ೧೧೯೬.೯ |
| ಒಟ್ಟು ಕುಕ್ಕುಟಗಳು | ೪೧೯.೪ | ೫೨೧.೨ | ೬೨೪.೫ | ೫೭೧.೧ | ೬೭೭.೦ | ೬೯೯.೮ | ೬೯೯.೮ | ೬೧೬.೩ | ೯೩೨.೯ |

## ಕೋಷ್ಟಕ ೪.೨೬ ಜಿಲ್ಲೆಯಲ್ಲಿ ಜರುಗುವ ದನಗಳ ಜಾತ್ರೆಗಳ ವಿವರ

| ಜಾತ್ರೆಯ ಹೆಸರು | ಸ್ಥಳ | ಹೋಬಳಿ | ತಾಲೂಕು | ಜಾತ್ರೆಯ ಅವಧಿ ದಿನಗಳಲ್ಲಿ | ಜಾತ್ರೆ ಸಮಯದಲ್ಲಿ ಸೇರುವ ದನಗಳ ಅಂದಾಜು ಸಂಖ್ಯೆ | ಪ್ರಾರಂಭವಾಗುವ ದಿನ |
|---|---|---|---|---|---|---|
| ಕಾಡಬಸವೇಶ್ವರ ಸ್ವಾಮಿ | ಬೆಳ್ಳಂಡಗೆರೆ | ಮಂಡ್ಯ | ಮಂಡ್ಯ | ೫ | ೪,೦೦೦ | ಡಿಸೆಂಬರ್ ಕೊನೆ ಸೋಮವಾರ |
| ವೆಂಕಟರಮಣ ಸ್ವಾಮಿ | ಕರಿಘಟ್ಟ | ಶ್ರೀರಂಗಪಟ್ಟಣ | ಶ್ರೀರಂಗಪಟ್ಟಣ | ೭ | ೩೦೦ | ಮಾಘ ಬಹುಳ ಬಿದಿಗೆ |
| ಜನಾರ್ಧನ ಸ್ವಾಮಿ | ಬಿಂಡಿಗನವಿಲೆ | ಬಿಂಡಿಗನವಿಲೆ | ನಾಗಮಂಗಲ | ೭ | ೧,೦೦೦ | ಡಿಸೆಂಬರ್ ೨ನೇ ವಾರ |
| ಗಂಗಾಧರೇಶ್ವರ ಸ್ವಾಮಿ | ಆದಿಚುಂಚನಗಿರಿ | ದೇವಲಪುರ | ನಾಗಮಂಗಲ | ೧೦ | ೧೨,೦೦೦ | ಮಾಘ ಶುದ್ಧ ಪೌರ್ಣಿಮೆ |
| ವೆಂಕಟರಮಣ ಸ್ವಾಮಿ | ಹೇಮಗಿರಿ | ಅಕ್ಕಿಹೆಬ್ಬಾಳ | ಕೃಷ್ಣರಾಜಪೇಟೆ | ೧೦ | ೧೦,೦೦೦ | ಪಾಲ್ಗುಣ ಶುದ್ಧ ಪೂರ್ಣಿಮೆ |
| ವೆಂಕಟರಮಣ ಸ್ವಾಮಿ | ಹೇಮಗಿರಿ | ಅಕ್ಕಿಹೆಬ್ಬಾಳ | ಕೃಷ್ಣರಾಜಪೇಟೆ | ೧೨ | ೬೦,೦೦೦ | ಮಾಘಶುದ್ಧ ಸಪ್ತಮಿ |
| ನರಸಿಂಹ ಸ್ವಾಮಿ | ಮದ್ದೂರು | ಮದ್ದೂರು | ಮದ್ದೂರು | ೭ | ೨೦,೦೦೦ | ವೈಶಾಖ ಬಹುಳಪಂಚಮಿ |
| ನಂದಿ ಬಸವೇಶ್ವರ ಸ್ವಾಮಿ | ಚಿಕ್ಕನಾಯ್ಕನಹಳ್ಳಿ | ಆತಗೂರು | ಮದ್ದೂರು | ೪ | ೫೦೦ | ಮಾಘ ಶುದ್ಧ ಪ್ರಥಮ |
| ಮಹದೇಶ್ವರ ಸ್ವಾಮಿ | ಬೇಬೀ | ಚಿನಕುರುಳಿ | ಪಾಂಡವಪುರ | ೩ | ೨೫,೦೦೦ | ಮಾಘ ಬಹುಳ ಅಮಾವಾಸ್ಯೆ |
| ಚಲುವರಾಯ ಸ್ವಾಮಿ | ಮೇಲುಕೋಟೆ | ಮೇಲುಕೋಟೆ | ಪಾಂಡವಪುರ | ೬ | ೧,೦೦೦ | ಚೈತ್ರ ಶುದ್ಧ ದಶಮಿ |

ಆಧಾರ : ಪಶುಪಾಲನೆ ಅಂಕಿಅಂಶ ಕೈಪಿಡಿ, ಪಶುಪಾಲನೆ ಮತ್ತು ಪಶುವೈದ್ಯ ಇಲಾಖೆ

## ಕೋಷ್ಟಕ ೪.೨೭ ಮಂಡ್ಯ ಜಿಲ್ಲೆಯ ಜಾನುವಾರು ಗಣತಿ–೧೯೯೭ ತಾಲೂಕುವಾರು

| ವಿವರ | ಕೃಷ್ಣರಾಜಪೇಟೆ | ಮದ್ದೂರು | ಮಳವಳ್ಳಿ | ಮಂಡ್ಯ | ನಾಗ ಮಂಗಲ | ಪಾಂಡವ ಪುರ | ಶ್ರೀರಂಗ ಪಟ್ಟಣ | ಒಟ್ಟು ಜಿಲ್ಲೆ |
|---|---|---|---|---|---|---|---|---|
| ೧ | ೨ | ೩ | ೪ | ೫ | ೬ | ೭ | ೮ | ೯ |
| ಹಸುಗಳು | | | | | | | | |
| ಸ್ಥಳೀಯ | ೫೬,೨೦೦ | ೩೮,೪೨೬ | ೪೮,೩೨೧ | ೪೦,೭೭೧ | ೪೩,೩೧೮ | ೨೮,೮೭೧ | ೧೮,೧೧೧ | ೨,೭೪,೦೧೮ |
| ವಿದೇಶಿ | ೨೫೩ | ೨,೬೯೪ | ೬,೭೦೬ | ೬,೯೭೦ | ೧,೦೪೬ | ೪೫೩ | ೨,೭೨೭ | ೨೦,೮೪೯ |
| ಮಿಶ್ರತಳಿ | ೭,೬೫೮ | ೮,೫೨೧ | ೨,೨೭೦ | ೧೧,೧೦೫ | ೪,೬೦೦ | ೫,೦೭೦ | ೮,೪೮೫ | ೪೭,೭೦೯ |
| ಒಟ್ಟು | ೬೪,೧೧೧ | ೪೯,೬೪೧ | ೫೭,೨೯೭ | ೫೮,೮೪೬ | ೪೮,೯೬೪ | ೩೪,೩೯೪ | ೨೯,೩೨೩ | ೩,೪೨,೫೭೬ |
| ಎಮ್ಮೆಗಳು | ೩೮,೦೭೬ | ೩೩,೦೬೧ | ೨೪,೮೩೧ | ೪೦,೬೬೩ | ೩೩,೦೩೦ | ೧೫,೫೦೮ | ೬,೭೫೦ | ೧,೯೧,೯೧೯ |
| ಕುರಿಗಳು | | | | | | | | |
| ಸ್ಥಳೀಯ | ೪೨,೬೦೬ | ೫೭,೩೩೯ | ೪೯,೨೬೭ | ೭೩,೦೦೮ | ೮೦,೭೩೦ | ೩೦,೯೦೫ | ೧೭,೭೮೩ | ೩,೫೧,೬೩೮ |
| ವಿದೇಶಿ | ೨೫ | ೧೮ | ೦ | ೪೮ | ೦ | ೦ | ೦ | ೯೧ |
| ಮಿಶ್ರತಳಿ | ೩,೫೬೫ | ೩,೨೦೫ | ೦ | ೧,೮೧೪ | ೬ | ೮೪೭ | ೧,೮೭೩ | ೧೧,೩೧೦ |
| ಒಟ್ಟು | ೪೬,೧೯೬ | ೬೦.೫೬೨ | ೪೯,೨೬೭ | ೭೪,೮೭೦ | ೮೦,೭೩೬ | ೩೧,೭೫೨ | ೧೯,೬೫೬ | ೩,೬೩,೦೩೯ |
| ಮೇಕೆಗಳು | ೨೨,೦೨೬ | ೩೮,೭೪೬ | ೪೬,೬೩೪ | ೪೮,೫೧೪ | ೪೨,೧೩೫ | ೨೦,೨೦೨ | ೧೫,೦೧೫ | ೨,೩೩,೨೭೨ |

| ೧ | ೨ | ೩ | ೪ | ೫ | ೬ | ೭ | ೮ | ೯ |
|---|---|---|---|---|---|---|---|---|
| ಹಂದಿಗಳು | | | | | | | | |
| ಸ್ಥಳೀಯ | ೬೩೫ | ೨,೬೧೫ | ೧,೧೨೭ | ೨,೪೦೮ | ೧,೦೫೬ | ೪೦೯ | ೧,೮೮೮ | ೧೦,೧೩೮ |
| ವಿದೇಶಿ | ೨ | ೩೪೭ | ೭೪ | ೨೫೧ | ೬ | ೦ | ೦ | ೬೮೦ |
| ಮಿಶ್ರತಳಿ | ೯೭ | ೩೧೦ | ೨೬ | ೧೩೦ | ೨೮ | ೪೦ | ೭೬ | ೭೦೭ |
| ಒಟ್ಟು | ೭೩೪ | ೩,೨೭೨ | ೧,೨೨೭ | ೨,೭೮೯ | ೧,೦೯೦ | ೪೪೯ | ೧,೯೬೪ | ೧೧,೫೨೫ |
| ಮೊಲಗಳು | ೧೭ | ೩೦ | ೫೬ | ೬೪ | ೨೦ | ೧೪ | ೧೪ | ೨೪೫ |
| ನಾಯಿಗಳು | ೧೦,೨೮೮ | ೭,೬೧೩ | ೮,೧೦೫ | ೧೧,೧೮೯ | ೬,೯೨೪ | ೫,೭೧೬ | ೪,೧೪೬ | ೫೩,೯೮೫ |
| ಕುದುರೆಗಳು | ೧೪ | ೨೨ | ೦ | ೫ | ೫ | ೧೬ | ೦ | ೬೨ |
| ಕತ್ತೆಗಳು | ೪ | ೭೭ | ೧೩ | ೪೫ | ೧೩೩ | ೨೭ | ೭೩ | ೩೭೨ |
| ಒಟ್ಟು ಜಾನುವಾರುಗಳು | ೧,೮೧,೪೬೬ | ೧,೯೩,೦೨೮ | ೧,೮೭,೪೩೦ | ೨,೩೭,೧೦೫ | ೨,೧೩,೦೩೭ | ೧,೦೮,೦೭೮ | ೭೬,೯೪೧ | ೧೧,೯೬,೯೫ |
| ಒಟ್ಟು ಕುಕ್ಕುಟಗಳು | ೧,೧೮,೫೫೨ | ೧,೫೮,೯೯೨ | ೨,೨೩,೯೫೬ | ೧,೬೦,೩೯೮, | ೧,೩೭,೯೩೬ | ೫೮,೦೩೨ | ೭೫,೧೧೯ | ೯,೩೨,೯೮೫ |

ಪಶುವೈದ್ಯ ಸೇವೆಗಳಿಗೆ ಸಂಬಂಧಿಸಿದಂತೆ ಜಾರಿಯಲ್ಲಿರುವ ಪ್ರಮುಖ ಕಾಯಿದೆಗಳು–

೧) ಕರ್ನಾಟಕ ಪ್ರಾಣಿ ವಧೆ ನಿಯಂತ್ರಣ ಕಾಯಿದೆ–೧೯೫೯

೨) ಅ) ಕರ್ನಾಟಕ ಪಶುವೈದ್ಯ ವೃತ್ತಿ ಜಾರಿ ಕಾಯಿದೆ–೧೯೬೩

ಆ) ಭಾರತೀಯ ಪಶುವೈದ್ಯ ಪರಿಷತ್ ಕಾಯಿದೆ–೧೯೮೪

೩) ಪ್ರಾಣಿಹಿಂಸೆ ನಿವಾರಣಾ ಕಾಯಿದೆ ೧೯೬೦

೪) ಪ್ರಾಣಿಗಳ ರೋಗ ನಿಯಂತ್ರಣಾ ಕಾಯಿದೆ ೧೯೬೧

೫) ಕರ್ನಾಟಕ ಜಾನುವಾರು ಅಭಿವೃದ್ಧಿ ಕಾಯಿದೆ ೧೯೬೧ ಮತ್ತು ಜಾನುವಾರು ಅಭಿವೃದ್ಧಿ ನಿಯಮಾವಳಿ ೧೯೬೯

೬) ಕರ್ನಾಟಕ ದನ ಅತಿಕ್ರಮ ಪ್ರವೇಶ ಕಾಯಿದೆ ೧೯೬೩

೭) ಕರ್ನಾಟಕ ಕುರಿ ಮತ್ತು ಕುರಿ ಉತ್ಪನ್ನಗಳ ಅಭಿವೃದ್ಧಿ ಕಾಯಿದೆ ೧೯೭೩

೮) ಕರ್ನಾಟಕ ಗೋಹತ್ಯೆ ನಿಷೇಧ ಮತ್ತು ಗೋ ಸಂರಕ್ಷಣಾ ಕಾಯಿದೆ ೧೯೬೪

೯) ಜಾನುವಾರು ಆಮದು ಕಾಯಿದೆ ೧೮೯೮, ತಿದ್ದುಪಡಿ ೧೯೫೩

೧೦) ಹಾಲು ಮತ್ತು ಹಾಲು ಉತ್ಪನ್ನಗಳ ಆದೇಶ ೧೯೯೨.